

ಗೌರಿ ಲಂಕೇಶರ
ಲಂಕೇಶ್

ಅಕ್ಟೋಬರ್ 25, 2006 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಮೋದನೆ






ರೌಡಿ ರಾಜ್ಯ!

ಮೊದಲ ಗೆಲುವು!

ಗುಲ್ಬರ್ಗಾ : ಖೋಟಾನೋಟು ಸ್ವಾಮೀಜಿ

ಬಳ್ಳಾರಿ: ಜೋಡಿ ರುಂಡ ಕಡಿದ ಬಿಜೆಪಿ ಮುಖಂಡ

ಬೆಂಗಳೂರು ಗನ್ ಮೇನಿಯಾ



ಜುಟ್ಟು ಕೈಯಲ್ಲೂ ಪಿಸ್ತೂಲ್

ನೀರು ಕುಡಿಸಕ್ಕೆ ಬಂದವರ ಬಳಿ ಸುಖದುಃಖ ಹೇಳಿಕೊಂಡಂತೆ..!




ಸುಂಕದವರ ಬಳಿ ಸುಖದುಃಖ ಹೇಳಿಕೊಂಡರೆ ಪ್ರಯೋಜನವಿಲ್ಲ ಎಂಬುದನ್ನು ನಮ್ಮ ಹಿರಿಯರು ಹೇಳುತ್ತಲೇ ಬಂದಿದ್ದಾರೆ. ಏಕೆಂದರೆ ಆ ಸುಂಕ ಸುಲಿಯುವವನಿಗೆ ಸುಖ ಹೇಳಿದರೂ ಸುಂಕ ಹಾಕುತ್ತಾನೆ. ದುಃಖ ಹೇಳಿಕೊಂಡರೆ ಅದಕ್ಕೂ ಸುಂಕ ಹಾಕುತ್ತಾನೆ. ಈಗ ನಮ್ಮ ಬೆಂಗಳೂರಿನ ಸ್ಲಂ ನಿವಾಸಿಗಳ ಪರಿಸ್ಥಿತಿ ಅದೇ ಆಗಿಬಿಟ್ಟಿದೆ. ಈಗ ಬೆಂಗಳೂರು ನಗರಿಗರಿಗೆ ಒಳ್ಳೆ ನೀರನ್ನು 24 ಗಂಟೆಯೂ ಕುಡಿಸಲೇ ಬೇಕೆಂದು ಕೆಲವು ವಿದೇಶಿ ಕಂಪನಿಗಳು ನಿರ್ಧರಿಸಿವೆ. ಆದ್ದರಿಂದಲೇ ಅವರು ಇದ್ದಕ್ಕಿದ್ದಂತೆ ಬೆಂಗಳೂರು ಜನತೆಯ ಕುಡಿಯುವ ನೀರಿನ ಸಮಸ್ಯೆಗಳ ಬಗ್ಗೆ ಕಣ್ಣೀರು ಹಾಕುತ್ತಿದ್ದಾರೆ. ಇದಕ್ಕೆ ಹಣ ಹಾಕುತ್ತಿರುವ ಅಮೆರಿಕದ ಸುಲಿಗೆಕೋರ ಸಂಸ್ಥೆಯೊಂದು ಬೆಂಗಳೂರಿನ ಲಕ್ಷ್ಮಣ್‌ರಾವ್ ನಗರ ಸ್ಲಂನಲ್ಲಿ ಅಲ್ಲಿನ ಬಡಜನ ತಿಂಗಳೊಂದಕ್ಕೆ 450ರೂ.ಗಳನ್ನು ಕುಡಿಯುವ ನೀರಿಗೆ ಖರ್ಚು ಮಾಡುತ್ತಾರೆ ಎಂಬ ಸತ್ಯವನ್ನು ಹುಡುಕಿಬಿಟ್ಟಿದೆ! ಆದರೆ ಸಿರಿವಂತರು ಕೂಡಾ ಬೆಂಗಳೂರಿನಲ್ಲಿ ಕಟ್ಟುವ ತಿಂಗಳ ಸರಾಸರಿ ನೀರಿನ ಬಿಲ್ಲು ಕೇವಲ 115ರೂ ಎಂದು ಹೇಳಿದೆ. ಹಾಗಿದ್ದಲಿ ನಮಗೆ ಸಹಜವಾಗಿ ಏನನಿಸಬೇಕು? ಪಾಪ ಸ್ಲಂ ನಿವಾಸಿಗಳಿಗೆ ಎಷ್ಟೊಂದು ಅನ್ಯಾಯವಾಗುತ್ತಿದೆ ಅವರಿಗೆ ಕನಿಷ್ಠ 115ರೂ. ಒಳಗೆ ನೀರು ಒದಗಿಸಬೇಕು ಅನ್ನಿಸಬೇಕು. ಆದರೆ ನಮಗೆ ನೀರು ಕುಡಿಸಲು ಕೂತಿರುವವರು ಇದರ ಬಗ್ಗೆ ತೆಗೆದುಕೊಂಡ ನಿರ್ಧಾರವೇ ಬೇರೆ..! ಬಡವರೇ ತಿಂಗಳಿಗೆ 450ರೂ. ಈಗಾಗಲೇ ತೆರುತ್ತಿರುವುದರಿಂದ ನೀರಿನ ಸುಂಕವನ್ನು ಮೂರು ಪಟ್ಟು ಹೆಚ್ಚಿಸಿದರೂ ಅದರಿಂದ ಬಡವರಿಗೆ ತೊಂದರೆಯಾಗುವುದಿಲ್ಲ ಎಂದು ಅವರು ನಿರ್ಧಾರಕ್ಕೆ ಬಂದಿದ್ದಾರೆ...! ಹೀಗಾಗಿ ನೀರಿನ ಬಳಕೆ ದರ ಹೆಚ್ಚಿಸಬಹುದೂ ಎಂದು ಅವರ ತೀರ್ಮಾನ.. ಆದ್ದರಿಂದಲೇ ಹೇಳಿದ್ದು..ನೀರು ಕುಡಿಸಕ್ಕೆ ಬಂದವರ ಬಳಿಯೂ ಸುಖದುಃಖ ಹೇಳಿಕೊಳ್ಳಬಾರದೂ ಎಂದು..

ಚಾರ್ವಾಕ

- ಶಿವಸುಂದರ್-

ಪಾಪಿ ನಿರ್ಮಾಪಕರು- ಕ್ರೂರಿ ವೀಕ್ಷಕರು..!




ಪಾಪ ಕನ್ನಡ ಸಿನಿಮಾ ನಿರ್ಮಾಪಕರನ್ನು ನೆನೆಸಿಕೊಂಡರೆ ಅಳಬೇಕೋ ನಗಬೇಕೋ ಗೊತ್ತಾಗುವುದಿಲ್ಲ, ಮೊನ್ನೆ ತೆಲುಗಿನ ಸ್ಟಾಲಿನ್ ಎಂಬ ಚಿರಂಜೀವಿ ಚಿತ್ರ ನಾಡಿನಾದ್ಯಂತ ರಿಲೀಸ್ ಆದದ್ದೇ ತಡ, ಕನ್ನಡ ನಿರ್ಮಾಪಕರೆಲ್ಲಾ ತಾವಿನ್ನು ಒಂದು ವರ್ಷ ಕಾಲ ಯಾವ ಸಿನಿಮಾವನ್ನು ತಯಾರಿಸುವುದಿಲ್ಲ ಎಂಬ ಅಭಾವ ವೈರಾಗ್ಯ ವ್ರತ ಹಿಡಿದುಬಿಟ್ಟರು. ಇದನ್ನು ಕಂಡು ಕನಿಕರಿಸಿದ ಪ್ರಜಾವಾಣಿ ಪತ್ರಿಕೆಯವರು ಈ ರೀತಿ ಕನ್ನಡ ಚಿತ್ರ ನಿರ್ಮಾಪಕರು ಚಿತ್ರ ತಯಾರಿಸುವುದಿಲ್ಲ ಎನ್ನುತ್ತಿದ್ದಾರೆ ನಿಮ್ಮ ಅಭಿಪ್ರಾಯವೇನು ಎಂದು ಓದುಗರನ್ನು ಕೇಳಿಬಿಟ್ಟರು. ಆದರೆ ಕನ್ನಡ ಚಿತ್ರ ವೀಕ್ಷಕ ಮಹಾಶಯರಿಗೆ ಕನ್ನಡ ನಿರ್ಮಾಪಕರ ಬಗ್ಗೆ ಏನು ಸಿಟ್ಟಿತ್ತೋ ಏನೋ ಗೊತ್ತಿಲ್ಲ. ಅಭಿಪ್ರಾಯ ಓದಿದ ನಿರ್ಮಾಪಕರು ಆತ್ಮಹತ್ಯೆ ಮಾಡಿಕೊಳ್ಳಬೇಕಾದ ಅಭಿಪ್ರಾಯ ಕಳಿಸಿದ್ದಾರೆ. ಅದರ ಕೆಲವು ಸ್ಯಾಂಪಲ್‌ಗಳು ಇಲ್ಲಿವೆ.



ಪ್ರಶ್ನೆ - ಕನ್ನಡ ಚಿತ್ರ ನಿರ್ಮಾಪಕರು ಇನ್ನು ಒಂದು ವರ್ಷ ಕನ್ನಡ ಚಿತ್ರ ತಯಾರಿಸುವುದಿಲ್ಲ ಎಂದಿದ್ದಾರೆ. ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು? ಕೆಲವು ಅಭಿಪ್ರಾಯಗಳು: "ಸ್ವಾಗತಾರ್ಹ ನಿರ್ಧಾರ", "ಇನ್ನು ನಿಶ್ಚಿಂತೆ", "ಕೂಡಲೇ ಜಾರಿಗೆ ಬರಲಿ", "ಕನ್ನಡಕ್ಕೆ ಅವರು ಮಾಡಬಹುದಾದ ಅತ್ಯಂತ ದೊಡ್ಡ ಸೇವೆ".


ಸಂಪಾದಕರ ಪ್ರಕಾರ ಬಂದ ಅಭಿಪ್ರಾಯಗಳಲ್ಲಿ ನೂರಕ್ಕೆ ತೊಂಬತ್ತೊಂಬತ್ತು ಬಾಗ ಇದೇ ಅಭಿಪ್ರಾಯ ಇಟ್ಟುಕೊಂಡವರಂತೆ. ನಮ್ಮ ನಿರ್ಮಾಪಕರು ಮತ್ತು ಕನ್ನಡ ಚಳವಳಿಗಾರರು ಈ ಅಭಿಪ್ರಾಯ ಇಟ್ಟುಕೊಂಡವರೆಲ್ಲಾ ತಮಿಳರು ಅಥವಾ ಎಂ.ಇ.ಎಸ್.ಗಳು ಎಂದು ಜರೆಯದೇ ಆತ್ಮವಿಮರ್ಶೆ ಮಾಡಿಕೊಂಡರೆ ಕನ್ನಡಕ್ಕೂ ಕ್ಷೇಮ. ಚಿತ್ರೋದ್ಯಮಕ್ಕೂ ಕ್ಷೇಮ. ಏಕೆಂದರೆ ಕನ್ನಡ ಜನರ ಸಾಂಸ್ಕೃತಿಕ ಏಕೀಕರಣದಲ್ಲಿ ಕನ್ನಡ ಚಿತ್ರೋದ್ಯಮದ್ದು ದೊಡ್ಡಪಾಲಿದೆ. ಅದು ಅವರಿಗೆ ಗೊತ್ತಿಲ್ಲದಂತೆ ಆಗಿರುವ ವಿದ್ಯಮಾನ. ಈಗ ಕನ್ನಡದ ಅನನ್ಯತೆಯೇ ಪ್ರಶ್ನೆಗೊಳಗಾಗಿರುವಾಗ ಕನ್ನಡದ ಚಿತ್ರಗಳ ಬಗ್ಗೆ ಕನ್ನಡ ವೀಕ್ಷಕರಿಗೆ ಇರುವ ಅಭಿಪ್ರಾಯ ಸಂತೋಷಪಡುವಂತದ್ದೇನೂ ಅಲ್ಲ, ಹಾಗೆಂದ ಮಾತ್ರಕ್ಕೆ ಕಡ್ಡಾಯ ಪ್ರದರ್ಶನ ಮಾಡಿ ಕನ್ನಡ ಚಿತ್ರ ನೋಡುವುದನ್ನು ಕಡ್ಡಾಯ ಮಾಡುವುದೂ ಇದಕ್ಕೆ ಉತ್ತರವಲ್ಲ. ಕನ್ನಡ ಚಿತ್ರ ನಿರ್ಮಾಪಕ ಆಶ್ರಯಿಸಬೇಕಾದ್ದು ಉತ್ತಮ ಅಭಿರುಚಿಯನ್ನ, ಕನ್ನಡ ವೀಕ್ಷಕರ ಬಗ್ಗೆ ಗೌರವವನ್ನ..

No Comments



"ಆರ್ಥಿಕತೆ ಮತ್ತು ಶಾಂತಿಗೆ ನೇರ ಸಂಬಂಧ ಇದೆ. ವಿಶ್ವದ ಹಲವಾರು ಕಡೆ ನಾವಿಂದು ಕಾಣುತ್ತಿರುವ ಅಶಾಂತಿಗೆ ಆರ್ಥಿಕತೆಯೊಂದಿಗೆ ನೇರವಾದ ಸಂಬಂಧವಿದೆ"

-ಮೋಹಮದ್ ಯೂನುಸ್, 2006ನೇ ಸಾ... ನೊಬೆಲ್ ಶಾಂತಿ ಪ್ರಶಸ್ತಿ ವಿ... (ಅರ್ಥಶಾಸ್ತ್ರಜ್ಞ... ತಮಗೆ ಶಾಂತಿ ಪ್ರಶಸ್ತಿ ಏಕೆ ಎಂಬಪ್ರಶ್ನೆಗೆ ಉ... ನೀಡು...



"ಟಾಟಾದವರಿಗೆ ನಮ್ಮ ಸರ್ಕಾರ ರೈತರಿಗೆಷ್ಟು ಜಮೀನು ಕೊಡುತ್ತಿರುವುದು ಗೊತ್ತು. ಆದರೆ ಪರಿಹಾರ ಇತ್ಯಾದಿ ವಿಷಯಗಳು ನನಗೆ ಗೊತ್ತಿಲ್ಲ"

-ಜ್ಯೋತಿ...

"ಹೌದು. ನಾವು ಫೋರ್ಡ್ ಫೌಂಡೇಷನ್ನಿನಿಂದಲೂ ಹಣ ಪಡೆಯುತ್ತೇವೆ"

-ವಾಲ್ಡೆನ್ ಬೆಲ್ಲೋ. ವಿಶ್ವಸಾಮಾಜಿಕ ವೇ... (WSF) ಸಂಸ್ಥಾಪಕ ಮತ್ತು ಅಮೆರಿ... ಸಾಮ್ರಾಜ್ಯ ಶಾಹಿಯ ವಿರೋಧಿ. (...!)



"ಗುರುವಿಗಿಂತ ಗೋಮಾತೆ ಶ್ರೇಷ್ಠ"

-ರಾಘವೇಶ್ವರ ಸ್ವಾಮಿ

"ಸಾಹಿತಿಗಳು ಒಪ್ಪದಿದ್ದರೆ ಒಂದನೇ ತರಗತಿಯಿಂದ ಇಂಗ್ಲೀಷ್ ಕಲಿಕೆ ಪ್ರಸ್ತಾಪ ಕೈಬಿಡಲು ಸಿದ್ಧ"

-ಯದಿಯೂ...

"ಮಾತೃಭಾಷೆಯಲ್ಲಿ ಕಲಿಕೆ ಎಂಬ ವಾದವೇ ಬಿದ್ದುಹೋಗಿದೆ"

-ಕಿ.ರಂ.ನಾಗ...

ನಂಬಿದ್ರೆ ನಂಬಿ ಬಿಟ್ರೆ ಬಿಡಿ:



"ಸುಧಾಮೂರ್ತಿಯವರ ಕಥೆಯಲ್ಲಿ ಉತ್ತಮ ವ್ಯಕ್ತಿಯನ್ನು ರೂಪಿಸುವ ಮಾನವ ಸ್ಪರ್ಷವಿದೆ"

-ಜಿ.ವೆಂಕಟಸುಬ್ಬಯ್ಯ

"ನವಂಬರ್ 1 ರಿಂದ ಹೆಲ್ಮೆಟ್ ಕಡ್ಡಾಯ"

-ಸರ್ಕಾರದ ಪ್ರ...

"ಇಂಗ್ಲಿಷ್ ಕಲಿಕೆಯಿಂದ ಆತ್ಮಾಭಿಮಾನ ಹೆಚ್ಚುತ್ತ...

-ಜಿ.ಕೆ. ಗೋವಿಂದ...

"ಶ್ಯಾಮನೂರು ಶಿವಶಂಕರಪ್ಪ ಒಬ್ಬ ಸಮಾಜ ವಿ...

-ಎಡಪಂಥೀಯ ಸಂಘಟನ... ಹಮ್ಮಿಕೊಂಡಿದ್ದ ಸಭೆಯೊಂದರ ಕ...



"ಇಂಗ್ಲೀಷ್ ಕಲಿಸುವುದೇ ಆದಲ್ಲಿ ಮೂರನೇ ತರಗತಿಗೂ ಒಂದನೇ ತರಗತಿಗೂ ವ್ಯತ್ಯಾಸವಿಲ್ಲ"

-ಮಾವಳ್ಳಿ ಶಂಕರ್

"ಭಾರತ ತಂಡ ಒತ್ತಡದಲ್ಲಿಲ್ಲ"

-ರಾಹುಲ್ ದ್ರಾ...

ವಾರದ ಘೋಷಣೆ:

"ನಾನು ಮಣಿಯುವುದಿಲ್ಲ. ಏಕೆಂದರೆ ಅಂತಿಮ... ಜಯಿಸಬೇಕಿರುವುದು ಸತ್ಯ. ಹೋರಾಟ ಎಷ್ಟೇ ದೀರ್ಘವಾಗಿದ್ದರೂ ಪರವಾಗಿಲ್ಲ"



-ಇರೋಂ ಶಮಿ... (ಮಣಿಪುರದಲ್ಲಿ ಪಡೆಗಳ ವಿಶೇಷ ಅ... ಕಾ... ಹಿಂತೆಗೆದುಕೊಳ್ಳಬೇಕೆಂದು ಆರು ವರ್ಷ... ಉಪವಾಸ ಸತ್ಯಾಗ್ರಹ ನಡೆಸುತ್ತಿರುವ ಮ... ಹೋರಾಟಗ...

ಹಿಂಸೆ

'ಕೊಂದಹರೆಂಬುದನರಿಯದೆ, ಬೆಂದವ್ರ... ಹೊರೆಯ ಹೋಯಿತ್ತಲ್ಲವೆ! ಅಂದಂದೇ ಹುಟ್ಟಿ... ಅಂದಂದೇ ಹೊಂದಿತು; ಕೊಂದವರುಳಿದರೆ... ಎಂದು ಕೇಳುತ್ತಾನೆ ಬಸವಣ್ಣ.

ಹಸಿದ ಕೂಸು ಅಳುತ್ತದೆ; ಅದು ತಾ... ಅರ್ಥವಾಗದಿದ್ದಾಗ ಮತ್ತೂ ಜೋರಾಗಿ ಅಳು... ಆದರೂ ತಾಯಿಗೆ ಅರ್ಥವಾಗದಿದ್ದಾಗ ಆ ಕೂ... ತಾಯಿಯನ್ನು ಪರಚಲು ಶುರು ಮಾಡುತ್ತದೆ ಎನ್ನು... ಕ್ರಾಂತಿ ಕವಿ ಗದ್ದರ್....


ಈ ಸಲದ ಸೂಕ್ತಿಗಳನ್ನು ಓದಿ, ಹಿಂಸೆ... ಬಗ್ಗೆ ಮಾತಾಡುವವರ 'ಹಿಂಸೆ'ಯೂ ಅರ್ಥವಾಗ...

-ಮೂ...

ಅರ್ಥ ಅಮೆರಿಕದಲ್ಲಿ ◁ ನೊಬೆಲ್ ಪ್ರಶಸ್ತಿಗಳು ▷ ಅನರ್ಥ ಬಡದೇಶಗಳಲ್ಲಿ

ಅರ್ಥಶಾಸ್ತ್ರದ ಪ್ರಶಸ್ತಿಗಳನ್ನೆಲ್ಲಾ ಅಮೆರಿಕಕ್ಕೂ, ಶಾಂತಿ ಪ್ರಶಸ್ತಿಗಳನ್ನೆಲ್ಲಾ ಬಡದೇಶಗಳಿಗೂ ಕೊಡುವುದೇಕೆ?

2005-06 ನೇ ಸಾಲಿನ ನೊಬೆಲ್ ಪ್ರಶಸ್ತಿಗಳು ಪ್ರಕಟವಾಗಿವೆ. ಯಥಾ ಪ್ರಕಾರ ಅರ್ಥಶಾಸ್ತ್ರಕ್ಕೆ ಸಂಬಂಧ ಪಟ್ಟ ಪ್ರಶಸ್ತಿ ಅಮೆರಿಕದ




ಅರ್ಥಶಾಸ್ತ್ರಜ್ಞನಿಗೂ ನೊಬೆಲ್ ಶಾಂತಿ ಪ್ರಶಸ್ತಿ ಬಾಂಗ್ಲಾದೇಶದ ಮೊಹಮದ್ ಯೂನುಸ್ ಎಂಬ ಪ್ರಖ್ಯಾತ ಅರ್ಥ ಶಾಸ್ತ್ರಜ್ಞನಿಗೂ ಸಿಕ್ಕಿದೆ. ಕಳೆದ 30 ವರ್ಷಗಳಿಂದ ಇದು ಒಂದು ಪದ್ಧತಿಯಂತೆಯೇ ನಡೆದುಕೊಂಡು ಬಂದಿದೆ. ಅರ್ಥಶಾಸ್ತ್ರಕ್ಕೆ ಸಂಬಂದಪಟ್ಟ ಪ್ರಶಸ್ತಿಗಳೆಲ್ಲಾ ಹೆಚ್ಚು ಕಡಿಮೆ ಅಮೆರಿಕದವರಿಗೇ ಸಿಕ್ಕುತ್ತಿವೆ. ಶಾಂತಿ ಪ್ರಶಸ್ತಿ ಬಿಡಿ ಕೆಲವೊಮ್ಮೆ ಅತ್ಯಂತ ಅಶಾಂತಿಗೆ ಕಾರಣನಾದ ಇಸ್ರೇಲ್ ಪ್ರಧಾನಿ ಶರೋನ್‌ನಂತವರಿಗೂ ಕೊಡಲಾಗಿದೆ. ಆದರೆ ಇಲ್ಲೂ ಸಹಾ ಕೆಲ ವೊಂದು ಅಪವಾದಗಳನ್ನು ಬಿಟ್ಟರೆ ಬಡದೇಶಗಳಿಗೇ ಶಾಂತಿ ಪ್ರಶಸ್ತಿ ಗಳನ್ನು ಕೊಡಲಾಗಿದೆ. ಈ ಬಾರಿಯ ಶಾಂತಿ ಪ್ರಶಸ್ತಿ ಪಡೆದ ಮೊಹಮದ್ ಯೂನುಸ್‌ರವರು ವಾಸ್ತವವಾಗಿ ವೃತ್ತಿಯಲ್ಲಿ ಮತ್ತು ಪ್ರವೃತ್ತಿಯಲ್ಲಿ ಅರ್ಥಶಾಸ್ತ್ರಜ್ಞರು. ಆದರೆ ಅವರಿಗೆ ನೀಡಲಾಗಿರುವುದು ಅರ್ಥಶಾಸ್ತ್ರದ ಪ್ರಶಸ್ತಿಯಲ್ಲ, ಬದಲಿಗೆ ಶಾಂತಿ ಪ್ರಶಸ್ತಿ, ಏಕೆ ಹೀಗೆ? ಏನಿದರ ಗುಟ್ಟು?

ಗುಟ್ಟು ◇ ರಟ್ಟು

ಅನರ್ಥ ಆಸ್ಫೋಟವಾಗದಂತೆ ತಡೆಯುವವರಿಗೆ ಶಾಂತಿ ನೊಬೆಲ್..!

ಇದರ ಗುಟ್ಟನ್ನು ತಮಗೆ ಅರಿವಿಲ್ಲದಂತೆಯೇ ಈ ಬಾರಿ ನೊಬೆಲ್ ಶಾಂತಿ ಪ್ರಶಸ್ತಿ ಪಡೆದ ಮೊಹಮದ್ ಯೂನುಸ್ ಬಿಚ್ಚಿಟ್ಟಿದ್ದಾರೆ. ತಾವು ಅರ್ಥಶಾಸ್ತ್ರಜ್ಞರಾದರೂ ತಮಗೇಕೆ ಶಾಂತಿ ನೊಬೆಲ್ ನೀಡಲಾಗಿದೆ ಎಂಬುದಕ್ಕೆ ಉತ್ತರಿಸುತ್ತಾ ಅವರು "ಎಲ್ಲಾ ಅಶಾಂತಿಗಳ ಹಿಂದೆ ಅರ್ಥಶಾಸ್ತ್ರೀಯ ಕಾರಣಗಳಿರುತ್ತವೆ" ಮತ್ತು ತಾವು "ಅಂತಹ ಅಶಾಂತಿಗೆ ಮೂಲ ಕಾರಣವಾದ ಆರ್ಥಿಕತೆಯಲ್ಲಿ ಅರ್ಥಶಾಸ್ತ್ರೀಯ ಪ್ರಯತ್ನಗಳ ಮೂಲಕ ಶಾಂತಿ ತರಲು ಪ್ರಯತ್ನಿಸಿದೆ" ಎಂದು ಹೇಳಿದ್ದಾರೆ. ಅಂದರೆ ಬಾಂಗ್ಲಾದೇಶದಲ್ಲಿ ಕಳೆದ ಹತ್ತು ವರ್ಷಗಳಿಂದ ಜಾಗತೀಕರಣ ಮತ್ತು ಉದಾರೀಕರಣ ನೀತಿಗಳು ಹುಟ್ಟಿಹಾಕಿದ್ದ ಅಶಾಂತಿಗೆ ಮೊಹಮದ್ ಯೂನುಸ್‌ರವರು ಆ ಚೌಕಟ್ಟನ್ನು ಮುರಿಯದೆಯೇ ಅದರೊಳಗೆ ನೊಂದ ಗಾಯಗಳಿಗೆ ಸಣ್ಣ ಸಾಲಗಳ ಮೂಲಕ ಮುಲಾಮು ಹಚ್ಚಲು ಪ್ರಯತ್ನಿಸಿದರು. ಅಂದರೆ ನೊಬೆಲ್ ಅರ್ಥಶಾಸ್ತ್ರ ಪ್ರಶಸ್ತಿ ಪಡೆದ ಪರಿಣಿತರ ಸಲಹೆ ಮೇರೆಗೆ ಅಮೆರಿಕ ಬಾಂಗ್ಲಾದಂತ ಬಡದೇಶಗಳ ಮೇಲೆ ದಾಳಿ ನೆಡೆಸುತ್ತಿದ್ದರೆ ಯೂನುಸ್‌ರಂತ "ಕರುಣಾಳುಗಳು" ಆ ದಾಳಿ ಮಾಡುವ ಗಾಯಗಳಿಗೆ ಆರ್ಥಿಕ ಮುಲಾಮು ಹಚ್ಚುತ್ತಿದ್ದರು. ಮದರ್ ತೆರೆಸಾಗೂ ಶಾಂತಿ ಪ್ರಶಸ್ತಿ ನೀಡಿದ್ದು ಈ ರೀತಿಯಲ್ಲಿ ವಂಚಿತರಾದವರಿಗೆ ಮತ್ತು ದೀನರಾಗಲ್ಪಟ್ಟವರಿಗೆ ಮುಲಾಮು ಹಚ್ಚುತ್ತಿದ್ದರಿಂದಲೇ ಅಲ್ಲವೇ? ಅದನ್ನೂ ಹಚ್ಚಲು ಯಾರೂ ಇಲ್ಲದಿದ್ದಾಗ ಇಷ್ಟಾದರೂ ಮಾಡಿದ್ದು ಸರಿಯಲ್ಲವೇ ಎಂಬ ಪ್ರಶ್ನೆಗಿಂತ ಈ ಪ್ರಕ್ರಿಯೆಯಲ್ಲಿ ಗಾಯಮಾಡುವ ಶಕ್ತಿಗಳನ್ನು ಪ್ರಶ್ನಿಸದೇ ಹೋದದ್ದೇ ಮುಖ್ಯವಲ್ಲವೇ! ಆದ್ದರಿಂದಲೇ ಯೂನುಸ್ ಮತು ತೆರೆಸಾರಂತವರ ಅಗತ್ಯ ಇಲ್ಲವಾಗುವಂತ ಸಮಾಜ ಬರುವುದಕ್ಕಿಂತ ಅಂತವರ ಅಗತ್ಯ ಹೆಚ್ಚಾಗುವಂತ ಜಾಗತಿಕ ವ್ಯವಸ್ಥೆ ಜಾರಿಯಾಗುತ್ತಿದೆ. ಆದ್ದರಿಂದಲೇ ಯೂನುಸ್‌ರವರು 85000ಕ್ಕೂ ಹೆಚ್ಚು ಭಿಕ್ಷುಕರಿಗೂ ಸಾಲ ನೀಡಿದ್ದಾರೆ ಎಂದು ಹೇಳಿದಾಗ ಮೆಚ್ಚುಗೆಗಿಂತ ವಿಷಾದ ಹುಟ್ಟುತ್ತದೆ. ಏಕೆಂದರೆ ಯೂನುಸ್‌ರವರ ಅರ್ಥಶಾಸ್ತ್ರ ಭಿಕ್ಷುಕರನ್ನು ಇಲ್ಲವಾಗಿಸುವ ಅರ್ಥಶಾಸ್ತ್ರವಲ್ಲ, ಭಿಕ್ಷೆಯನ್ನು ಹುಟ್ಟಿಹಾಕುವ ವ್ಯವಸ್ಥೆಯ ವಿರುದ್ಧದ ಅರ್ಥಶಾಸ್ತ್ರವಲ್ಲ, ಬದಲಿಗೆ ಭಿಕ್ಷುಕರೂ ಭಿಕ್ಷುಕರಾಗಿಯೇ ಸಣ್ಣ ವ್ಯಾಪಾರಸ್ಥರು ಸಣ್ಣವರಾಗಿಯೇ ಉಳಿದುಕೊಂಡು ದೊಡ್ಡವರ ವ್ಯವಸ್ಥೆಯಲ್ಲಿ ಹೇಗೆ ಬದುಕುಳಿಯಬಹುದು ಎಂಬ ಅರ್ಥಶಾಸ್ತ್ರ.



ಆದ್ದರಿಂದಲೇ ಒಂದೆಡೆ ಜಾಗತೀಕರಣದ ಹೆಸರಲ್ಲಿ ಪಶ್ಚಿಮದ ಮಾರುಕಟ್ಟೆ ಶಕ್ತಿಗಳು ಹೇಗೆ ಬಡದೇಶಗಳನ್ನು ಕಬಳಿಸಬಹುದು ಎಂಬ ಅರ್ಥಶಾಸ್ತ್ರೀಯ ದಾಳಿಕೋರರಿಗೆ ಅರ್ಥಶಾಸ್ತ್ರದ ನೊಬೆಲ್ ಕೊಡುತ್ತಿದ್ದರೆ ಮತ್ತೊಂದು ಕಡೆ ಈ ಆಕ್ರಮಣವು ಹುಟ್ಟಿಹಾಕುವ ಅಶಾಂತಿಯನ್ನು ಸಹನೀಯಗೊಳಿಸುವ ಬಡದೇಶಗಳ "ಮಹಾತ್ಮರಿಗೆ" ಶಾಂತಿ ನೊಬೆಲ್‌ಗಳನ್ನು ಕೊಡಲಾಗುತ್ತಿದೆ. ಆದ್ದರಿಂದಲೇ ಎಲ್ಲಿಯತನಕ ಜಾಗತೀಕರಣದ ಹಿಂದಿನ ತರ್ಕಗಳಿಗೆ ಅರ್ಥಶಾಸ್ತ್ರೀಯ ವಿರೋಧ ವ್ಯಕ್ತಪಡಿಸುತ್ತಿದ್ದರೋ ಅಲ್ಲಿಯವರೆಗೆ ಅಮರ್ತ್ಯಸೇನರಿಗೂ ಅರ್ಥಶಾಸ್ತ್ರದ ನೊಬೆಲ್ ಬಂದಿರಲಿಲ್ಲ. ಜಾಗತೀಕರಣ ಮತ್ತು ಬಂಡವಾಳಶಾಹಿ ಅಭಿವೃದ್ಧಿ ಅನಿವಾರ್ಯ ಎಂದು ಒಪ್ಪಿಕೊಂಡು ಅದರೊಳಗೆ ಹೇಗೆ ಬಹುಸಂಖ್ಯಾತ ಜನತೆ ಸಹನೀಯವಾಗಿ ಬದುಕಲು ಸಾಧ್ಯ ಎಂಬ ತರ್ಕ ಮುಂದಿಸಿದ ನಂತರವೇ ಅವರಿಗೆ ನೊಬೆಲ್ ಬಂದಿತ್ತು, ಇದೇ ನೊಬೆಲ್ ಪ್ರಶಸ್ತಿಗಳ ಗುಟ್ಟು.

ಕತ್ತಿಯನ್ನು ಎತ್ತುವವರೆಲ್ಲ ಕತ್ತಿಯೊಂದಿಗೇ ನಾಶವಾಗುತ್ತಾರೆ -ಮ್ಯಾಥ್ಯೂ

ಅಪ್ಪ ಅಭಿಮಾನಿಸಿದ್ದ ಯೂನಸ್‌ಗೆ ನೊಬೆಲ್ ಬಂತು

ಎಂದಿಗಿಂತಲೂ ಅಪ್ಪ ಇವತ್ತು ಹೆಚ್ಚು ನೆನಪಾಗಿದ್ದಾರೆ. ಶನಿವಾರ ಬೆಳಗ್ಗೆ ಪೇಪರ್‌ಗಳಲ್ಲಿ ಬಾಂಗ್ಲಾದೇಶದ ಮಹಮ್ಮದ್ ಯೂನಸ್‌ರವರಿಗೆ ಈ ಸಾಲಿನ ನೊಬೆಲ್ ಶಾಂತಿ ಪ್ರಶಸ್ತಿ ನೀಡಲಾಗಿದೆ ಎಂಬುದನ್ನು ಓದಿದ ಕೂಡಲೇ "ಅರೆ, ಕನ್ನಡ ಓದುಗರಿಗೆ ಈ ಯೂನಸ್ ಮತ್ತವರ ಗ್ರಾಮೀಣ ಬ್ಯಾಂಕಿನ ಬಗ್ಗೆ ಪ್ರಥಮ ಬಾರಿಗೆ ಪರಿಚಯಿಸಿದ್ದೇ ಅಪ್ಪ"ಎಂದು ನೆನಪಿಸಿಕೊಂಡು ಸಂತೋಷ ಪಟ್ಟೆ.

ಅಂದಹಾಗೆ, ಎರಡು ವರ್ಷಗಳ ಹಿಂದೆ, ಇದೇ ನೊಬೆಲ್ ಶಾಂತಿ ಪ್ರಶಸ್ತಿ ಪಡೆದ ವಾಂಗಾರಿ ಮಥೈ ಎಂಬ ಮಹಿಳೆ ತನ್ನ ಕೀನ್ಯಾ ದೇಶ ಹೇಗೆ ಮರಳು ಭೂಮಿಯಾಗುವುದನ್ನು ತಡೆದಳು ಎಂಬುದರ ಬಗ್ಗೆಯೂ ಕನ್ನಡದಲ್ಲಿ ಮೊದಲ ಬಾರಿಗೆ ಬರೆದದ್ದೂ ಅಪ್ಪ! ಜನರ ನಿತ್ಯ ಬದುಕಿನಲ್ಲಿ ಬದಲಾವಣೆ ತಂದ ಮಥೈ ಮತ್ತು ಯೂನಸ್‌ರವರನ್ನು ಅಪ್ಪ ತುಂಬಾ ಮೆಚ್ಚಿದ್ದರಲ್ಲದೆ, ಇವರಿಬ್ಬರಿಗೆ ಈಗ ನೊಬೆಲ್ ಪ್ರಶಸ್ತಿ ಸಿಕ್ಕಿದ್ದು ನೋಡಿದ್ದರೆ ಆನಂದಿಸುತ್ತಿದ್ದರು.

ಆದರೆ ಇವರಿಬ್ಬರಿಗಿಂತಲೂ ನಿಜವಾಗಲೂ ಏಷಿಯಾ ಖಂಡದಲ್ಲಿ ಶಾಂತಿಗಾಗಿ ಶ್ರಮಿಸಿದ್ದಕ್ಕೆ ಯಾರಿಗಾದರೂ ನೊಬೆಲ್ ಪ್ರಶಸ್ತಿ ದಕ್ಕಬೇಕಿದ್ದರೆ ಅದು ಖುಷವಂತ್ ಸಿಂಗ್‌ರವರಿಗೆ ಎಂದು ಅಪ್ಪ ಅದೆಷ್ಟೋ ಬಾರಿ ಹೇಳಿದ್ದರು. ಮುಂದಿನ ವರ್ಷ ಅದೂ ನಿಜವಾದರೆ ಅಪ್ಪ ಸಂಭ್ರಮಿಸುತ್ತಿದ್ದ ರೀತಿಯಲ್ಲಿ, ನಾವು ಮತ್ತು ನಮ್ಮ ಓದುಗ ಮಿತ್ರರೂ ಸಂಭ್ರಮಿಸುತ್ತೇವೆ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ ಅಲ್ಲವೇ......

* * * * * * * *


ಮಹಮ್ಮದ್ ಯೂನಸ್‌ರವರ ಬಗ್ಗೆ, ಅದರಲ್ಲೂ ಅವರ ಗ್ರಾಮೀಣ ಬ್ಯಾಂಕಿನಿಂದಾಗಿ ಬಾಂಗ್ಲಾದೇಶದ ಬಡ ಮಹಿಳೆಯರ ಬದುಕಿನಲ್ಲಿ ಆಗುತ್ತಿರುವ ಸುಧಾರಣೆ ಬಗ್ಗೆ ನಾನೂ ಒಂದು ಪುಟ್ಟ ಟಿಪ್ಪಣಿ ಬರೆದಿದ್ದೆ. ನಿಜವಾಗಲೂ ಭಾರತ, ಬಾಂಗ್ಲಾದೇಶದಂತಹ ಬಡ ರಾಷ್ಟ್ರಗಳಲ್ಲಿ ಮಹಿಳೆಯರ ಪರಿಸ್ಥಿತಿ ಇವತ್ತಿಗೂ ದಾರುಣವಾಗಿದೆ. ಬಹಳಷ್ಟು ಮಹಿಳೆಯರಿಗೆ ವಿದ್ಯೆ ಎಂಬುದು ಕನಸಿನ ಮಾತು, ಪೌಷ್ಟಿಕ ಆಹಾರ ಬಾಯಿಗೆ ಸಿಗದ ತುತ್ತು, ಇಂಥ ಮೂಲಭೂತ ಸಮಸ್ಯೆಗಳಿರುವಾಗ ಮಹಿಳೆಯರ ಸಬಲೀಕರಣ, ಸಮಾನತೆ, ನ್ಯಾಯ ಎಂಬುದೆಲ್ಲ ಕೇವಲ ತರ್ಕಗಳಾಗಿ ಉಳಿಯುತ್ತವೆ. ಆದರೆ ಇಂತಹ ಸನ್ನಿವೇಶದಲ್ಲೂ ಯೂನಸ್‌ರವರ ಮೈಕ್ರೋ ಕ್ರೆಡಿಟ್ ಎಂಬ ಅಲ್ಪ-ಸ್ವಲ್ಪ ಸಾಲ ನೀಡುವ ಪದ್ಧತಿ ಲಕ್ಷಾಂತರ ಮಹಿಳೆಯರನ್ನು ಸ್ವಾವಲಂಬಿಗಳನ್ನಾಗಿಸಿದೆಯಲ್ಲದೆ, ಅವರು ತಮ್ಮ ಸಂಸಾರದ ಆರ್ಥಿಕ ಪರಿಸ್ಥಿತಿ ಸುಧಾರಿಸುವಂತೆ ಸಹಕರಿಸಿದೆ. ಇದರಿಂದಾಗಿ ಮಹಿಳೆಯರಿಗೆ ಉತ್ತಮ ಆಹಾರ, ಅವರ ಮಕ್ಕಳಿಗೆ ವಿದ್ಯೆ ಪಡೆಯುವುದೂ ಸುಲಭವಾಗಿದೆ. ಇದು ಕಡಿಮೆ ಸಾಧನೆ ಏನಲ್ಲ.

ಜಾಗತೀಕರಣದ ಭರಾಟೆಯಲ್ಲಿ ಇವತ್ತು ಬಡ ದೇಶಗಳ ಸರಕಾರಗಳೂ ತನ್ನ ಅಸಂಖ್ಯಾತ ಬಡವರನ್ನು ಮರೆಯುತ್ತಿವೆ. ಇಂತಹ ಪರಿಸ್ಥಿತಿಯಲ್ಲಿ ದೇಶದ ಆರ್ಥಿಕ ವ್ಯವಸ್ಥೆ ನಿರ್ಲಕ್ಷಿಸುವ, ಸಾಲ ನೀಡಲು ಬ್ಯಾಂಕುಗಳು ಹಿಂಜರಿಯುವ, ಸ್ವಲ್ಪ ಸಹಾಯ ಮಾಡಲು ಯಾರೂ ತಯಾರಿಲ್ಲದಿರುವ ಜನರಿಗೆ ಯೂನಸ್‌ರವರ ಗ್ರಾಮೀಣ ಬ್ಯಾಂಕ್ ಸಾಲ ನೀಡಿ ಪ್ರೋತ್ಸಾಹಿಸಿದೆಯಲ್ಲದೆ, ಅವರೆಲ್ಲ ಸ್ವಾಭಿಮಾನದ ಬದುಕನ್ನು ನಡೆಸಲು ಪ್ರೇರಣೆ ನೀಡಿದೆ. ಇದರಿಂದಾಗಿ ಇವತ್ತು ಲಕ್ಷಾಂತರ ಮಹಿಳೆಯರು ಹಪ್ಪಳ-ಸಂಡಿಗೆ ಮಾಡಿ ಮಾರುವುದರಿಂದ ಪ್ರಾರಂಭಿಸಿ, ಹಸುಗಳನ್ನು ಕೊಂಡು ಹಾಲು ಮಾರುವುದನ್ನೂ ದಾಟಿ, ತಮ್ಮ ಹಳ್ಳಿಗಳಲ್ಲಿ ಮೊಬೈಲ್ ಫೋನ್ ಬೂತ್‌ಗಳನ್ನು ನಡೆಸುವಂತಾಗಿದೆ.

ಮಹಿಳೆಯರ ಈ ಆರ್ಥಿಕ ಸಬಲೀಕರಣದಿಂದಾಗಿ ಒಂದು ಚಿಕ್ಕ-ಚೊಕ್ಕದಾದ ಮನೆ, ಅದರಲ್ಲೊಂದು ಫ್ಯಾನ್, ಮಕ್ಕಳಿಗೆ ಆಹಾರ ಮತ್ತು ವಿದ್ಯೆ ಸಿಗುವಂತಾಗಿದೆ. ಆ ಮನೆಗಳಲ್ಲಿ ಸರಕಾರ ಸರಬರಾಜು ಮಾಡುವ ವಿದ್ಯುಚ್ಛಕ್ತಿ ಇಲ್ಲದಿರಬಹುದು, ಮಕ್ಕಳಿಗೆ ಕಾನ್ವೆಂಟ್ ಶಿಕ್ಷಣ ಇಲ್ಲದಿರಬಹುದು, ಮಧ್ಯಮ ವರ್ಗಗಳಿಗೆ ಇಂದು 'ಅನಿವಾರ್ಯ'ವಾಗಿರುವ ಇತರೆ ಸವಲತ್ತುಗಳು ಕಾಣದಿರಬಹುದು. ಆದರೆ ಸಾಲ, ಬಡ್ಡಿ, ಮಧ್ಯವರ್ತಿಯ ಸುಲಿಗೆ, ವ್ಯವಸ್ಥೆಯ ಅಸಡ್ಡೆ, ಇದೆಲ್ಲದರೊಂದಿಗೆ ಮೂಡುವ ಅಸಹಾಯಕತೆ.... ಇವುಗಳಿಂದಾದರೂ ಬಹಳಷ್ಟು ಮಹಿಳೆಯರು ಮತ್ತವರ ಕುಟುಂಬಗಳು ಪಾರಾದರು ಎಂಬುದೇ ಸಂತಸದ ವಿಷಯವಲ್ಲವೇ?

* * * * * * * *

ಇದೇ ಸಂಚಿಕೆಯಲ್ಲಿ ಶಿವಸುಂದರ್‌ರವರು ತಮ್ಮ 'ಚಾರ್ವಾಕ' ಅಂಕಣದಲ್ಲಿ ಯೂನಸ್‌ರವರ ಅರ್ಥಶಾಸ್ತ್ರವನ್ನು ಟೀಕಿಸಿ "ಭಿಕ್ಷುಕರೂ ಭಿಕ್ಷಕರಾಗಿಯೇ, ಸಣ್ಣ ವ್ಯಾಪಾರಸ್ಥರು ಸಣ್ಣವರಾಗಿಯೇ ಉಳಿದುಕೊಂಡು ದೊಡ್ಡವರ ವ್ಯವಸ್ಥೆಯಲ್ಲಿ ಹೇಗೆ ಬದುಕುಳಿಯಬಹುದು ಎಂಬ ಅರ್ಥಶಾಸ್ತ್ರ ಅವರದ್ದು"ಎಂದಿದ್ದಾರೆ. ಶಿವಸುಂದರ್



ಮಹಮ್ಮದ್ ಯೂನಸ್

ರವರ ಈ ನಿಲುವಿನೊಂದಿಗೆ ನನ್ನ ಭಿನ್ನಾಭಿಪ್ರಾಯವಿದೆ ಎಂದು ದಾಖಲಿಸುತ್ತಾ, ಅವರು ಹೇಳಿರುವಂತೆ "ಜಾಗತೀಕರಣದ ಹೆಸರಲ್ಲಿ ಪಶ್ಚಿಮದ ಮಾರುಕಟ್ಟೆ ಶಕ್ತಿಗಳು ಬಡದೇಶಗಳನ್ನು ಕಬಳಿಸಬಹುದು" ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಇಂತಹ ಬಿಕ್ಕಟ್ಟಿನ ಸಂದರ್ಭದಲ್ಲಿ ಯೂನಸ್‌ರವರ ಗ್ರಾಮೀಣ ಬ್ಯಾಂಕ್, ಭೀಮನ ಕೋಣೆಯಲ್ಲಿರುವ ನಮ್ಮ ಪ್ರಸನ್ನರವರ 'ಚರಕ'ದಂತಹ ಸಂಸ್ಥೆಗಳು ಹಳ್ಳಿಗಾಡಿನ ಸಾಮಾನ್ಯ ಮಹಿಳೆಯರ ಬದುಕಿನಲ್ಲಿ ಅಪಾರ ಬದಲಾವಣೆಗಳನ್ನು ತರಬಲ್ಲವು ಎಂಬುದನ್ನೂ ಗ್ರಹಿಸಬೇಕು ಎಂಬುದು ನನ್ನ ನಿಲುವು.

* * * * * * * *

ಯೂನಸ್‌ರವರ ಈ ಮೈಕ್ರೋ ಕ್ರೆಡಿಟ್ ವ್ಯವಸ್ಥೆ ಎಷ್ಟು ಪರಿಣಾಮಕಾರಿ ಎಂದರೆ, ಗ್ರಾಮೀಣ ಬ್ಯಾಂಕ್ ಶೇಕಡ 20ರಷ್ಟು ಬಡ್ಡಿ ವಿಧಿಸಿದರೂ, ಲಕ್ಷಾಂತರ ಜನರು ಸುಮಾರು ಐದು ಬಿಲಿಯನ್ ಡಾಲರ್‌ನಷ್ಟು ಸಾಲವನ್ನು ಆ ಬ್ಯಾಂಕಿನಿಂದ ಪಡೆದಿದ್ದಾರಲ್ಲದೆ, ಹಾಗೆ ಪಡೆದ ಸಾಲವನ್ನು ನಿಯತ್ತಿನಿಂದ ಹಿಂದಿರುಗಿಸುತ್ತಾ ಬಂದಿದ್ದಾರೆ. ಈ ಕಾರಣಕ್ಕಾಗಿಯೇ ಇವತ್ತು ಇತರೆ ಅಂತರರಾಷ್ಟ್ರೀಯ ಬ್ಯಾಂಕುಗಳಿಗಿಂತ ಯೂನಸ್‌ರವರ ಬ್ಯಾಂಕ್ ಹೆಚ್ಚು ಯಶಸ್ವಿ ಎಂದು ಪರಿಗಣಿಸಲಾಗಿದೆ. ಇದನ್ನು ನಮ್ಮ ಸುತ್ತಲು ಇರುವ ರಾಷ್ಟ್ರೀಕೃತ ಬ್ಯಾಂಕ್ ಮತ್ತು ಇತರೆ ಖಾಸಗೀ ಬ್ಯಾಂಕುಗಳೊಂದಿಗೆ ಹೋಲಿಸಿ ನೋಡಿ: ಇವತ್ತಿಗೂ ಅದೆಷ್ಟೋ ಬ್ಯಾಂಕುಗಳು 'ದೊಡ್ಡ'ವರಿಗೆ ಕೋಟ್ಯಂತರ ರೂಪಾಯಿಗಳ ಸಾಲ ನೀಡಿ, ಅದು ವಾಪಸ್ಸಾಗದೆ ನಷ್ಟ ಕಂಡಿರುವ ಉದಾಹರಣೆಗಳು ನಮ್ಮ ಮುಂದಿವೆ. ಹಾಗೆಯೇ, ಸಾವಿರಾರು ಮಧ್ಯಮವರ್ಗದ ಜನರ ಉಳಿತಾಯವನ್ನೆಲ್ಲ ನುಂಗಿ ಕೈ ಎತ್ತಿದ ಖಾಸಗೀ ಬ್ಯಾಂಕುಗಳನ್ನೂ

ಕಂಡಹಾಗೆ




ಕಂಡಿದ್ದೇವೆ. ಇದೆಲ್ಲದಕ್ಕಿಂತ, ಬಡವರ ಬ್ಯಾಂಕ್ ಎಂದೇ ಖ್ಯಾತಿ ಪಡೆದಿರುವ ಗ್ರಾಮೀಣ ಬ್ಯಾಂಕಿನ ಸಾಮಾಜಿಕ ಕಾಳಜಿ ಮತ್ತು ಉಪಯುಕ್ತತೆ ವಾಸಿ ಅಲ್ಲವೇ?

ಅಂದಹಾಗೆ, ಯೂನಸ್‌ರವರ ಈ ಮೈಕ್ರೋ ಕ್ರೆಡಿಟ್ ಬ್ಯಾಂಕಿಂಗ್ ವ್ಯವಸ್ಥೆ ಕೇವಲ ಬಡ ದೇಶಗಳಿಗೆ ಅನ್ವಯಿಸುವುದಿಲ್ಲ, ಇವತ್ತು ಅಮೆರಿಕಾದಂತಹ ಅಭಿವೃದ್ಧಿ ಹೊಂದಿರುವ ದೇಶಗಳಲ್ಲೂ ಕಡಿಮೆ ಸಾಲ ನೀಡಿ ಬಡವರಿಗೆ ನೆರವಾಗುವ, ಪದ್ಧತಿಯನ್ನು ಅನುಸರಿಸಲಾಗುತ್ತಿದೆ. ಇದಕ್ಕೆ ಉದಾಹರಣೆ ಎಂಬಂತೆ, ಇತ್ತೀಚಿಗೆ ಅಮೆರಿಕಾದಲ್ಲಿ ಓರ್ವ ಮಹಿಳೆಗೆ 50 ಡಾಲರ್ ಸಾಲ ನೀಡಿ ಆಕೆ ಒಂದು ಪುಟ್ಟ ಹೂವಿನ ಅಂಗಡಿ ತೆರೆಯಲು ನೆರವು ನೀಡಲಾಯಿತು. ಇವತ್ತು ಆಕೆ ಆ ಸಾಲವನ್ನು ತೀರಿಸಿ ದೊಡ್ಡ ಅಂಗಡಿ ತೆರೆಯಲು ಸಿದ್ಧಳಾಗಿದ್ದಾಳೆ. "ಈ ಮೈಕ್ರೋ ಕ್ರೆಡಿಟ್ ಇರುವುದರಿಂದಲೇ ನನಗೆ ಇದೆಲ್ಲ ಸಾಧ್ಯವಾಯಿತು. ಏಕೆಂದರೆ, ದೊಡ್ಡ ಬ್ಯಾಂಕುಗಳು ನನ್ನ ಆರ್ಥಿಕ ಪರಿಸ್ಥಿಯನ್ನು ಲೆಕ್ಕಕ್ಕೆ ತೆಗೆದುಕೊಳ್ಳುತ್ತವೆ, ಗ್ಯಾರಂಟಿ ಕೊಡುವವರು ಬೇಕು ಎನ್ನುತ್ತವೆ. ಆದರೆ ಆದಾಯವಿಲ್ಲದ, ಆಸ್ತಿ ಇಲ್ಲದ ನಮ್ಮಂತಹ ಜನ ಎಲ್ಲಿಂದ ಲೆಕ್ಕ ಕೊಡುವುದಕ್ಕಾಗುತ್ತದೆ, ಗ್ಯಾರಂಟಿ ನೀಡಲಾಗುತ್ತದೆ" ಎನ್ನುತ್ತಾಳೆ.

* * * * * * * *

ಈ ಲೇಖನದಲ್ಲಿ ಗ್ರಾಮೀಣ ಬ್ಯಾಂಕ್ ಮತ್ತು ಮೈಕ್ರೋ ಕ್ರೆಡಿಟ್ ಬಗ್ಗೆ ಹೇಳುವಾಗ ಮಹಿಳೆಯರ ಬಗ್ಗೆಯೇ ಪ್ರಸ್ತಾಪಿಸಲು ಕಾರಣವಿದೆ. ಇವತ್ತು ನಮ್ಮ ರಾಜ್ಯದಲ್ಲಿ ಹೈನುಗಾರಿಕೆ ಯಶಸ್ವಿಯಾಗಿ ಲಕ್ಷಾಂತರ ಕುಟುಂಬಗಳು ನೆಮ್ಮದಿಯ ಬದುಕನ್ನು ಕಾಣುತ್ತಿದ್ದರೆ ಅದಕ್ಕೆ ನಮ್ಮ ಹಳ್ಳಿಗಳಲ್ಲಿನ ಮಹಿಳೆಯರೇ ಕಾರಣ. ಹಸುಗಳನ್ನು ಪುರುಷರು ಕೊಂಡಿದ್ದರೂ, ಸಾಲ ಅವರ ಹೆಸರಲ್ಲೇ ಇದ್ದರೂ, ದಿನನಿತ್ಯ ಆ ಹಸುಗಳನ್ನು ನೋಡಿಕೊಳ್ಳುವವರು, ಹಾಲನ್ನು ಮಾರಾಟ ಮಾಡಿ ಮನೆಗೆ ಆದಾಯ ತರುವವರು ಮಹಿಳೆಯರೇ. ಇವತ್ತು ನೀವು ಯಾವುದೇ ಸಣ್ಣ ಹಳ್ಳಿಗೆ ಹೋಗಿ ನೋಡಿ. ಬೆಳಿಗ್ಗೆಯಿಂದ ಸೂರ್ಯ ಮುಳುಗುವವರೆಗೂ ಮಹಿಳೆಯರು ದುಡಿಯುತ್ತಿದ್ದರೆ, ಬಹಳಷ್ಟು ಪುರುಷರು ಮಾತ್ರ ಊರಿನ ಮುಂದೆ ಕೂತು ಬೀಡಿ ಸೇದುತ್ತಾ ಹರಟೆ ಹೊಡೆಯುತ್ತಿರುತ್ತಾರೆ, ಅಥವಾ ಯಾವ ಕೆಲಸವೂ ಇಲ್ಲದವರಂತೆ ರಸ್ತೆ ಬದಿಯಲ್ಲಿ ನಿಂತು ಹೋಗಿಬರುವ ವಾಹನಗಳನ್ನು ನೋಡುತ್ತಿರುತ್ತಾರೆ. ಅಪ್ಪಿತಪ್ಪಿಯೂ ಮಹಿಳೆಯರು ಹೀಗೆ ನಿಂತು ಹರಟೆ ಹೊಡೆಯುತ್ತಿವುದು ಕಂಡು ಬರುವುದು ಅಸಾಧ್ಯ.



ಕಾನ್ಷಿರಾಂ

ಮಹಿಳೆಯರಲ್ಲಿ ದುಡಿಯುವ ಛಲ, ಸಾಲ ತೀರಿಸುವ ನೈತಿಕತೆ, ಹಣ ಕೂಡಿಡುವ ಸಂಸ್ಕೃತಿ, ಅಗತ್ಯಗಳಿಗೆ ಮಾತ್ರ ಹಣ ವೆಚ್ಚ ಮಾಡುವ ಎಚ್ಚರಿಕೆ, ಕೌಟುಂಬಿಕ ಪರಿಸ್ಥಿತಿ ಉತ್ತಮವಾಗಬೇಕೆಂಬ ಕಾಳಜಿ.... ಇವೆಲ್ಲವೂ ಸಹಜವಾಗಿಯೇ ಇರುತ್ತವೆ. ಇದನ್ನು ಅವರ ಹೆಣ್ತನವೆನ್ನಿ, ನನ್ನ ಮಹಿಳಾವಾದ ಎನ್ನಿ, ಆದರೆ ಅದು ಸತ್ಯ ಎಂದು ಒಪ್ಪಲೇಬೇಕಾಗುತ್ತದೆ! ಹಾಗೆಯೇ ಮಹಿಳೆಯೊಬ್ಬಳು ಸ್ವಾವಲಂಬಿಯಾದರೆ, ಆಕೆಯ ಇಡೀ ಕುಟುಂಬ ಉದ್ಧಾರವಾದಂತೆಯೇ. ಇದನ್ನು ಗುರುತಿಸಿ, ಲಕ್ಷಾಂತರ ಬಡ, ಅಸಹಾಯಕ ಮಹಿಳೆಯರಿಗೆ ನೆರವಾದ ಮಹಮ್ಮದ್ ಯೂನಸ್‌ರವರಿಗೆ ಅಭಿನಂದನೆಗಳು, ಮತ್ತು ಧನ್ಯವಾದಗಳು.

* * * * * * * *

ಅದು 1988 ರ ಒಂದು ಸಂಜೆ. ಅಂದಿನ ದಿ ಟೈಮ್ಸ್ ಆಫ್ ಇಂಡಿಯಾದ ಸಂಪಾದಕರಾದ ಮೋನು ನಲಪಟ್‌ರವರು ನನ್ನನ್ನು ತಮ್ಮ ಮನೆಗೆ ಆಹ್ವಾನಿಸಿದ್ದರು. ಅವತ್ತು ಅವರು ಕರೆದಿದ್ದ ಮೂರು ಜನರಲ್ಲಿ, ಓರ್ವ ಮುಸ್ಲಿಂ ಮಹಿಳೆ, ಓರ್ವ ದಲಿತ ರಾಜಕಾರಣಿ ಮತ್ತು ನಾನು... ಇಷ್ಟೇ ಜನ.

ಆ ಹೊತ್ತಿಗಿನ್ನೂ ಆ ದಲಿತ ರಾಜಕಾರಣಿಯ ಹೆಸರು ಪ್ರಾಮುಖ್ಯತೆ ಪಡೆದಿರಲಿಲ್ಲ, ಕೇಂದ್ರದಲ್ಲಿ ರಾಜೀವ್‌ಗಾಂಧಿ, ರಾಜ್ಯದಲ್ಲಿ ರಾಮಕೃಷ್ಣ ಹೆಗಡೆ ಅಧಿಕಾರದಲ್ಲಿದ್ದರು.

ಅಷ್ಟೊತ್ತಿಗಾಗಲೇ ಮಹೇಂದ್ರ ಸಿಂಗ್ ಟಿಕಾಯತ್‌ರವರ ರೈತ ಹೋರಾಟ, ದಲಿತ ಸಂಘರ್ಷ ಸಮಿತಿಗಳ ಆರ್ಭಟ ಕುಗ್ಗಲಾರಂಭಿಸಿದ್ದವು. ಆದರೆ ಅದೇ ಹೊತ್ತಿಗೆ ಈ ದಲಿತ ನಾಯಕ ನಮ್ಮ ದೇಶದ ದಲಿತರನ್ನು, ಓಬಿಸಿಗಳನ್ನು, ಅಲ್ಪಸಂಖ್ಯಾತರನ್ನು ಒಗ್ಗೂಡಿಸುವ ಕನಸು ಕಾಣುತ್ತಿದ್ದರು. ಅದಕ್ಕಾಗಿ ಒಬ್ಬರೇ ಊರೂರು ಅಲೆಯುತ್ತಿದ್ದರು. ಹಾಗೆ ಅಲೆಯುತ್ತಾ ಬೆಂಗಳೂರಿಗೆ ಬಂದಿದ್ದಾಗ ಅವರ, ನನ್ನ ಭೇಟಿಯಾಗಿತ್ತು.

ಅವರೇ ಮೊನ್ನೆ ತೀರಿಕೊಂಡ ಕಾನ್ಷಿರಾಂರವರು. "ಇವತ್ತು ದಲಿತರಿಗೆ ಯಾವ ಪಕ್ಷದಲ್ಲೂ ಸ್ಥಾನಮಾನಗಳಿಲ್ಲ. ನನ್ನ ತವರು ರಾಜ್ಯವಾದ ಪಂಜಾಬಿನಲ್ಲಿ ಅತಿಹೆಚ್ಚು ಸಂಖ್ಯೆಯಲ್ಲಿ ದಲಿತರಿದ್ದರೂ ಅವರಿಗೆ ಯಾವ ದನಿಯೂ ಇಲ್ಲದಂತಾಗಿದೆ. ಅವರನ್ನೆಲ್ಲ ಒಗ್ಗೂಡಿಸಿ, ಒಂದು ರಾಜಕೀಯ ಶಕ್ತಿಯಾಗಿಸಬೇಕಿದೆ" ಎಂದೆಲ್ಲಾ ತಮ್ಮ ಕನಸುಗಳನ್ನು ಆ ಸಂಜೆ ನಮ್ಮೊಂದಿಗೆ ಹಂಚಿಕೊಂಡಿದ್ದರು.

ಸ್ವಲ್ಪ ಸ್ಥೂಲ ದೇಹದ, ಪಂಜಾಬಿಗಳಂತೆ ಬೆಳ್ಳಗಿದ್ದ ಬಿಳಿಕೂದಲಿನ ಕಾನ್ಷಿರಾಂರವರು ಆಗ ನನಗೆ ಅಸಾಧ್ಯವಾದದ್ದನ್ನು ಸಾಧಿಸಲು ಹೊರಟದ್ದಾರೆ ಅನ್ನಿಸಿತ್ತು, ಮಾತ್ರವಲ್ಲ, ಇದರ ಬಗ್ಗೆ ಅವರೊಂದಿಗೆ ಮೋನು ನಲಪಟ್ ಮತ್ತು ನಾನು ಸುದೀರ್ಘವಾಗಿ ಚರ್ಚಿಸಿದ್ದೆವು. ನಮ್ಮ ಪ್ರತಿಯೊಂದು ವಾದಕ್ಕೂ ಅವರು ಅಂಕಿ ಅಂಶಗಳನ್ನು ನೀಡುತ್ತಾ, ಹೇಗೆ ರಾಜಕೀಯ ಪಕ್ಷಗಳು ದಲಿತರನ್ನು ಉಪಯೋಗಿಸಿಕೊಂಡಿವೆ ಎಂದು ವಿವರಿಸಿದ್ದರು.

ಇದಾದ ನಾಲ್ಕು ವರ್ಷಗಳಲ್ಲಿ ಅವರು ತಮ್ಮ ಬಹುಜನ ಸಮಾಜ ಪಕ್ಷವನ್ನು ಸ್ಥಾಪಿಸಿದರಲ್ಲದೆ, 1993 ರ ಉತ್ತರ ಪ್ರದೇಶ ರಾಜ್ಯದ ಚುನಾವಣೆಯಲ್ಲಿ ಅವರ ಪಕ್ಷ ತನ್ನ ಮೊದಲ ಗಮನಾರ್ಹ ಗೆಲುವನ್ನು ಪಡೆಯಿತು. ಆದರೆ ದಲಿತರ, ಹಿಂದುಳಿದವರ, ಅಲ್ಪಸಂಖ್ಯಾತರ ದನಿಯಾಗಲು ಹೊರಟ ಬಿಎಸ್‌ಪಿ ಪಕ್ಷ ಆನಂತರ ಕಾನ್ಷಿರಾಂರವರೇ 'ಮನುವಾದಿಗಳ ಪಕ್ಷ' ಎಂದು ಬಣ್ಣಿಸಿದ್ದ ಭಾರತೀಯ ಜನತಾ ಪಕ್ಷದೊಂದಿಗೆ ಕೈ ಜೋಡಿಸಿತು. ಬಿಎಸ್‌ಪಿ ಪಕ್ಷಕ್ಕೆ ಮತ ನೀಡಿದ್ದವರ ಆಶೋತ್ತರಗಳು ಏನೇ ಇದ್ದರೂ ಅವರ ನಾಯಕಿ ಮಾಯಾವತಿಯ ಹಗರಣಗಳು, ಅದರ ಥಿಂಕ್-ಟ್ಯಾಂಕ್‌ಗಳ ವಿಚಿತ್ರ ತರ್ಕಗಳು, ಸಂಘ ಪರಿವಾರವನ್ನು ಹೋಲುವ ಮೂಲಭೂತ ಸಿದ್ಧಾಂತಗಳು... ಹೀಗೆ ಏನೇನೋ ನಡೆದವು, ನಡೆಯುತ್ತಿವೆ.

ಆದರೆ ಈ ಎಲ್ಲದರಿಂದ ದೂರವಿದ್ದ, ಈ ದೇಶದಲ್ಲಿ ದಲಿತರಿಗೂ ಸ್ಥಾನ-ಮಾನ ಬೇಕೆಂದೇ ಹೋರಾಡಿದ ಕಾನ್ಷಿರಾಂರವರು ಇವತ್ತಿಲ್ಲ. ಅವರೆಂದೂ ವೈಯಕ್ತಿಕ ರಾಜಕೀಯ ಅಧಿಕಾರಕ್ಕಾಗಿ ಆಸೆ ಪಡಲಿಲ್ಲ. ಎಲ್ಲಾ ಸಿದ್ಧಾಂತಗಳೂ ಅದನ್ನು ಹುಟ್ಟುಹಾಕಿದವರಿಂದ ದೂರ ಸರಿದು ವಿವಿಧ ರೂಪಗಳನ್ನು ತಾಳಿರುವುದನ್ನು ಇತಿಹಾಸದಲ್ಲಿ ನೋಡಿದ್ದೇವೆ. ಕಾನ್ಷಿರಾಂರವರ ಸಿದ್ಧಾಂತಕ್ಕೂ ಅದೇ ಆಗಿದೆ. ಆದರೆ ಅದು ಅವರ ತಪ್ಪಲ್ಲ. ಬದಲಾಗಿ, ದಲಿತರಿಗೆ ದನಿ, ದಿಕ್ಕು ತೋರಿಸಿದ್ದು ಅವರ ಕೊಡುಗೆ. ಅದಕ್ಕೆ ಅವರಿಗೆ ನಮನ.

– ಗೌರಿ ಲಂಕೇಶ್


ವೆಂಕಟಾಚಲ ಹೆಸರಲ್ಲಿ ರೋಲ್‌ಕಾಲ್

'ಇದೊಂದು ಕಿಲಾಡಿ ಜೋಡಿಯ ಕತೆ!

ಈ ವ್ಯಕ್ತಿ ಓರ್ವ ದಾಂಡಿಗ ಪಕ್ಕಾ ತೆಲುಗು ಸಿನಿಮಾ ವಿಲನ್‌ನಂತೆ ಗಡ್ಡಬಿಟ್ಟು ಹಣೆಗೆ ಉದ್ದದ ಕುಂಕುಮ ನಾಮಧಾರಿ. ಯಾವತ್ತೂ ಬಿಳಿ ಜುಬ್ಬಾ ಧರಿಸಿ ಬಾಯಿ ಬಿಟ್ಟರೆ ಮಹಾತ್ಮಾ ಗಾಂಧಿ, ಸತ್ಯಹರಿಶ್ಚಂದ್ರ, ಶ್ರೀರಾಮ ಚಂದ್ರರ ನಾಮ ಜಪಿಸುತ್ತಿರುತ್ತಾನೆ. ಮತ್ತೊಬ್ಬ ಗಡ್ಡ ಬೋಳಿಸಿಕೊಂಡು ಸೂಟುಬೂಟು ತೊಟ್ಟು 'ಠಸ್‌ಪುಸ್' ಇಂಗ್ಲಿಷ್ ಮಾತಾಡುತ್ತಾನೆ. ಇವರ ಆಜೂ ಬಾಜು ಉದ್ದುದ್ದದ ಕುಂಕುಮನಾಮಧಾರಿ ದಾಂಡಿಗರ ಹಿಂಡೇ ಇದೆ. ಥಟ್ಟನೆ ಯಾವುದೋ ಖತರ್‌ನಾಕ್ ರೌಡಿಗಳ ಗ್ಯಾಂಗ್ ಇರಬೇಕೆಂದು ನೀವೆಂದುಕೊಳ್ಳುತ್ತೀರಿ.

ತಪ್ಪು ನಿಮ್ಮದಲ್ಲ. ಅದು ಮಾಜಿ ಲೋಕಾಯುಕ್ತ ವೆಂಕಟಾಚಲರು ಮಾಡಿಕೊಂಡ ಯಡವಟ್ಟು. ಇವರು 'ವೆಂಕಟಾಚಲ ಭ್ರಷ್ಟಾಚಾರ ಆಂದೋಲನ ಸಮಿತಿಯ' ನಿಷ್ಠಾವಂತ ಸೈನಿಕರು!

ಎಲ್ಲೇ ದೋನಂಬರ್ ಧಂದೆ ನಡೆಯುವುದು ಗೊತ್ತಾಗಿಬಿಟ್ಟರೆ ಥೇಟ್ ಪೊಲೀಸ್ ಕಮಿಷನರ್ ಸಾಹೇಬರೇ ಬಂದು ರೇಡ್ ಮಾಡಿದಂತೆ ಈ ಗ್ಯಾಂಗ್



ಅಣ್ಣ ಸತೀಶ್ ಕುದ್ತರ್‌ಕರ್ ಪತ್ನಿಯೊಂದಿಗೆ

ದಾಳಿ ನಡೆಸುತ್ತದೆ. ಅದೂ ಸುಮ್ಮನೇನಲ್ಲ; ಐಷಾರಾಮಿ ಕಾರಿಗೆ ಕೆಂಪುದೀಪದ ಸೈರನ್ ಹಾಕಿಕೊಂಡೇ ಮೂರ್‍ನಾಲ್ಕು ಕಾರುಗಳಲ್ಲಿ ದಾಂಡಿಗ ಪಡೆ ಬಂದಿಳಿಯುತ್ತದೆ. ದಾಳಿಗೀಡಾದ ಮಾರ್ವಾಡಿಯ ಫೋಟೋ ತೆಗೆಯುತ್ತದೆ. ಪಕ್ಕಾ ಲೋಕಾಯುಕ್ತರಂತೆ ದಾಳಿ ನಡೆಸಿ ಕೊನೆಗೆ ದಾಳಿಗೀಡಾದವನಿಂದ ಶಕ್ತ್ಯಾನುಸಾರ ಕಿತ್ತು 'ಗ್ಯಾಂಗ್' ವಾಪಸ್ಸಾಗುತ್ತದೆ. ವಿಶೇಷವೆಂದರೆ ಕಿತ್ತ ದುಡ್ಡಿಗೆ 'ಇಂತಿಷ್ಟೇ ಅಮೌಂಟು' ಎಂದು ರಸೀದಿಯನ್ನು ಕೊಡುತ್ತದೆ!

ಇಂಥಾದ್ದೊಂದು ಗ್ಯಾಂಗಿನ ಲೀಡರ್ ವಿವೇಕಾನಂದ ಕುದ್ತರ್‌ಕರ್ ಅಲಿಯಾಸ್ ವಿ.ಎಸ್. ಕುದ್ತರ್‌ಕರ್ ಆಲಿಯಾಸ್ ಎಸ್.ಕೆ. ವಿವೇಕಾನಂದ. ಗಡ್ಡ ಬೋಳಿಸಿಕೊಂಡ ಕೋಟುಧಾರಿ ಈತನ ಅಣ್ಣ ಸತೀಶ್ ಕುದ್ತರ್‌ಕರ್. ಬೆಂಗಳೂರಿನ ಪೊಲೀಸರು ನೆಟ್ಟಗಿದ್ದಿದ್ದರೆ ಯಾವತ್ತೋ ಈ ಗ್ಯಾಂಗ್ ಕಂಬಿಯ ಹಿಂದಿರಬೇಕಿತ್ತು, ಆದರೆ ಅದಕ್ಕೂ ಕೆಲ ತಾಂತ್ರಿಕ ಅಡಚಣೆಗಳಿವೆ. 'ನಾವು ವೆಂಕಟಾಚಲ ಭ್ರಷ್ಟಾಚಾರ ಆಂದೋಲನ ಸಮಿತಿಯವರು, ಈ ಬಗ್ಗೆ ಲೋಕಾಯುಕ್ತರಿಗೆ ಕಂಪ್ಲೇಂಟ್ ಕೊಡೋದಕ್ಕೆ ಅಂತಲೇ ರೇಡ್ ಮಾಡಿದ್ವೀ....!' ಎನ್ನುತ್ತಾನೆ ವಿವೇಕಾನಂದ. ಲೋಕಾಯುಕ್ತರ ಹೆಸರು ಕೇಳಿದ್ದೇ ತಡ ಪೊಲೀಸರು ಬಾಲ ಮುದುರಿಕೊಳ್ಳುತ್ತಾರೆ ಮತ್ತು ವೆಂಕಟಾಚಲರ ಬ್ರಿಗೇಡಿನ ರೇಡು ಸಲೀಸಾಗುತ್ತದೆ.

ಇದು ಸದರಿ ಗ್ಯಾಂಗಿನ ಹಾವಳಿಗೆ ಸಣ್ಣ ಸ್ಯಾಂಪಲ್ ಮಾತ್ರ. ಮೆಜೆಸ್ಟಿಕ್‌ನ ಆನಂದರಾವ್ ಸರ್ಕಲ್ಲಿಗೆ ಬಂದರೆ ಅಲ್ಲಿನ ಫುಟ್‌ಪಾತ್, ಲೈಟುಕಂಬ ಮತ್ತು ಮರಗಳ ಮೇಲೆಲ್ಲ ಈ ನಾಮಧಾರಿ ವಿವೇಕಾನಂದನ ಕಟೌಟುಗಳಿವೆ. ಪಕ್ಕದ ಬ್ರಿಗೇಡ್ ಪ್ಲಾಜಾ ಎಂಬ ಕಾಂಪ್ಲೆಕ್ಸಿನಲ್ಲಿ ಇವರದೊಂದು ಐಷಾರಾಮಿ ಛೇಂಬರ್ ಕೂಡ ಇದೆ. ಅಲ್ಲಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಹ್ಯೂಮನ್ ರೈಟ್ಸ್ ಮತ್ತು ಕರ್ನಾಟಕ ರಾಜ್ಯ ಹ್ಯೂಮನ್ ರೈಟ್ಸ್ ಕೌನ್ಸಿಲ್ ಇತ್ಯಾದಿ ಬೋರ್ಡುಗಳನ್ನು ನೇತಾಕಿದ್ದಾರೆ. ಅದು ಬಹುರೂಪಿ ವಿವೇಕಾನಂದನ ಉದರ ನಿಮಿತ್ತಂ ವೈಖರಿ.

ಈತ ಕರ್ನಾಟಕ ರಾಜ್ಯ ಹ್ಯೂಮನ್ ರೈಟ್ಸ್ ಕೌನ್ಸಿಲ್‌ನ ಸ್ವಯಂ ಘೋಷಿತ ಅಧ್ಯಕ್ಷನಂತೆ. ಜೊತೆಗೆ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಹ್ಯೂಮನ್ ರೈಟ್ಸ್ ಎಂಬ ಮತ್ತೊಂದು ಲೆಟರ್‌ಹೆಡ್ ಸಂಘಟನೆಯನ್ನೂ ಹುಟ್ಟುಹಾಕಿದ್ದಾನೆ. ಗೊತ್ತಿಲ್ಲದವರು ಈತನೇ ಹ್ಯೂಮನ್ ರೈಟ್ಸ್ ಕಮಿಷನ್ನಿನ ಅಧ್ಯಕ್ಷ ಎಂದುಕೊಳ್ಳುತ್ತಾರೆ. ಇದಕ್ಕೂ ಮುನ್ನ ವಿಷ್ಣುವರ್ಧನ್ ಅಭಿಮಾನಿಗಳ ಸಂಘ ಹುಟ್ಟುಹಾಕಿ 'ವಿಷ್ಣು ಸೇನಾ' ಎಂಬ ಸಿನಿಮಾಕ್ಕೆ ಥಿಯೇಟರ್ ಕೊಡಿ ಎಂದು ಈತ ಗಲಾಟೆ ಮಾಡಿದ್ದ. ಅದಕ್ಕೆ ಡ್ರಾಪ್ ಹೀರಿ

ಕೊಂಡಾಕ್ಷಣವೇ ಅವರದೊಂದು ಕಟೌಟ್ ಹಾಕಿ ಅದರಲ್ಲಿ ತನ್ನದೊಂದು ಫೋಟೋ ಹಾಕಿಸಿ ತನಗೆ ತಾನೇ ಕನ್ನಡ ರತ್ನ ಎಂಬ ಬಿರುದುಕೊಟ್ಟುಕೊಂಡ.

ವಿಜಯ್ ಸಂಕೇಶ್ವರ್ 'ಕನ್ನಡ ನಾಡು' ಪಕ್ಷಕ್ಕೆ ಈತ ಬೆಂಗಳೂರು ನಗರಾಧ್ಯಕ್ಷನಾಗಿದ್ದ ಎಂಬ ಗುಮಾನಿಯಿದೆ. ಅದು ಕಣ್ಣು ಮುಚ್ಚಿದ್ದೇ ತನ್ನದೇ ಶುಭೋದಯ ಕರ್ನಾಟಕ ಪಕ್ಷ ಅಂತ ಮತ್ತೊಂದು ಬೋರ್ಡು ಜೋತುಬಿಟ್ಟ. ಪ್ರಧಾನಿ ಮನಮೋಹನ್‌ಸಿಂಗ್ ಪತ್ರಿಕಾಗೋಷ್ಠಿಯಲ್ಲಿ CNN, NDTV, Star News, Zee Tv, ಆಜ್‌ತಕ್ ಇತ್ಯಾದಿ



ಮಂಗಳೂರು ಕುದ್ತರ್‌ಕರ್ ಬ್ರದರ್ಸ್

ಟೀವಿಗಳ ಮೈಕುಗಳನ್ನು ಜೋಡಿಸಿಟ್ಟ ಚಿತ್ರಕ್ಕೆ ತನ್ನ ಫೋಟೋ ಅಂಟಿಸಿ, ಅದನ್ನು ಆನಂದ್‌ರಾವ್ ಸರ್ಕಲ್ಲಿನಲ್ಲಿ ನೇತುಹಾಕಿದ. ನೋಡಿದ ಯಾರೇ ಈತನನ್ನು ರಾಷ್ಟ್ರ ನಾಯಕನೆಂದುಕೊಂಡು ಹಳ್ಳಕ್ಕೆ ಬೀಳಲೇಬೇಕು!

ಹೀಗೆ ನಾನಾವೇಷ ತೊಟ್ಟು ಪ್ರತಿನಿತ್ಯ ಒಂದಲ್ಲಾ ಒಂದು ಅಡ್ಡೆಯ ಮೇಲೆ ದಂಡೆತ್ತಿ ಹೋಗುವ ಈ ಎಸ್.ಕೆ. ವಿವೇಕಾನಂದನ ಹಗಲು ವೇಷದ ಮೂಲ ಕಾರಣವೇ ವಂಚನೆ, ಬ್ಲಾಕ್‌ಮೇಲ್ ಮತ್ತು ರೋಲ್‌ಕಾಲ್. ವೆಂಕಟಾಚಲರನ್ನೇ ಮತ್ತೆ ಲೋಕಾಯುಕ್ತರನ್ನಾಗಿ ಮಾಡಬೇಕೆಂದು ಸಾರ್ವಜನಿಕರಿಂದ ಲಕ್ಷ ಸಹಿ ಸಂಗ್ರಹಿಸುತ್ತೇನೆಂದು ಹೊರಟವನು ಇದೇ ವಿವೇಕಾನಂದ. ಅದು ಆತನ ಬಂಡವಾಳ. ಲೋಕಾಯುಕ್ತರ ಹೆಸರಲ್ಲಿ ರೌಡಿಜಮ್ಮು, ಪೊಲೀಸರ ಬಾಯಿ ಮುಚ್ಚಿಸಲು ಹ್ಯೂಮನ್ ರೈಟ್ಸು, ಜನರನ್ನು ನಂಬಿಸಲು 'ಕನ್ನಡ ರತ್ನ' ಬಿರುದು, ಅಗತ್ಯಬಿದ್ದಾಗ ರಾಜ್‌ಕುಮಾರ್ ಹೆಸರು, ಗತಿಗೆಟ್ಟಾಗ ವಿಷ್ಣು ಅಭಿಮಾನಿ ಸಂಘ, ಏನೂ ಗಿಟ್ಟದೇ ಹೋದರೆ ಶುಭೋದಯ ಕರ್ನಾಟಕ ಪಕ್ಷ!

ಇದು ಈತನ ರೋಲ್‌ಕಾಲ್ ಸ್ಟೈಲು. ಬಹುಶಃ ಯಾರಿಗೂ ಗೊತ್ತಿರಲಿಕ್ಕಿಲ್ಲ; ಈ ವಿವೇಕಾನಂದ ಮತ್ತು ಆತನ ಅಣ್ಣ ಸತೀಶ್ ಕುದ್ತರ್‌ಕರ್ ಬೆಂಗಳೂರಿನಲ್ಲಿದ್ದಾರೆಂದು ಗೊತ್ತಾದರೆ ಅರ್ಧ ಮಂಗಳೂರಿನ ಮಂದಿ ಬೆಂಗಳೂರಿನ ಬಸ್ ಹತ್ತುತ್ತಾರೆ.



ಅಣ್ಣನ ಜೊತೆ ಕನ್ನಡರತ್ನ

ಹಕೀಕತ್ತೇನೆಂದರೆ ಈ ಅಣ್ಣತಮ್ಮಂದಿರ ಜೋಡಿ ಮಂಗಳೂರಿನಲ್ಲಿ ನೂರಾರು ಜನಕ್ಕೆ ಟೋಪಿಯಿಕ್ಕಿ ನಾಪತ್ತೆಯಾಗಿದೆ. ಇಲ್ಲಿಗೆ ಐದು ವರ್ಷದ ಹಿಂದೆ ಮಂಗಳೂರಿನ ಕೆಎಸ್ಸಾರ್ಟಿಸಿ ಬಸ್‌ಸ್ಟ್ಯಾಂಡ್ ಹಿಂಭಾಗದ ಸಾಯಿ ಕಾಂಪ್ಲೆಕ್ಸಿನಲ್ಲಿ ಗೌರವ್ ಎಲೆಕ್ಟ್ರಾನಿಕ್ಸ್ ಅಂಡ್ ಗ್ರಾಫಿಕ್ಸ್ ಎಂಬ ಬ್ಲೇಡ್ ಕಂಪನಿಯೊಂದು ಅರ್ಧ ರೇಟಿಗೆ ಇಸ್ತ್ರೀ ಪೆಟ್ಟಿಗೆ, ಟೀವಿ, ಫ್ರಿಡ್ಜು ಅಲ್ಮೇರಾ, ಮಿಕ್ಸಿ ಇತ್ಯಾದಿ ಕೊಡುತ್ತೇವೆಂದು ಕೋಟಿ ಲೆಕ್ಕದಲ್ಲಿ ದುಡ್ಡೆತ್ತಿ ಪರಾರಿಯಾಗಿತ್ತು. ಅದನ್ನು ಹುಟ್ಟುಹಾಕಿದ್ದ ವಿ.ಎಸ್. ಕುದ್ತರ್‌ಕರ್ ಮತ್ತು ಎಸ್.ಎಸ್. ಕುದ್ತರ್‌ಕರ್ ಎಂಬ ಕೊಂಕಣಿ ಬ್ರದರ್ಸ್.

ಇವತ್ತು ಬೆಂಗಳೂರಿಗೆ ಬಂದು ಹ್ಯೂಮನ್ ರೈಟ್ಸ್ ಕೌನ್ಸಿಲ್ ಹುಟ್ಟುಹಾಕಿದ ಈ ಜೋಡಿಯೇ ಅವತ್ತು ಮಂಗಳೂರಿನಿಂದ ನಾಪತ್ತೆಯಾದ ಸದರಿ ವಂಚಕ ಸಹೋದರರು!

ಮಂಗಳೂರಿನ ವಿ.ಎಸ್. ಕುದ್ತರ್‌ಕರ್ ಬೆಂಗಳೂರಿಗೆ ಬಂದು ಗಡ್ಡಬಿಟ್ಟು ಎಸ್.ಕೆ. ವಿವೇಕಾನಂದನಾದರೆ ಆತನ ಅಣ್ಣ ಗಡ್ಡ ಬೋಳಿಸಿಕೊಂಡು ಎಸ್.ಕೆ. ಸತೀಶನಾದ. ಮೂಲತಃ ಮಂಗಳೂರಿನವರಾದ ಕುದ್ತರ್‌ಕರ್ ಬ್ರದರ್ಸ್ ಅಲ್ಲಿನ ಸಾಯಿ ಕಾಂಪ್ಲೆಕ್ಸ್‌ನಲ್ಲಿ ಗೌರವ್ ಎಲೆಕ್ಟ್ರಾನಿಕ್ಸ್ ತೆರೆದು ಪ್ರಾರಂಭದಲ್ಲಿ ನಿಯತ್ತಾಗಿಯೇ ಅರ್ಧ ರೇಟಿಗೆ ಮಿಕ್ಸಿ, ಇಸ್ತ್ರೀಪೆಟ್ಟಿಗೆ ಕೊಟ್ಟರು. ಅದು ಹತ್ತು ಕಂತಿನ ವ್ಯವಹಾರ. ತಿಂಗಳಿಗೆ ಐನೂರು ಕಟ್ಟಿದವನಿಗೆ ಕಲರ್ ಟೀವಿ, ಇನ್ನೂರು ಕಟ್ಟಿದವನಿಗೆ ಮಿಕ್ಸಿ, ನೂರು ಕೊಟ್ಟವನಿಗೆ ಇಸ್ತ್ರೀಪೆಟ್ಟಿಗೆ ಇತ್ಯಾದಿ ಕೊಡುತ್ತಲೇ ಬಂದರು. ಬರುಬರುತ್ತ ಜನ ಕ್ಯೂ ನಿಂತು ದುಡ್ಡು ಕಟ್ಟತೊಡಗಿದರು. ಕಟ್ಟಿದ ದುಡ್ಡನ್ನೆಲ್ಲ ಹಂಪನಕಟ್ಟೆಯ ಕೆನರಾ ಬ್ಯಾಂಕಿನಲ್ಲೇ ಜಮೆ ಮಾಡುತ್ತಿದ್ದರಿಂದ ನಂಬಿದ ಕೆನರಾ ಬ್ಯಾಂಕ್ ಒಂದೂವರೆ ಕೋಟಿಯ ಸಾಲ ಕೊಟ್ಟಿತ್ತು. ಜೊತೆಗೆ ಮಂಗಳೂರಿನ ಪ್ರಕಾಶ್ ಪೂಜಾರಿ, ಪಾಂಡುರಂಗ ಮತ್ತು ಗಂಗಾಧರ ಎಂಬುವವರಿಂದಲೂ ಲಕ್ಷಾಂತರ ರೂಪಾಯಿ ಸಾಲ ಎತ್ತಿದ್ದರು.

ಇನ್ನೇನು 2000 ದ ನವೆಂಬರ್ ಹೊತ್ತಿಗೆ ನೂರಾರು ಜನಕ್ಕೆ ಟೀವಿ, ಫ್ರಿಡ್ಜು ಕೊಡಬೇಕೆನ್ನುವಷ್ಟರಲ್ಲಿ ಇಡೀ ಗೌರವ್ ಎಲೆಕ್ಟ್ರಾನಿಕ್ಸ್ ಮಳಿಗೆಯೇ ಖಾಲಿಯಾಗಿತ್ತು!

ರಾತ್ರೋರಾತ್ರಿ ಊರು ಬಿಟ್ಟು ಪರಾರಿಯಾದರು ಕುದ್ತರ್‌ಕರ್ ಬ್ರದರ್ಸ್. ನಂಬಿ ಒಂದೂವರೆ ಕೋಟಿ ಕೊಟ್ಟಿದ್ದ ಕೆನರಾ ಬ್ಯಾಂಕು ಈ ಬಗ್ಗೆ ಉದಯವಾಣಿಯಲ್ಲಿ ಹೇಳಿಕೆ ಕೊಟ್ಟರೆ, ಟೋಪಿ ಹಾಕಿಸಿಕೊಂಡವರೆಲ್ಲ ಪಾಂಡೇಶ್ವರ ಪೊಲೀಸ್ ಠಾಣೆ[...] ದೂರು ಕೊಟ್ಟರು. ಪೊಲೀಸರು ತಾನೇ ಎಲ್ಲಿಂಥ ಹುಡು[...]ಕುತ್ತಾರೆ?

ಇಂಥ ಕಿಲಾಡಿ ಸಹೋದರರನ್ನು ಕರೆತಂದ[...] ಬೆಂಗಳೂರಿಗೆ ಬಿಟ್ಟವನು ರಾಜೇಂದ್ರ ಕುದ್ತರ್‌ಕರ್ ಎಂ[...] ಮತ್ತೊಬ್ಬ ಖದೀಮ. ಈ[...] ಇವರಿಬ್ಬರಿಗೂ ಗುದ[...] ಗಾಂಧಿನಗರದ ಲಾಡ್ಜುಗಳಲ್ಲಿ ತಂಗಿದ್ದು ಮೆಡಿಕಲ್-ಇಂ[...] ನಿಯರಿಂಗ್ ಸೀಟು ಕೊಡಿಸುತ್ತೇನೆಂದು ವಂಚಿಸುತ್ತಿ[...] ರಾಜೇಂದ್ರ ಇವರಿಬ್ಬರಿಗೂ ಸ್ವದೇಶಿ ನೆಟ್‌ವರ್ಕ್ ಎಂ[...] ಮತ್ತೊಂದು ಬ್ಲೇಡ್ ಕಂಪನಿಯನ್ನು ಮಾಡಿಕೊಟ್ಟ. ಅದ[...] ಅಣ್ಣ ಸತೀಶನೇ ಛೇರ್ಮನ್ ಅಂಡ್ ಮ್ಯಾನೇಜಿಂಗ್ ಡೈರೆಕ್ಟರ್ ಆದ. ಈ ಬಾರಿ ತನ್ನ ಪತ್ನಿ ಸಿ[...] ಎಂಬಾಕೆಯನ್ನೇ ಫೀಲ್ಡಿಗೆ ಬಿಟ್ಟು ಸತೀಶ ಗಿರಾಕಿಗಳಿ[...] ಬಲೆ ಬೀಸಿದ. ಅದೇ ಹೊತ್ತಿಗೆ ತಮ್ಮ ವಿವೇಕಾನಂ[...] ದೇವನಹಳ್ಳಿಯ ಮಂಚಪ್ಪನ ಹೊಸಳ್ಳಿ ಆಂಜನಪ್ಪ ಎಂ[...] ಮತ್ತೊಬ್ಬ ವಂಚಕನ ಜೊತೆ ಸೇರಿ ಹ್ಯೂಮನ್ ರೈಟ್[...] ಕೌನ್ಸಿಲ್ ಹುಟ್ಟುಹಾಕಿದ್ದ. ಕ್ರಮೇಣ ವಿಜಯ್ ಸಂಕೇಶ್ವ[...] ಪಕ್ಷದ ಬೆಂಗಳೂರು ನಗರಾಧ್ಯಕ್ಷನಾದ. ಆನಂತರ ತನ್ನದ[...] ಶುಭೋದಯ ಕರ್ನಾಟಕ ಪಕ್ಷವನ್ನು ಹುಟ್ಟುಹಾಕಿದ[...]



ವಸೂಲಿ ಅಡ್ಡೆ ಬ್ರಿಗೇಡ್ ಪ್ಲಾಜಾ

ಯಾವತ್ತು ಲೋಕಾಯುಕ್ತ ವೆಂಕಟಾಚಲರ ಹೆಸರ[...] ಪೊಲೀಸ್ ಇಲಾಖೆಯಲ್ಲಿ ಕಿಮ್ಮತ್ತಿದೆ ಎಂದು ಗೊ[...]ಯಿತೋ ವಿವೇಕಾನಂದ ಪದೇಪದೇ ಲೋಕಾಯುಕ್[...] ಛೇಂಬರಿಗೆ ಬಂದು ವೆಂಕಟಾಚಲರನ್ನು ಸನ್ಮಾನಿಸ[...]ರಂಭಿಸಿದ. ತನ್ನ ಬ್ರಿಗೇಡ್ ಪ್ಲಾಜಾದ ಛೇಂಬರಿನಲ್ಲಿ ಧರ್ಮ[...] ಸಿಂಗ್, ಖರ್ಗೆ, ವೆಂಕಟಾಚಲರ ಜೊತೆ ನಿಂತು ಹೊಡ[...] ಕೊಂಡ ಫೋಟೋಗಳನ್ನು ನೇತು ಹಾಕಿದ. ವೆಂಕಟಾಚಲರ[...] ಮತ್ತೆ ಲೋಕಾಯುಕ್ತರನ್ನಾಗಿ ಮಾಡಬೇಕೆಂದು ಸ[...] ಸಂಗ್ರಹಣೆಗೂ ಇಳಿದ. ಅದೇ ಹೊತ್ತಿಗೆ ಅಣ್ಣತಮ್ಮ[...] ಸೇರಿಕೊಂಡು ಮೆಜೆಸ್ಟಿಕ್‌ನ ಬರ್ಮಾ ಬಜಾರ್, ಹಾಂಕಾಂ[...] ಬಜಾರುಗಳ ಮೇಲೆ ರೇಡು ಬಿದ್ದರು. ಸಾಲದ್ದಕ್ಕೆ ಮೆಜೆಸ್ಟಿ[...] ಪ್ರದೇಶದ ಬಹುತೇಕ ಹೋಟೆಲುಗಳಿಗೆ 'ನಿಮ್ಮಲ್ಲಿ ಸ್ವಚ್ಛ[...] ಇಲ್ಲವಾದ್ದರಿಂದ ನಾನೇಕೆ ಕ್ರಮ ಕೈಗೊಳ್ಳಬಾರದು?' ಎಂ[...] ವಿವೇಕಾನಂದ ತನ್ನ ವೆಂಕಟಾಚಲ ಭ್ರಷ್ಟಾಚಾರ ಆಂದೋಲ[...] ಸಮಿತಿಯಿಂದ ನೋಟೀಸು ಕೊಟ್ಟ.

ಒಂದಷ್ಟು ಹೋಟೆಲ್ ಮಾಲೀಕರು ವಿವೇಕಾನಂದನ[...] ಮಾಮೂಲಿ ಕೊಟ್ಟು ಕೈಮುಗಿದರು. ಬರ್ಮಾ ಬಜಾ[...] ಹಾಂಕಾಂಗ್ ಬಜಾರ್‌ಗಳಿಂದಲೂ ವಿವೇಕಾನಂದ ದು[...] ಕಿತ್ತ. ಇಷ್ಟೆಲ್ಲಕ್ಕೂ ನೆರವಾದವನು ಉಪ್ಪಾರ ಪೇಟೆಯ ಭ್ರ[...] ಎಸ್ಸೈ ನಾರಾಯಣಸ್ವಾಮಿ. ಅಣ್ಣ ಸತೀಶ ತನ[...] ಮುಂಬಯಿಯಲ್ಲಿ ಎರಡೂವರೆ ಲಕ್ಷ ರೂಪಾಯಿ ವಂಚಿಸಿ[...] ವಸೂಲಿಗೆಂದು ಬಂದಿದ್ದ ಥಾಣೆಯ ಕ್ಲೆಮೆಂಟ್ ಎಂಬಾತನ[...] ಇದೇ ನಾರಾಯಣಸ್ವಾಮಿಯನು ಛೂ ಬಿಟ್ಟು ಉಪ್ಪಾರಪೇ[...] ಪೊಲೀಸ್ ಠಾಣೆಗೆ ಎಳೆದೊಯ್ದು ಆತನೇ ತನಗೆ ದು[...] ಕೊಡಬೇಕೆಂದು ಸತೀಶ ಬರೆಸಿಕೊಂಡ. ವೆಂಕಟಾಚಲ[...] ಹೆಸರು ಆ ಮಟ್ಟಿಗೆ ಕೆಲಸ ಮಾಡಿತ್ತು. ಕ್ಲೆಮೆಂಟ್ ಬಗ್ಗೆ ಸತೀಶ್ ಮತ್ತು ಎಸ್ಸೈ ನಾರಾಯಣಸ್ವಾಮಿ ವಿರು[...] ಪೊಲೀಸ್ ಕಮಿಷನರ್‌ಗೆ ದೂರು ಕೊಟ್ಟಿದ್ದಾನೆ.


ಇನ್ನೂ ತಮಾಷೆಯೆಂದರೆ ಇದೇ ಮೆಜೆಸ್ಟಿಕ್‌ನ ವೀಕ್ಷ[...] ನೆಟ್‌ವರ್ಕ್‌ನ ಮಾಲೀಕ ರಾಧಾಕೃಷ್ಣರನ್ನು ಲೋಕಾಯು[...] ಹೆಸರಲ್ಲಿ ತನ್ನ ಛೇಂಬರಿಗೆ ಕರೆಸಿಕೊಂಡು ಅವರಿಂದ [...] ಸಾವಿರ ರೂಪಾಯಿ ಕಿತ್ತಿದ್ದಕ್ಕೆ ಅಣ್ಣತಮ್ಮ ಸೇರಿಯೇ ರಶೀ[...] ಕೊಟ್ಟಿದ್ದಾರೆ. ಈ ಬಗ್ಗೆ ರಾಧಾಕೃಷ್ಣ ಉಪ್ಪಾರಪೇಟೆ ಪೊಲೀ[...] ಠಾಣೆಗೆ ವಿವೇಕಾನಂದನ ವಿರುದ್ಧ ಮತ್ತೊಂದು ಕಂಪ್ಲೇಂ[...] ಕೊಟ್ಟಿದ್ದಾರೆ. ಈತನ ವಿರುದ್ಧ ಬ್ಯಾಂಕ್ ವಂಚನೆಯ ಕೇಸ[...] ಮಂಗಳೂರಲ್ಲಿ ಡಜನ್ನುಗಟ್ಟಲೆ ಚೀಟಿಂಗ್ ಕಂಪ್ಲೇಂಟುಗಳ[...] ಹಾಗಿದ್ದೂ ಪೊಲೀಸರು ಈತನ 'ಹ್ಯೂಮನ್ ರೈಟ[...] ಮುಖವಾಡಕ್ಕೆ ಯಾಮಾರುತ್ತಿದ್ದಾರೆಂದರೆ ಏನರ್ಥ?

ಅಥವಾ ಹೊಡೆದ ಕೊಳ್ಳೆಯಲ್ಲಿ ಪೊಲೀಸರಿಗ[...] ಪಾಲುಂಟಾ?

-ರಾ. ಸೋಮನಾಥ[...]

ವೆಂಕಟಾಚಲ ಭ್ರಷ್ಟಾಚಾರ ಅಂದರೇನು?

ಹೀಗೆ 'ವೆಂಕಟಾಚಲ ಭ್ರಷ್ಟಾಚಾರ ಆಂಧೋಲನ ಸಮಿತಿ' ಎಂದು ಅಸಂಬದ್ಧ ಲೆಟರ್‌ಹೆಡ್ ಪ್ರಿಂಟ್ ಹಾಕಿಸಿ ನೋಟಿಸು ಕೊಡುವ ವಿವೇಕಾನಂದನಿಗೆ ಅದರ ಅರ್ಥ ಕೂಡ ಗೊತ್ತಾಗುತ್ತಿಲ್ಲ. ವೆಂಕಟಾಚಲ ಇದ್ದದ್ದು ಭ್ರಷ್ಟಾಚಾರದ ವಿರುದ್ಧವಾದರೆ, ಈತ ವೆಂಕಟಾಚಲರ ಭ್ರಷ್ಟಾಚಾರವನ್ನೇ ಆಂಧೋಲನ ಮಾಡುತ್ತಾನಂತೆ!



ಇಂಥ ಲೆಟರ್‌ಹೆಡ್‌ನಲ್ಲಿ ನೋಟಿಸು ಬಂದಿದ್ದು ನೋಡಿದ್ದೇ ಮಾರ್ವಾಡಿಗಳು ಅದನ್ನು ಒರಿಜಿನಲ್ ಲೋಕಾಯುಕ್ತ ಎಂದು ಅಪಾರ್ಥ ಮಾಡಿಕೊಂಡು ವಿವೇಕಾನಂದ ಛೇಂಬರ್ ಮುಂದೆ ಫೈಲು ಹಿಡಿದು ನಿಲ್ಲುತ್ತಾರೆ. ಆದರೆ ಅವರ್‍ಯಾರೂ ನೇರವಾಗಿ ಬಾಸ್ ವಿವೇಕಾನಂದನನ್ನು ನೋಡುವಂತಿಲ್ಲ. ಮೊದಲು ಅಣ್ಣ ಸತೀಶ ಅವರ ಪೂರ್ವಾಪರವನ್ನು ಬರೆದುಕೊಂಡು ಬಾಸ್ ಛೇಂಬರಿಗೆ ಕಳಿಸುತ್ತಾನೆ. ಹಾಗೇ ಛೇಂಬರ್ ಪ್ರವೇಶಿಸುವ ಮಿಕವನ್ನು ಕಂಗಾಲಾಗಿಸಲೆಂದೇ ವಿವಿಧ ಟೆಕ್ನಿಕ್ಕುಗಳಿವೆ. ಬಂದವನಿಗೆ ಕುರ್ಚಿ ಕೊಡುವುದಿಲ್ಲ, ವಿವೇಕಾನಂದನ ಎದುರಿನ ಅಷ್ಟೂ ಕುರ್ಚಿಗಳಲ್ಲಿ ಕುಂಕುಮಧಾರಿ ಧಾಂಡಿಗರು ಕೂತು ಅಷ್ಟೂ ಮಂದಿ ಏಕಕಾಲಕ್ಕೆ ಯಾರ್‍ಯಾರೋ ಲೋಕಾಯುಕ್ತ ಅಧಿಕಾರಿಗಳ ಜೊತೆ ಮೊಬೈಲಿನಲ್ಲಿ ಮಾತಾಡುತ್ತಿರುತ್ತಾರೆ. ಅರ್ಥಾತ್ ಹಾಗೆ ನಟಿಸುತ್ತಿರುತ್ತಾರೆ. ಬಂದವನು ಏನಾದರೂ ಹೇಳಲು ಬಂದರೆ, ಏಕಾಏಕಿ ದೆವ್ವ ಬಂದವನಂತೆ; 'ಏ ಮುಚ್ಕೋಬಾಯಿ... ನೀನೆಂಥಾ ಚೀಟರ್ ಅನ್ನೋದು ನನಗೊತ್ತು. ಲಾಕಪ್ಪಿಗೆ ಹಾಕಿಸ್ತೀನಿ ಹುಷಾರ್!' ಎಂದು ವಿವೇಕಾನಂದ ಹೂಂಕರಿಸುತ್ತಾನೆ.

ಕೊನೆಗೆ ಕಾಟ ತಪ್ಪಿದರೆ ಸಾಕೆಂದು ಬಂದವನು ಅಷ್ಟಿಷ್ಟು ಕಾಸು ಕೊಟ್ಟು ಕೈಮುಗಿಯುತ್ತಾನೆ. ಇದು ಗೊತ್ತಾಗಿಯೇ ಇತ್ತೀಚೆಗೆ ಬಹಿರಂಗ ಸಭೆಯೊಂದರಲ್ಲಿ ವೆಂಕಟಾಚಲ 'ನನ್ನ ಹೆಸರಲ್ಲೂ ವಸೂಲಿ ಮಾಡುವವರು ಹುಟ್ಟಿಕೊಂಡಿದ್ದಾರೆ' ಎಂದು ಪರಿತಪಿಸಿದ್ದಾರೆ. ವಿವೇಕಾನಂದನ ಗ್ಯಾಂಗ್ ಕೆಲವೊಮ್ಮೆ ಕ್ರೈಂ ಡೈರಿ, ಕ್ರೈಂ ಸ್ಟೋರಿಗಳ ಹೆಸರಲ್ಲೂ ಕಾರ್ಯಾಚರಣೆ ನಡೆಸುತ್ತದೆ. ಮುಖ್ಯಮಂತ್ರಿ ಕುಮಾರಸ್ವಾಮಿಯನ್ನು ಯರಾದರೂ ಕಾರ್ಯಕ್ರಮಕ್ಕೆ ಕರೆಯಬೇಕೆಂದರೆ "ಅದಕ್ಕೆ ಬಾಸ್ ಹೆಸರನ್ನೇ ಹಾಕಿ ಆಗ ಸೀಯೆಮ್ ಖಂಡಿತಾ ಬರುತ್ತಾರೆ" ಎನ್ನುತ್ತಾನೆ ಸತೀಶ!


ಇವರನ್ನು ಜೈಲಿಗೆ ದಬ್ಬುವವರ್‍ಯಾರು?

ಪ್ರೊಷ್ಟಿತ ದಿನಪತ್ರಿಕೆಗಳಿಂದ 'ಟುಸ್ ಬಾಂಬ್', 'ಬೆಂಕಿಗಿಂತ ಹೊಗೆ ಜಾಸ್ತಿ', 'ಸಿಡಿಯದೇ ಹೋದ ಢೋಂಗಿ ಬಾಂಬ್' ಎಂದೆಲ್ಲ ಲೇವಡಿ ಮಾಡಿಸಿಕೊಂಡಿದ್ದ 'ಗಣಿರಾಮ' ಜನಾರ್ದನ ರೆಡ್ಡಿಯ 150 ಕೋಟಿ ಲಂಚ ನೀಡಿಕೆ ಬಾಂಬ್ ಕಡೆಗೂ ರಾಜ್ಯ ಹೈಕೋರ್ಟಿನಲ್ಲಿ ಸಿಡಿದಿದೆ.... ಸಿಡಿದು ಸಾಕಷ್ಟು ಸದ್ದು, ಗದ್ದಲ, ಕಂಪನಗಳನ್ನುಂಟುಮಾಡಿದೆ. ವಿಧಾನಸೌಧದ ಮೂರನೇ ಮಹಡಿಯ 'ದೊರೆ'ಯ ದರಬಾರಿನಲ್ಲಿ; ಪದ್ಮನಾಭನಗರದ 'ಪಿತಾಶ್ರೀ'ಗಳ ಅಂತಃಪುರದಲ್ಲಿ!

ಮುಖ್ಯಮಂತ್ರಿ ಕುಮಾರಣ್ಣನವರು ಮತ್ತವರ ಸೋದರ-ಸೋದರಿ-ಅತ್ತಿಗೆಯರ ವಿರುದ್ಧ ಜನಾರ್ದನ ರೆಡ್ಡಿ ಮಾಡಿದ ಲಂಚ ಸ್ವೀಕಾರ ಹಾಗು ಅಕ್ರಮ ಆಸ್ತಿಗಳಿಕೆ ಆರೋಪಗಳ ಬಗ್ಗೆ ತನಿಖೆ ನಡೆಸಲು ಸಿಬಿಐಗೆ ಆದೇಶಿಸಬೇಕೆಂದು ಕೋರಿ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ರೆಡ್ಡಿ ಸಲ್ಲಿಸಿದ್ದ ರಿಟ್-ಅರ್ಜಿಯನ್ನು ಏಕಸದಸ್ಯ ಪೀಠದ ನ್ಯಾಯಮೂರ್ತಿ ರಮೇಶ್ ವಿಚಾರಣೆಗೆ ಅಂಗೀಕರಿಸಿದ್ದಾರೆ....




ಅಷ್ಟೇ ಅಲ್ಲ ಈ ರಿಟ್ ಅರ್ಜಿಯನ್ನು "ಸಾರ್ವಜನಿಕ ಹಿತಾಸಕ್ತಿಯ ಅರ್ಜಿ" ಎಂದು ಬಣ್ಣಿಸಿ ಅದನ್ನು ಡಿವಿಜನ್ ಬೆಂಚಿನಿಂದ ಇತ್ಯರ್ಥ ಪಡಿಸಬೇಕೆಂದು ಕೋರಿ ಮುಖ್ಯ ನ್ಯಾಯಾಧೀಶರಿಗೆ ಶಿಫಾರಸ್ಸು ಮಾಡಿದ್ದಾರೆ....

ಅರ್ಜಿದಾರ ರೆಡ್ಡಿಯನ್ನು "ಅತ್ಯುನ್ನತ ಅಧಿಕಾರಸ್ಥಾನಗಳಲ್ಲಿರುವವರ ನಡವಳಿಕೆಯಿಂದ ಆಘಾತಗೊಂಡಿರುವ ಒಬ್ಬ ಕೈಗಾರಿಕೋದ್ಯಮಿ, ವ್ಯಾಪರಸ್ಥ ಹಾಗು ಸಾರ್ವಜನಿಕ ಸೇವಕ"ನೆಂದೇ ಗುರುತಿಸುವ ಮೂಲಕ ಮಾನ್ಯ ನ್ಯಾಯಮೂರ್ತಿಗಳು ರೆಡ್ಡಿಯ ಅರ್ಜಿಯಲ್ಲಿ ಮಾಡಲಾದ ಆರೋಪಗಳು ಹಾಗು ಅವುಗಳಿಗೆ ಪೂರಕವಾಗಿ ಸಲ್ಲಿಸಲಾದ ಬೃಹತ್ ಪ್ರಮಾಣದ ದಾಖಲಾತಿಗಳ (ಸಿಡಿ, ಆಡಿಯೋ ಇತ್ಯಾದಿ ಸೇರಿ) ವಿಶ್ವಾಸಾರ್ಹತೆಯನ್ನು ಮಾನ್ಯ ಮಾಡಿದಂತಾಗಿದೆ... ಹಾಗೆಯೇ ಹಾಲಿ ಮುಖ್ಯಮಂತ್ರಿ ಮತ್ತವರ ಕುಟುಂಬ ವರ್ಗ, ಗೃಹ ಸಚಿವರು ಮತ್ತು ಗಣಿ ಹಾಗು ಅರಣ್ಯ ಸಚಿವರ ವಿರುದ್ಧದ ಆರೋಪಗಳು ತೀರ ಗುರುತರವಾದವುಗಳೆಂಬ ವಾಸ್ತವವನ್ನು ಪರೋಕ್ಷವಾಗಿ ಅನುಮೋದಿಸಿದಂತಾಗಿದೆ.



'ರಾಜವಂಶ'ಕ್ಕೆ ಶಾಕ್!!

ಬಳ್ಳಾರಿ ರೆಡ್ಡಿಗೆ ಮೊದಲ ಗೆಲುವು...

ಸಾಮಂತರಂತೆ ವರ್ತಿಸುತ್ತ ಬಂದ ಮಾಧ್ಯಮಶೂರರು ಹಾಗು ಅಭಿವೃದ್ಧಿರಂಗದ ಅಧಿಕಾರಸ್ಥ ಶಿರೋಮಣಿಗಳು ಆ ಸಿಡಿಗಳಲ್ಲಿನ ಸತ್ಯಾಂಶಗಳಿಗಿಂತ ಅವುಗಳ ಪ್ರೊಡಕ್ಷನ್ ಮೌಲ್ಯಗಳನ್ನೇ ಎತ್ತಿ ಹೇಳಿ ಜಾಲಾಡಿಬಿಟ್ಟಿದ್ದರಲ್ಲವೆ?

ಸಿಡಿಗಳ ಗುಣಮಟ್ಟ ಛೇಡಿಸಿದ್ದ ಗಣ್ಯರೆಲ್ಲಿ?

ಕಳೆದ ಆಗಸ್ಟ್ 23 ರಂದು ಬಳ್ಳಾರಿಯಲ್ಲಿ ಜನಾರ್ದನ ರೆಡ್ಡಿ ಪ್ರದರ್ಶಿಸಿದ್ದ ವಿಡಿಯೋ ಸಿಡಿಗಳು ಮತ್ತು ಸೆಪ್ಟೆಂಬರಿನಲ್ಲಿ ಸಿಎನ್‌ಎನ್-ಐಬಿಎನ್ ಟಿವಿ ಚಾನೆಲ್ಲಿನಲ್ಲಿ ಬಿತ್ತರಿಸಲ್ಪಟ್ಟ ಸಿಡಿ ದೃಶ್ಯಾವಳಿಗಳು ಮೇಲ್ನೋಟಕ್ಕೆಯೆ ಗಾಬರಿಗೊಳಿಸುವಂತಿದ್ದವು.... ಆದರೆ ಕರ್ನಾಟಕದ ಆಳುವ ವರ್ಗದ

ಅವುಗಳ ಪಿಕ್ಚರ್ ಕ್ವಾಲಿಟಿ ಸೆಟ್ಟಾಗಿಲ್ಲ, ಸೌಂಡ್ ರೆಕಾರ್ಡಿಂಗ್ ಕಳಪೆಯಾಗಿದೆ, ಮಾತುಗಳು ಅಸ್ಪಷ್ಟವಾಗಿದೆ.... ಇತ್ಯಾದಿ ಯಾವುದೋ ಕಮರ್ಷಿಯಲ್ ಸಿನಿಮಾದ ವಿಮರ್ಶೆ ಮಾಡುವ ತರ ಟಿಪ್ಪಣಿ ಬರೆದು ಕೈತೊಳೆದುಕೊಂಡ ಮಾಧ್ಯಮ ಸ್ನೇಹಿತರು ತಮ್ಮ ಕುಮಾರ-ನಿಷ್ಠೆಯನ್ನು ಬಹಿರಂಗವಾಗಿಯೇ ಪ್ರದರ್ಶಿಸಿಬಿಟ್ಟಿದ್ದರು.

ಮತ್ತೊಂದೆಡೆ ಆ ವಿಡಿಯೋಗಳಲ್ಲಿ ಕಾಣಿಸಿಕೊಂಡ ಮಂತ್ರಿ ಚೆನ್ನಿಗಪ್ಪ ಅದು ಕಂಪ್ಯೂಟರ್ ಚಮತ್ಕಾರದಿಂದ ಸೃಷ್ಟಿಸಲಾದ ಬೋಗಸ್ ಸಿಡಿ ಎಂದು ಅರ್ಭಟಿಸಿದ್ದರು...

ಕಾಡುಕಬಳಿಕೆ ದೃಶ್ಯದಲ್ಲಿ ಸ್ವತಃ ಪೊಲೀಸ್ ಅಧಿಕಾರಿ ನಾರಾಯಣ ಗೌಡರೇ ಕಾಣಿಸಿಕೊಂಡಾಗ ಇವರೆಲ್ಲರ ಮಾನರಕ್ಷಣೆಗೆ ಧಾವಿಸಿದ ಜೆಡಿಎಸ್ ಪಿತಾಶ್ರೀ ದೇವೇಗೌಡಾಜಿಯೇ ಪತ್ರಿಕಾಗೋಷ್ಠಿಯಲ್ಲಿ ಪ್ರತ್ಯಕ್ಷರಾದರು... "ಇವು 'ಮುನ್ನಾಭಾಯಿ' ಹಿಂದಿ ಚಿತ್ರದಲ್ಲಿ ಬಳಸಿದಂತಹ ಡಿಜಿಟಲ್ ಟೆಕ್ನಾಲಜಿಯಿಂದ ಸೃಷ್ಟಿಸಲಾದ ವಂಚನೆ ಚಿತ್ರಗಳು" ಎಂದೇ ಗೇಲಿ ಮಾಡುತ್ತ ಗಹಗಹಿಸಿ ನಕ್ಕಿದ್ದರು...

ಈ ಸಿಡಿಗಳ ಜತೆಗೆಯೇ ಜನಾರ್ದನ ರೆಡ್ಡಿ ಪ್ರತಿಯೊಬ್ಬ ಪತ್ರಕರ್ತನಿಗೂ ಪ್ರತ್ಯೇಕವಾಗಿ ಸರಬರಾಜು ಮಾಡಿದ್ದ ಸುಮಾರು 300 ಪುಟಗಳ ದಾಖಲಾತಿಗಳನ್ನು ಬಹುಶಃ ಯಾರೊಬ್ಬರೂ ಸೀರಿಯಸ್ಸಾಗಿ ವಿಶ್ಲೇಷಿಸುವ ಗೋಜಿಗೆ ಹೋಗಲಿಲ್ಲ... ಗೌಡರ ಕುಟುಂಬದ ಆಸ್ತಿ ಖರೀದಿ ವಹಿವಾಟುಗಳು, ಬಾಲಣ್ಣ-ರಮೇಶಣ್ಣಗಳ ಐರನ್ ಓರ್ ವ್ಯವಹಾರಗಳು ಕವಿತಾ-ಅನಿತಾ ಇತ್ಯಾದಿಗಳ ಕೋಟ್ಯಂತರ ರೂಪಾಯಿ ಬ್ಯಾಂಕ್ ಚಲಾವಣೆಗಳು, ಕುಮಾರಣ್ಣನ ಕೇಬಲ್ ಟಿವಿ-ಕಸ್ತೂರಿ ಚಾನೆಲ್ ಕಂಪನಿ ವಹಿವಾಟುಗಳೆಲ್ಲದರ ಸಮಗ್ರ ಪುರಾವೆಗಳು ಕೈಗೆ ದಕ್ಕಿದಾಗ್ಯೂ ನಮ್ಮ ಮಾಧ್ಯಮ ಮಿತ್ರ ಮಂಡಳಿಗಳಿಗೆ ಅವುಗಳ 'ಐತಿಹ್ಯ' ವನ್ನರಿಯುವ ವ್ಯವಧಾನವೇ ಇದ್ದಂತಿರಲಿಲ್ಲ...


ಮಾತೆತ್ತಿದರೆ 'ನನ್ನ ಸೋದರ, ನನ್ನ ಅತ್ತಿಗೆ, ನನ್ನ ಸೋದರಿಯರು' ಎಂದು ಚಡಪಡಿಸುವ ಮುಖ್ಯಮಂತ್ರಿ, ಹಾಗೆಯೇ ಅವರಿಗಿಂತ ಹೆಚ್ಚು ನಿಸ್ಸಂಕೋಚದಿಂದ "ನನ್ನ ಕುಟುಂಬ, ನನ್ನ ವಂಶ, ನನ್ನ ಮಗ" ಎಂದು ಸಾರ್ವಜನಿಕವಾಗಿ ವಕಾಲತ್ತು ಮಾಡತೊಡಗಿರುವ ಮಾಜಿ ಪ್ರಧಾನಿಗಳ ವರ್ತನೆಯನ್ನು ಕಂಡು ಅವರ ಅಭಿಮಾನಿಗಳೇ ಅಸಹ್ಯ ಪಟ್ಟುಕೊಳ್ಳುತ್ತಿರುವಂತೆಯೇ ಈ ಹೈಕೋರ್ಟ್ ತೀರ್ಪು ಹೊರಬಿದ್ದಿದೆ...

ರೆಡ್ಡಿ ಸಲ್ಲಿಸಿದ್ದ ಖಾಸಗಿ ರಿಟ್ ಅರ್ಜಿ ಇದೀಗ ನ್ಯಾಯಾಂಗದಿಂದಲೇ ಸಾರ್ವಜನಿಕ ಹಿತಾಸಕ್ತಿಯ ಅರ್ಜಿ ಎಂದು ಪುರಸ್ಕರಿಸಲ್ಪಟ್ಟಿದೆ!!

-ರವೀಂದ್ರ ರೇಶ್ಮೆ

ಸಿಬಿಐ ತನಿಖೆ: ರಾಜ್ಯಪಾಲರ ಸಿಗ್ನಲ್?!

ಕಳೆದೊಂದು ತಿಂಗಳಲ್ಲಿ ಎರಡು ಬಾರಿ ದಿಲ್ಲಿಗೆ ದೌಡಾಯಿಸಿದ್ದ ಧರಂ ಸಿಂಗ್-ಖರ್ಗೆ ನೇತೃತ್ವದ ಕರ್ನಾಟಕದ ಕಾಂಗ್ರೆಸ್ ನಿಯೋಗಕ್ಕೆ ನಿಜಕ್ಕೂ 'ಆಶಾಕಿರಣ' ಮೂಡಿದ್ದು ಎಲ್ಲಿ ಗೊತ್ತೆ? ಕೇಂದ್ರ ಗೃಹ ಸಚಿವ ಶಿವರಾಜ್ ಪಾಟೀಲ್ ಆಸ್ಥಾನದಲ್ಲಿ!



ಮೊದಲು ಸೋನಿಯಾ ಮೇಡಂರವರ ಖಾಸಾ ದರಬಾರಿನಲ್ಲೇ ಅತ್ಯಂತ ಆಸಕ್ತಿದಾಯಕ ದರುಶನ ಭಾಗ್ಯ ಪಡೆದ ಕಾಂಗ್ರೆ ಮುಖಂಡರುಗಳಿಗೆ ಶಿವರಾಜ್ ಪಾಟೀಲರ ಮನೆಯುಲ್ಲಂತೂ ಅತ್ಯಂತ ಚಮತ್ಕಾರಿಕ ಅನುಭವ ಸಿಕ್ಕಿಬಿಟ್ಟಿತು....

ಕರ್ನಾಟಕದ ಹಾಲಿ ರಾಜವಂಶದ ವಿರುದ್ಧದ ಆರೋಪಪಟ್ಟಿಯ ಮೇಲೆ ಕಣ್ಣಾಡಿಸಿದ ಪಾಟೀಲ್ ಲೋಕಾಭಿರಾಮವಾಗಿ ಮಾತನಾಡುತ್ತ ದಿಢೀರನೆ ಒಂದು ಗುಟ್ಟನ್ನು ತೇಲಿಬಿಟ್ಟರು: "ಡೋಂಟ್ ವರಿ, ನಿಮ್ಮ ಗವರ್ನರ್ ಸಾಹೇಬ್ರು ಕಳಿಸಿರೋ ರಿಪೋರ್ಟ್‌ನಲ್ಲಿ ಕೂಡ ನಿಮ್ಮ ಬೇಡಿಕೆಗೆ (ಸಿಬಿಐ ತನಿಖೆ!) ಪೂರಕವಾದ ಅಂಶಗಳೇ ಇವೆ".... ಆಕಸ್ಮಿಕವಾಗಿ ಕೇಂದ್ರ ಒಳಾಡಳಿತ ಸಚಿವರ-ಬಾಯಿಂದುದುರಿದ ಈ ಅಣಿಮುತ್ತುಗಳನ್ನು ಕೇಳಿಸಿಕೊಂಡಿದ್ದೇ ತಡ ಧರಂ-ಖರ್ಗೆ-ಡಿಕೆ-ಎಚ್ಕೆ-ದೇಶಪಾಂಡೆಗಳೆಲ್ಲ ರೋಮಾಂಚನಗೊಂಡರು....

ಅಲ್ಲಿಯವರೆಗೂ ಗವರ್ನರ್ ಚತುರ್ವೇದಿಯವರನ್ನು ಎನ್‌ಡಿಎ ನಾಮಾಂಕಿತ ಏಜೆಂಟ್ ಎಂಬಂತೆ ನಡೆದು ಕೊಳ್ಳುತ್ತಿದ್ದ ಕರ್ನಾಟಕದ ಕಾಂಗ್ರೆಸ್ಸಿಗರ ಹೃದಯಾಂತರಾಳದಲ್ಲಿ ಅವರ ಬಗ್ಗೆ ಭಾರೀ ಗೌರವ-ಪ್ರೀತಿಯ ಮಹಾಪೂರವೇ ಉಕ್ಕಿ ಹರಿಯತೊಡಗಿತು!

ಮರುದಿನ ಸಂಜೆ ಪ್ರಧಾನಿ ಮನಮೋಹನ್‌ಸಿಂಗರು ಸಹ ನಿಗದಿತ ವೇಳೆಗೆ ಸರಿಯಾಗಿ ರಾಜ್ಯ ಕಾಂಗ್ರೆಸ್ಸಿಗರ ಆಗಮನಕ್ಕಾಗಿ ಕುತೂಹಲದಿಂದಲೇ ಕಾದಿದ್ದರು... "ಯಾವ ಯಾವ ಇಲಾಖೆ ಏನೇನು ಅಧಿಕಾರ ಚಲಾಯಿಸಬೇಕಾಗಿದೆಯೊ ಖಂಡಿತವಾಗೂ ಚಲಾಯಿಸೇ ತೀರುತ್ತವೆ ಅನ್ನೋ ಆಶ್ವಾಸನೆ ಕೊಡ್ತೇನೆ..." ಎಂದು ಭರವಸೆಯಿತ್ತರು ಪ್ರಧಾನಿ....

ಮೊದಲ ಭೇಟಿಯ ಹುಮ್ಮಸ್ಸಿನಲ್ಲಿಯೇ ಕರ್ನಾಟಕದ ಕಾಂಗ್ರೆಸ್ಸಿಗರು ಮೊನ್ನೆ ಮತ್ತೊಂದು ಬಾರಿ ದಿಲ್ಲಿಗೆ ದೌಡಾಯಿಸಿ ಕುಮಾರಣ್ಣನವರ ಕುಟುಂಬವರ್ಗ ಮತ್ತವರ ಮಂತ್ರಿ ಸಹೋದ್ಯೋಗಿಗಳ ವಿರುದ್ಧದ ಆರೋಪ ಪಟ್ಟಿಯನ್ನು ರಾಷ್ಟ್ರಪತಿ ಕಲಾಂರವರಿಗೂ ಸಲ್ಲಿಸಿ ಖುದ್ದು ಮಾತಾಡಿ ಬಂದದ್ದು....

ರಾಷ್ಟ್ರಪತಿ ಕಲಾಂ ಕೂಡ ತುಂಬ ಆಸಕ್ತಿಯಿಂದ audience (ಆಲಿಕೆ) ನೀಡಿದರೆಂದು ಉಬ್ಬಿಹೋದರು ಧರಂ-ಖರ್ಗೆ-ಡಿಕೆ-ಎಚ್ಕೆಗಳು... ಈ ಬಾರಿ ಇತ್ತೀಚಿನ ಮಂಗಳೂರು ಕೋಮುಗಲಭೆ ರಾದ್ಧಾಂತವೂ ಸೇರಿಕೊಂಡಿತ್ತು ಇವರು ಸಲ್ಲಿಸಿದ್ದ ಚಾರ್ಜ್‌ಶೀಟಿಗೆ....

ಇತ್ತೀಚಿನ ಮಾಹಿತಿಯಂತೆ ಕೇಂದ್ರ ಸರ್ಕಾರದ ಹಣಕಾಸು, ಅರಣ್ಯ, ಗಣಿ, ಪರಿಸರ ಹಾಗು ರಫ್ತು ಇಲಾಖೆಗಳು ಕರ್ನಾಟಕದ ಗೌಡ-ವಂಶದ ಆಸ್ತಿಗಳಿಕೆ ಮತ್ತಿತರ ವಹಿವಾಟುಗಳಿಗೆ ಸಂಬಂಧಿಸಿದ ದಾಖಲೆಗಳ ಕೂಲಂಕಷ ವಿಶ್ಲೇಷಣೆಗೆ ತೀವ್ರ ಚಾಲನೆ ನೀಡಿವೆಯಂತೆ!!

-ರೇಶ್ಮೆ

ರೊನಾಲ್ಡ್ ರೇಗನ್ ಪಾರ್ಟಿ!

ಕ್ಷಮಿಸಿ... ಇದು ತಮಾಷೆಗಾಗಿ

ಅವರೊಬ್ಬ ಯುವ ರಾಜಕರಣಿ. ಗ್ರಾಮಾಂತರ ಪ್ರದೇಶದವರು, ವಿಧ್ಯಾಭ್ಯಾಸ ನಶ್ವರ, ರಾಜಕೀಯವಾಗಿ ಮಹತ್ವಾಕಾಂಕ್ಷೆ, ವ್ಯವಹಾರಗಳಲ್ಲಿ ಪಳಗಿದ ಆಸಾಮಿ. ಕ್ಯಾಂಪ್ ಬೆಂಗಳೂರು. ಇಂತವರಿಗೊಬ್ಬ ಗೆಳೆಯ. ಅವರ ಬಯೋಡಾಟಾ ಸಹ ಡಿಟೋ. ಆದರೆ ಬೆಂಗಳೂರಿನ ಮಟ್ಟಿಗೆ ಸೀನಿಯರ್. ಈ ಸೀನಿಯರ್ ಕೈಗೆ ಅದ್ಯಾರೊ "ಅಮೆರಿಕನ್ ಅಂಬೆಸಿ" ಯವರು ಏರ್ಪಡಿಸಿದ್ದ ಔತಣ ಕೂಟದ ಆಮಂತ್ರಣ ಪತ್ರ ಕೊಟ್ಟಿದ್ದರು. ಒಬ್ಬರೆ ಹೋಗಲು ಬೋರ್ ಅಥವಾ ಭಯವಾದ ಇವರು ತಮ್ಮ ಯುವರಾಜಕಾರಣಿ ಗೆಳೆಯನನ್ನು ಕರೆದರು.

"ಬತ್ತೀಯ? 'ಎಲ್ಲನ್ ಮ್ಯಾನರ್ಸ್'ನಲ್ಲಿ ಊಟ ಅಯ್ತೆ." (ವಿಂಡ್ಸರ್ ಮ್ಯಾನರ್ ಎಂದು ಓದಿಕೊಳ್ಳಿ) "ಏನ್ ವಿಶೇಷ?" ಗೆಳೆಯರು ಕೇಳಿದರು.

ಆದಕ್ಕೆ ಈ ಬೆಂಗಳೂರಿಗೆ ಸೀನಿಯರ್ ಉತ್ತರಿಸಿದ್ದೇನು ಗೊತ್ತಾ..? "ಏ.. ರೊನಾಲ್ಡ್ ರೇಗನ್ ಅಂತ ಅವ್ರೆ. ಅವ್ರೇ ಊಟಕ್ಕೆ ಕರ್‍ದಿರದು". ರೊನಾಲ್ಡ್ ರೇಗನ್ ಅಂದಿನ ಅಮೆರಿಕಾ ಅಧ್ಯಕ್ಷ ಎಂಬ ಕನಿಷ್ಠ ಜ್ಞಾನವೂ ಇಲ್ಲದ ಯುವ ರಾಜಕಾರಣಿ "ಸರಿ ನಡಿ, ಯಾರ್ ಕರ್‍ದಿದ್ರೆ ಏನು? ಬಟ್ಟೆ ಗುಂಡು, ತುಂಡು ಅದೂ ಫೈವ್‌ಸ್ಟಾರ್ ಓಟ್ಲಲ್ಲಿ" ಎಂದು ಹೊರಟೇ ಬಿಟ್ಟರು.


ಔತಣ ಕೂಟ ಬಿರುಸಾಗಿ ಸಾಗಿತ್ತು, ಅಲ್ಲಿ ಹಲವಾರು ಅಮೆರಿಕನ್ನರು ಇದ್ದರು. ಮಹಾ ಮಾತುಗಾರ "ಸೀನಿಯರ್ ಬೆಂಗಳೂರ್"ಗೆ ಚಡಪಡಿಕೆ ಆರಂಭವಾಯ್ತು. ಆದರೆ ಇಂಗ್ಲಿಷ್ ಬರೋದಿಲ್ಲ, ಆದರೂ ಭಂಡ ಧೈರ್ಯ ಮಾಡಿ, ಅಲ್ಲೇ ಗ್ಲಾಸು ಹಿಡಿದು ಏಕಾಂಗಿಯಾಗಿ ಕುಡಿಯುತ್ತಿದ್ದ ಅಮೆರಿಕನ್ ಒಬ್ಬನೊಂದಿಗೆ ಮಾತು ಆರಂಭಿಸೇಬಿಟ್ಟರು. ಪಾಪ ಅಮೆರಿಕನ್‌ಗೆ ಅರ್ಥವಾಯ್ತೋ ಬಿಡ್ತೋ, ಇವರು ಹೇಳಿದ್ದಕ್ಕೆಲ್ಲಾ ಎಸ್ ಎಸ್ ಎಂದು ಹಲ್ಲು ಬಿಟ್ಟು ಕೊನೆಗೆ ಬೈಬೈ ಎಂದು ಹೇಳಿ ಜಾಗ ಖಾಲಿ ಮಾಡಿಬಿಟ್ಟ.

ಇಲ್ಲಿ ಗ್ಲಾಸಿನ ಮೇಲೆ ಗ್ಲಾಸು ಏರಿಸುತ್ತಾ ನಿಂತಿದ್ದ ಗೆಳೆಯನ ಬಳಿ ಬಂದ "ಬೆಂಗಳೂರ್ ಸೀನಿಯರ್" ಹೆಮ್ಮೆಯಿಂದ "ನಾನೀಗ ಮಾತಾಡ್ತಾ ಇದ್ನಲ್ಲಾ, ಅವರ್‍ಯಾರು ಗೊತ್ತಾಯ್ತಾ" ಅಂತ ಕೇಳದ್ರು.

ಕುಡಿ-ತಿನ್ನು ಭರಾಟೆಯಲ್ಲಿದ್ದ ಯುವ ರಾಜಕಾರಣಿ "ಏಯ್ ನನ್ಗೆ ಅಷ್ಟೂ ಗೊತ್ತಾಗಲ್ವಾ? ಅವ್ನೇ ತಾನೆ ರೊನಾಲ್ಡ್ ರೇಗನ್.." ಎನ್ನಬೇಕೇ? ಹೀಗೆ ತಮ್ಮ ಅಗಾಧ ಜ್ಞಾನವನ್ನು ಪ್ರದರ್ಶಿಸಿದವರು ಮಾಜಿ ಶಾಸಕ, ಮಾಜಿ ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ(ಬಿಡಿಎ) ಅಧ್ಯಕ್ಷ ಎಲ್.ಆರ್.ಶಿವರಾಮೇಗೌಡ. "ರೊನಾಲ್ಡ್ ರೇಗನ್" ಪಾರ್ಟಿಗೆ ಅವರನ್ನು ಕರೆದೊಯ್ದವರು ಮೈಸೂರ್ ಮಿನರಲ್ಸ್‌ನ ಮಾಜಿ ಅಧ್ಯಕ್ಷ ಎಚ್.ರಾಮಕೃಷ್ಣ, ಉರುಫ್ ಶೆಫರ್ಡ್ ರಾಮಕೃಷ್ಣ



ಜೆಡಿಎಸ್ ಚಿಕನ್‌ಗುನ್ಯ ಬಿಜೆಪಿ ಡೆಂಗೆ ಜ್ವರ ಇದ್ದಂಗೆ



ತುಂಬ ತರಾತುರಿಯಿಂದ ಹೋಗುತ್ತಿದ್ದ ಕಲಕಪ್ಪ ಮಾಸ್ತರು ಜುಮ್ಮಿ ಕಣ್ಣಿಗೆ ಬಿದ್ದ.

"ರೀ ಮೇಟ್ರೇ, ಕಲಕಪ್ಪಾರೆ ಬರಿ, ಇಲ್ಲೀ" ಎಂದು ಕೂಗಿದಳು.

"ಇದೇನು ಬಿಸ್ಲುರೀ? ನಮ್ಮ ಕಡಿಕೀ ಪಾದನ್ನಂಗೆ. ಹ್ವಡಿಯಕತ್ಯೆತಿ ಅವುನವುನ್" ಎಂದುಕೊಂಡು ಕಲಕಪ್ಪ ಬಂದ.

"ಕ್ಯಾಣಾವಾಗಿದ್ದಿರಲ್ಲ ಯಾಕೆ?"

"ಅಲ್ರೀ ಅಕ್ಕವರ, ನೀವಾ ಹೇಳ್ರಿ. ನಾವು ಮೂರು ಮಂದಿ ಮಾಸ್ತರಿದ್ವೋ. ಈಗ ಇಬ್ರಾಗಿವಿ. ಇಬ್ರು ಮಾಸ್ತರು ಏಳು ಸೆಕ್ಷನ್ನಿಗೆ ಪಾಠ ಹೇಳೂದಂದ್ರ ಹ್ಯಂಗ್ರಿ?"

"ಯಾಕೆ ಲಕ್ಷ್ಮಣ ಮೇಟ್ರಲವೆ?"

"ಅವ ಸಾರಾಯಿ ಕುಡಕಂಡು ಬರತಿದ್ನರಿ. ರೆಡ್ ಹ್ಯಾಂಡಾಗ ನಮ್ಮ ಇಲಾಖೆ ಅಧಿಕಾರಿಗಳಿಗೆ ಸಿಕ್ಕಿದ. ಸಸ್ಪೆಂಡ್ ಮಾಡ್ಯಾರ. ಈಗ ನಾನು ಆಕಿ ಗೌರಮ್ಮ ಅಂತ ಇಬ್ಬರೇ ಆದಿವಿ. ಇನ್ನೊಬ್ಬರ ಕೊಡ್ರ್ಯೊ ಮಾರಾಯರ ಅಂದ್ರ ಹ್ಯಾಂಗೋ ನಡೆಸಿ ಅನ್ನಕತ್ಯಾರ. ಹ್ಯಾಂಗ ಮಾಡೂನ್ರಿ ಅಕ್ಕಾವರ."

"ಹ್ಯಂಗೆ ಮಾಡನ ಅಂದ್ರೆ ನಾನು ಬಂದು ಪಾಠ ಮಾಡಕ್ಕಾದತೇ?"

"ನೀವು ಬರೂದು ಬ್ಯಾಡ್ರಿ. ನಿಮ್ಮೂರಿನ ಶಾಲಿ ಕತಿ ಹಿಂಗದ ಅಂತ ಮಂತ್ರಿಗೇಳ್ರಿ."

"ಅಯ್ಯೋ ಈಗಿನ ಮಂತ್ರಿಗಳಿಗೇಳ್ತಿಯಾ? ಹೋಗಿ ಅವ ಮಕನೋಡಕ್ಕೆ ಬೇಜಾರಾಯ್ತದೆ."

"ನನಗೂ ಅಂಗಾ ಅಕ್ಕತ್ರಿ. ಈಗಿರೊ ಮಂತ್ರಿಗಳೇನದಾರಲ್ಲ ಆ ಸೂಳಿಮಕ್ಕಳು ಎಕ್ಸಪೀರಿಯನ್ಸ್ ಹ್ಯಾಂಡಲ್ಲ, ಅದಕ ನಾವು ಏನೊ ಹೇಳಿದ್ರೆ ಅವುರು ಇನ್ನೇನೊ ಹೇಳತರೆ."

"ಅದೆ ಕಂಡ್ರಿ ನಾನೇಳಿದ್ದು, ಆ ಲಕ್ಷ್ಮಣ ಕುಡಕಂಡು ಬತ್ತನೆ. ಅವುನು ಪಾಠ ಹೇಳತಯಿದ್ರೆ ಹುಡುಗ್ರು ಗುಲುಕುನಗ ನಗ್ತವೆ. ಯತ್ಲಗಾರ ಹಾಕಪ್ಪ ಅಂತ ಮಿನಿಟ್ರಗೇಳಿದೆ. ಅವುನೇನಂದ ಗೊತ್ತೆ? ಯಂಗೊ ನಿಭಾಯಿಸಕ್ಕ ಅಂದ."

"ಹೌದ್ರ, ಇದೀ ಸರ್ಕಾರ ಏನೈತಿ, ಇದು ದಿಕ್ಕು ತಪ್ಪಿ ಕ್ವಂಟೈತ್ರಿ. ಒಮ್ಮಿ ನಮ್ಮ ಕಡಿಕೋಕ್ಕತಿ, ಒಮ್ಮಿ ಮಂಗಳೂರು ಕಡಿಕೋಕ್ಕತಿ, ಇನ್ನೊಮ್ಮಿ ಮೈಸೂರು ಕಡಿಕೋಕ್ಕತಿ. ನನಗನಕರ ಇದ ಬೀಳೂಮಟ್ಟ ಇದರ ಬಾಳೇವೆ ಇಷ್ಟು ಅನಸಾಕತ್ತೈತಿ."

"ಊ ಕಂಡ್ರಿ ಜನ ನಂಬುಕೆ ಕಳಕಂಡು ಕಾಯ್ತಾ ಅವುರೆ" ಎಂದ ಉಗ್ರಿ.

"ಅಲ್ರಿ ನೀವೇ ಹೇಳ್ರಿ ಉಗ್ರಿ. ಊರಿನ ಯುವಕರದೀರಿ. ಇಲ್ಲೀಮಟ್ಟ ನಾನೂ ನೋಡಾಕತ್ತಿನಿ. ನಿಮಗೂ ನಿಮ್ಮೂರಿನ ಶಾಲಿಗೂ ಸಂಬಂಧವೇ ಇಲ್ಲ ಅನ್ನಂಗದೀರಿ ಹೌದಿಲ್ಲೊ?"

"ಇಸಿಸಿ ನಾನೇನು ಮಾಡನ್ರಿ, ಸಂಬ್ಳ ತಗಳೋರು ನೀವು ಪಾಠ ಹೇಳೋರು ನೀವು" ಎಂದು ಉಗ್ರಿ ಸಿಟ್ಟಿನಿಂದ ಪ್ರತಿಕ್ರಿಯಿಸಿದ.

"ಅಂಗಲ್ರಿ. ಕದೀ ಮನಿ ಬಡವಿ ಯಾಕವಳ ಅಂದ್ರ, ಹೇತು ಬರೊ ಮಂದಿ ತಿಕಕ್ಕೆ ನೀರು ಕೊಡಕ್ಕವುಳ ಅಂತ. ಈ ಊರಿನ ಶಾಲಿಗಿ ಮೇಷ್ಟ್ರ ಕಡಿಮೆ ಅದಾರ ಅಂದ್ರೆ ಆ ಕಲಕಪ್ಪ ಮಾಸ್ತರದಾನ ನೋಡಿಕೊತನೆ ಅಂದ್ರೆ ಹ್ಯಂಗ್ರಿ? ಇದರ ನಡವಿ ತಲಿಕೆಟ್ಟ ಸರ್ಕಾರ ಒಂದನೇ ಕ್ಲಾಸಿಂದ್ಲೆ ಇಂಗ್ಲೀಸ್ ಹೇಳಿಕೊಡಿ ಅಂತ ಆರ್ಡರ್ ಮಾಡ್ಯಾರ ಗುರತೇನ?"

"ಯಂಗೊ ಎಬಿಸಿಡಿ ಕಲಿಸಿ ಕೈಬುಡ್ರಿ ಆತ್ರಗೆ."

"ಅಂಗೆ ಆತಲ್ರಿ ಈಗ. ಈಗಾಗಲೇ ಅಕ್ಟೋಬರ್ ತಿಂಗಳು. ಹುಡ್ರು ಪಾಠ ಅಂಗೇ ಅದಾವು. ಸಪಿಸಿಯೆಂಟ್ ಮಾಸ್ತರಿಲ್ಲ, ಅದರಾಗ ಇಂಗ್ಲಿಸ್ ಲಾಂಗವೇಜು ಟೀಚ್ ಮಾಡಬೇಕಂತ."

"ಅಂಗರೆ ಅಹ ಇಕ್ಬಿ ಕಲಸಂಗಿಲ್ಲ ಅನ್ನಿ?" ಎಂದ ಸೀರ.

"ಅದರ ಕೂಡೆ ಇದನೂ ಕಲಸಬೇಕಂತ್ರೀ ಸೀರಪ್ಪಾರೆ."

"ನಿಮಗೇ ಇಂಗ್ಲೀಸ್ ಬತ್ತದೊ ಇಲವೊ, ಇನ್ನ ನೀವ್ಯಂಗೆ ಇಂಗ್ಲಿಸ್ ಕಲುಸ್ತಿರಿ ಮೇಷ್ಟ್ರೆ?" ಎಂದ ಉಗ್ರಿ.

"ಉಗ್ರಿ ಅಂಗನ್ನಾಕೋಗಬ್ಯಾಡ್ರಿ, ಹಾಂಗ ನೋಡಿದ್ರೆ ನಾವು ಮಕ್ಕಳಿಗೆ ಕೊಡತಾಯಿರೊ ಜ್ಞಾನ ಏನು ಗುರತೇನ. ಬರೀ ಓದೂದು ಬರಿಯೂದು ಅಪ್ಪಾರಿ. ಇನ್ನ ದರವೊಂದುನೂ ಅವಾ ಕಲ್ತುಗೊತಾವು. ಸರ್ಕಾರ ಇಂಗ್ಲಿಸ್ ನೀವಾ ಹೇಳಿಕೊಡ್ರಿ ಅಂದ್ರ ನಾವು ತಿಳದಷ್ಟು ಅವುಕೂ ಹೇಳಿಕೊಡ್ತಿವಿ. ಪ್ರಶ್ನೆ ಅದಲ್ಲ, ಕೆಲವೊಂದು ಕಡಿಕೆ ಶಾಲಿನಾ ಇಲ್ಲ, ಕೆಲವೊಂದು ಕಡಿಕೆ ಮಾಸ್ತರಿಲ್ಲ, ಇದ್ರು ಅವುರಿಗೆ ಇಂಗ್ಲಿಸ್ ಬರಂಗಿಲ್ಲ, ನೀವು ಬಂದು ಹೇಳಿಕೊಡ್ತಿರೇನು?"

"ನಾನೇಳಿಕೊಡ್ತಿನಿ ಬುಡ್ರಿ ಕಲಕಪ್ಪಾರೆ" ಎಂದುಕೊಂಡು ವಾಟಿಸ್ಸೆ ಬಂದ.

"ಬೇಶಾತು ಬುಡ್ರಿ ಅವುನವುನ್, ನಮ್ಮ ಶಾಲಿ ಹುಡ್ರು ನನ್ನ ಕೂಡಿ ಬರೂದಿಲ್ಲ, ಇನ್ನ ನಿನ್ನ ಕೂಡೆ ಹೊಕ್ಕವು ಗುರತೇನ?"

"ಮಿಸ್ಟರ್ ಕಲಕಪ್ಪಾರೆ, ಹುಡುಗ್ರು ಯಾವತ್ತೂ ಇಷ್ಟಪಡದು ಯಾವ ಮೇಷ್ಟ್ರನ ಹೇಳಿ?"


"ನೀನಾ ಹೇಳಲ್ಲ"

"ಚನ್ನಾಗಿ ಪಾಠ ಮಾಡೋ ಮೇಷ್ಟ್ರ ಇಷ್ಟಪಡ್ತವೆ. ಅಮ್ಯಾಲೆ ಯಾವ ಮೇಷ್ಟ್ರು ವಡಿಯದಿಲ್ಲವೋ, ಅಂತಾ ಮೇಷ್ಟ್ರ ಲೈಕ್ ಮಾಡ್ತವೆ. ಇವೆರಡೂ ಗುಣ ನನ್ನಲ್ಲಿರೋದ್ರಿಂದ ನಾನೇನಾದ್ರು ಮಾಸ್ತರಾಗಿದ್ರೆ ವಳ್ಳೆ ನೇಮ್ ತಗತಿದ್ದೆ."

"ಅದಿರ್ಲಿ ಸರ್ಕಾರ ಇಂಗ್ಲಿಸ್ ಕಲಿಸಿ ಅಂತ ಕಾನೂನು ಮಾಡ್ಯದಂತೆ ಅದಕೇನೇಳ್ತಿಲ ನೀನು?"

"ತುಂಬ ತಿಂಕ್ ಮಾಡಬೇಕಾಗಿದೆ ಕಣಕ್ಕ. ದಿಸೀಸ್ ನಾಟ್ ಈಜಿ ಕ್ವಶ್ಚನ್. ಯಾಕಂದ್ರೆ ಜೆಡಿಎಸ್ಸು ಚಿಕನ್‌ಗುನ್ಯಾ ಇದ್ದಂಗೆ, ಬಿಜೆಪಿ ಡೆಂಗೆ ಜ್ವರ ಇದ್ದಂಗೆ. ಇವೆರಡೂ ಸೇರಿ ಸರ್ಕಾರ ಮಾಡಿ, ಯಾವುದಾದ್ರೂ ಕಾನೂನ ಜಾರಿ ಮಾಡಿದ್ರೆ, ಅಕ್ಸೆಪ್ಟ್ ಮಾಡಿಕೋಬೇಕಾಗಿರೊ ಜನ ತುಂಬ ತಿಂಕ್ ಮಾಡಬೇಕಾಗ್ಯದೆ" ಎಂದ ವಾಟಿಸ್ಸೆ.

"ಆಮ್ಯಾಲೆ ಮಾಡಿವೆ, ಒಂದನೇ ಕ್ಲಾಸಿಂದ ಇಂಗ್ಲಿಸ್



ಕಲುಸೋದು ಸರಿಯೋ ತಪ್ಪೋ ಹೇಳೋ. ಯಾಕಂದ್ರೆ ನೀನು ಬಾಯಿಬುಟ್ರೆ ಇಂಗ್ಲೀಸ್ ಉದುರುತದೆ" ಎಂದ ಉಗ್ರಿ.

"ನನ್ನಿಂಗ್ಲಿಸಿನಿಂದ ಯಾರಿಗೂ ತೊಂದ್ರೆ ಇಲ್ಲ ಕಣೊ ಉಗ್ರಿ. ಆಕ್ಚುವಲಿ ಕನ್ನಡ ಮಾತಾಡಕ್ಕೆ ಸಪೋರ್ಟಾಗಿ ನಾನು ಇಂಗ್ಲಿಸ್ ಬಳುಸ್ತಿನಿ. ಇದು ನಾನು ಇಂಗ್ಲಿಸ್ ಕಲಿಬೇಕಾಗಿತ್ತು ಅನ್ನೊ ಆಸೆ ತೋರತದೆ. ಆದರೆ ಒಂದು ವಿಷಯ ತಿಳಕಬೇಕು ನೀನು. ನೀವು ಇಂಗ್ಲಿಸ್ ಕಲುಸೋ ಆದ್ರೆ ಅದ್ಕು ಮದ್ಲು ಕನ್ನಡವಾ ಚನ್ನಾಗಿ ಕಲುಸಬೇಕು."

"ಈಗ್ನ ಚಲೊ ಕಲಸಾಕತ್ತಿವಲ್ರಿ ವಾಟಿಸ್ಸೆ?"

"ಮಿಸ್ಟರ್ ಕಲಕಪ್ಪಾರೆ, ನಾನು ನಿಮ್ಮ ಬಗ್ಗೆ ಹೇಳ ಯಿಲ್ಲ, ನಾವು ನಮ್ಮ ಮಾತೃಭಾಷೆನ ಬಾಳ ಅಸಡ್ಡೆಯಾ ಕಲಿತಾಯಿದ್ದೊ ಕಂಡ್ರಿ. ಪರೆಗ್ಜಾಂಪಲ್ ಮಿಸ್ಟರ್ ಉಗ್ರಿ ನಿನಿಗೆ ಕನ್ನಡದಲ್ಲಿ ಎಸೆಸೆಲ್ಸಿಲಿ ಎಷ್ಟು ಮಾರ್ಕು ಬಂದಿದ್ದೊ?"

"ನಲವತ್ತೆಂಟು."

"ಕೇಳಿದ್ರ? ನನಿಗೆ ಐವತ್ತು ಬಂದಿದ್ದೊ. ಆಕ್ಚುವ ಬರಬೇಕಾದ ನಂಬರೆಷ್ಟೊ? ನೂರು, ತಗಂಡಿರದೆಷ್ಟು ಆಪ್ಟರಾಲ್ ಪಿಪ್ಟಿ!"

"ರೀ ವಾಟಿಸ್ಸೆ ನೀವು ಭಾಷೆ ಕಲಿಯೂದು ಬೇರ ಪ್ರಶ್ನೆಗೆ ಉತ್ತರ ಬರಿಯೂದು ಬೇರೆ ರಿ."

"ಇರಬವುದು ಕಂಡ್ರಿ. ನಿಮ್ಮ ಮಾತೃಭಾಷೆಲಿ ನೀವ ಚನ್ನಾಗಿದ್ರೆ ಯಾವುದೇ ಭಾಷೆನ ಕನ್ನಡಕೂ ಚನ್ನಾ ತತ್ತಿರಿ."

"ನೀವೇಳೊ ಮಾತು ಸಾಯಿತಿಗಳಿಗೆ ಸ ಹೊಕ್ಕತಿ."

"ಯಲ್ಲಾರಿಗೂ ಹೇಳ್ತಿನಿ ಕಂಡ್ರಿ. ಕನ್ನಡದಲ್ಲಿರು ವಳ್ಳೆ ಸಾಯಿತಿಗೊಳ್ಕಲ್ಲ ಇಂಗ್ಲಿಸ್ ಮೇಷ್ಟ್ರಂತೆ ಗೊತ್ತೆ?"

"ಗುರತಿಲ್ರಿ?"

"ಗುರತಿಲ್ಲ ಅಂದ್ರೆ ಗುರತು ಮಾಡಿಕಳಿ. ಒಂದನ ಕ್ಲಾಸಿಂದ ಇಂಗ್ಲಿಸ್ ಕಲುಸೋದಾದ್ರೆ ನಾನು ಬ್ಯಾ ಅನ್ನದಿಲ್ಲ ಆದ್ರೆ ನಮ್ಮ ಮಾತೃಭಾಷೆ ಕನ್ನಡವ ಕಡ್ಡಾಯ ಮಾಡಿ. ಮಾಡಕ್ಯಾಗದೆಯಿದ್ರೆ ಕನ್ನಡಿಗರಿಗಾದ್ರು ಕಡ್ಡಾಯ ಮಾಡಿ. ಸರಿಯಲವೆ ದ್ವಡಪ್ಪ ನಾನೇಳದು?" ಎಂದು ವಾಟಿಸ್ಸೆ ಹೇಳಿದಾಗ ಅದಕ್ಕೆ ಕಾಳಮಾವ ಏನು ಹೇಳಲಿಲ್ಲ. ಆಗ ಸೀರ,

"ನಾವು ಕನಡಾ ಬಾಸೆ ಕಲಿದೆ ಇನ್ನೇನು ತಂಬುಳ ಮಾತಾಡೋದು ಕಲ್ತವೇನ್ಲ ಅಥವಾ ಇಂಗ್ಲೀಸು ಹಿಂದ ಸೂಳೆಮಕ್ಕಳು ಕಲ್ತರೆ?"

"ಕರಟ್ ಚಿಗಪ್ಪ, ಈಗ ನೀನೇ ಹೇಳು ನಮುದ್ರಿ ಇಂಗ್ಲಿಸ್ ಬೇಕೊ ಬ್ಯಾಡವೊ?"

"ನಾವು ಸಣ್ಣುಡ್ರಾಗಿದ್ದಾಗ್ಲೆ ಇಂಗ್ಲಿಸ್ ಕಲ್ತಿದ್ರೆ ಜ್ಯಳ್ಳೆಕಾರ್ರ ಕೈಲೆ ಮಾತಾಡಬವುದಿತ್ತು" ಎಂದು ಸೀ ಗತಕಾಲ ನೆನೆಸಿಕೊಂಡು ಚಿಂತಾಕ್ರಾಂತನಾದ.

"ಆಹ ನಮ್ಮ ಸೀರ ಚಿಗಪ್ಪ ಇಂಗ್ಲೀಸ್ ಕಲ್ತಿದ್ರೆ ಕೆಂಚ ಗಡ್ಡಕ್ಕೂ, ಗೋದಿ ಬಣ್ಣಕ್ಕೂ ಯಾರೊ ಇಂಗ್ಲೀಸ ನೋನಿಗೇ ಹುಟ್ಟಿದಂಗೆ ಕಾಣುತಿದ್ದ, ಏನು ಮಾ ಬ್ಯಾಡಲಕ್ಕು."

"ತಿಗ ಮುಚಗಂಡೋಗ್ಲ ಕಂಡಿದ್ದಿನಿ" ಎಂದು ಸೀ ರೇಗಿದ.

–ಬಿ. ಚಂದ್ರೇಗೌ

Zero Hour ಮುನ್ನಿ

1\. ಸರ್ಕಾರಿ ಶಾಲೆಗಳಲ್ಲಿ ಮೊದಲನೇ ತರಗತಿಯಿಂದ ಇಂಗ್ಲಿಷ್ ಕಲಿಕೆಗೆ ಚಿಂತಕರ ವಿರೋಧವಂತೆ?

a) ಈ ಚಂಪಾ ಗಿಂಪಾಗಳಿಗೆ ಹಳ್ಳಿಗರು, ದಲಿತ-ಹಿಂದುಳಿದವರೆಂದರೆ ದ್ವೇಷವೇ?

b) ರಾಮಾಜೋಯಿಸ್ ಹೇಳಿದಂತೆ ಸಂಸ್ಕೃತ ಕಲಿಸಲಾಗುತ್ತದೆಯೆ?

c) ರೇವಣ್ಣ ಮಾತ್ರ ಏನೂ ಕಲಿಸಲೇ ಬೇಡಿ ಎಂದನಂತೆ...

d) ಮೇಲಿನೆಲ್ಲವೂ

2\. ವಿ.ಕ. ಪತ್ರಿಕೆಗೆ ಅತಿಥಿ ಎಡಿಟರ್ ಆಗಿದ್ದ ನಂತೆ ರವಿಶಂಕರ್ ಎಂಬ ಢೋಂಗಿ?



a) ಹುಚ್ಚು ಹಿಡಿದಿದೆ ವಿ.ಕ.ಗೆ

b) ಭಟ್ಟ ತನ್ನಣ್ಣನಿಗೆ ಅಷ್ಟೂ ಗೌರವ ಕೊಡದಿದ್ದರೆ ಹೇಗೆ....

c) ಮುಂದಿನ ದಿನಗಳಲ್ಲಿ ಮುತಾಲಿಕ್, ರಾಮಾ ಜೋಯಿಸ್‌ಗಳೆಲ್ಲ ಅತಿಥಿ ಸಂಪಾದಕರಂತೆ!

d) (ಅ)ತಿಥಿ ಸಂಪಾದಕರ ಪರ್ವ ಕಾಲವಿದು

3\. ಡಿ.ವಿ. ಸದಾನಂದಗೌಡನ ಈ ಭಂಗಿ ಏನನ್ನು ಹೇಳುತ್ತದೆ?



a) ಅರೆಬೆತ್ತಲೆ ಸರ್ಕಾರ

b) ಬಗಲೆತ್ತಿದ ಬಿಜೆಪಿ

c) ಭಜನಾ ಮಂಡಲಿ ಲೀಡರು

d) ರಾಮನ ಅಪರಾವತಾರ!

4\. 'ನಾನು ರಾಜ್‌ರ ನಾಲ್ಕನೇ ಪುತ್ರ' ಎಂದಿದ್ದ ಸಿ.ಎಂ. ಈಗ 'ದೇವೇಗೌಡರ ನಂತರ ರಾಜ್ ನನ್ನ ಆರಾಧ್ಯದೈವ' ಎಂದಿದ್ದಾರಲ್ಲ?


a) ನಾಲ್ಕನೇ ಪುತ್ರನೋ, ಐದನೋ ಪುತ್ರನೋ ಈ ದೇವೇಗೌಡರ ಪುತ್ರರ ಕಾಟ ನಿಲ್ಲಲಿ ಮೊದ್ಲು.


b) ಗೌಡರ ಪುತ್ರಕಾಮೇಷ್ಠಿ ಯಾಗ ಇದು

c) ರೇವಣ್ಣ, ಬಾಲಕೃಷ್ಣೇಗೌಡ, ಡಾ. ರಮೇಶರ ಕಾಟ ತಾಳದೇ ದತ್ತುಪುತ್ರನಾದರೆ ಸಿ.ಎಮ್ಮು?

d) ಹಳ್ಳಿಯಲ್ಲಿ ಮಲಗಿದಾಗ 'ಇದೇ ನನ್ನನೆ' ಅಂತಾನಂತೆ

5\. ಸೂರ್ಯನಾರಾಯಣ್ ಕಾಮತ್ ಎಂಬ ಬಾಲಕ ದಿನಕ್ಕೆ ಒಂದು ಸುಳ್ಳು ಹೇಳುತ್ತಾನೆ. ಆತನ ಮಿತ್ರ ಚಿ.ಮೂ. ಕಾಮತ್‌ನ ಮೂರರಷ್ಟು ಸುಳ್ಳನ್ನೂ, ಇನ್ನೊಬ್ಬ ಮಿತ್ರ ರಾಮಾಜೋಯಿಸ್ ಚಿ.ಮೂ.ನ ಅರ್ಧದಷ್ಟು ಸುಳ್ಳನ್ನು ಹೇಳುತ್ತಾರೆ. ಇವರೆಲ್ಲರ ಗುರುವಿನಂತಿರುವ ಭೈರಪ್ಪ ಇವರೆಲ್ಲ ಹೇಳುವ ಸುಳ್ಳಿನ ಎರಡರಷ್ಟು ಸುಳ್ಳು ಹೇಳುತ್ತಾನೆ. ಹಾಗಾದರೆ ದಿನಕ್ಕೆಷ್ಟು ಸುಳ್ಳುಗಳು?





a) ಲೆಕ್ಕ ಹಾಕೊದೇನು ಬಂತು? ಸುಳ್ಳರ ಸಹವಾಸ, ಸೌಹಾರ್ದತೆಗೆ ವಿಷಪ್ರಾಸ..

b) ಅವು ಹೇಳೋದು, ಬರೆಯೋದು, ಉಸಿರಾಡೊದೆಲ್ಲ ಸುಳ್ಳು, ನಯವಂಚನೆಗಳನ್ನಷ್ಟೇ!

c) ತೊಗಾಡಿಯಾ ಸಂತತಿಗಿನ್ನೇನು ಕೆಲಸ ಇರುತ್ತೆ...

d) ಇಂಥದಕ್ಕೆಲ್ಲ ಮ್ಯಾಥ್ಸ್ ಮಾನದಂಡವಲ್ಲ; morality ಯೇ ಮಾನದಂಡ

6\. 'ಮಕ್ಕಳ ಸಾಹಿತ್ಯವನ್ನು ಸುಧಾಮೂರ್ತಿ ಸಮೃದ್ಧಗೊಳಿಸಿದ್ದಾರೆ'- 'ದಲಿತ ಕವಿ' ಡಾ. ಸಿದ್ಧಲಿಂಗಯ್ಯ. ನೀವೇನಂತಿರಾ?

a) ಆ ಪುಸ್ತಕದ ಹೆಸರು 'ಕಾಂಚಾಣ' ಎಂದಿದೆಯಾ

b) ಇದೂ ಒಂದು 'ನಿರ್ಮಲ' ಯೋಜನೆಯೇ

c) ಕನ್ನಡ ಅಭಿವೃದ್ಧಿ ಅವಾರ್ಡ್ ಕೊಡ್ತಾರೇನೊ?

d) 'ಊರುಕೇರಿ'ಗೆ ಶೋಭ, ಭೇಷ್!

ಉತ್ತರಗಳು:


1.d 2.b 3.b
4.a 5.c 6.d

ಒಂದು CD ಗವನ

ಕಲಿಸಲೊಲ್ಲರು ಇವತ್ತು ಇಂಗ್ಲಿಷು
ಕಲಿಸಲಿಲ್ಲ ಆವತ್ತು ಗಣಿತ
ಗೊತ್ತಾಗಬಾರದಲ್ಲ
ನಿತ್ಯ ಸಾಯುವವರೆಷ್ಟೆಂದು-
ಕೂಳು ಕಾಣದೇ
ಅಕ್ಷರ ಅರಿಯದೇ
ಪ್ರಭುತ್ವದ ಅರೆಯದೇ
ನಿತ್ಯ ಸಾಯುವವರೆಷ್ಟೆಂದು!

ಪಕ್ಷಿಗಳ ಸುಖದಂತೆಯೇ....

ಮರೆಯುವ ಮುನ್ನ



ಜುಲೈ 31, 1988

ಇದನ್ನು ಬರೆಯಲೇ ಇಲ್ಲ. ಇವತ್ತು ನೆನಪಾಗಿ ಬರೆಯುತ್ತಿದ್ದೇನೆ. ಅವತ್ತು ನನ್ನಲ್ಲಿ ಕ್ಯಾಮರಾ ಇರಲಿಲ್ಲ. ಆದ್ದರಿಂದ ಫೋಟೋ ಕೂಡ ತೆಗೆಯಲಾಗಲಿಲ್ಲ.

ಕೊಪ್ಪಕ್ಕೆ ಹೋಗಿದ್ದರ ಬಗ್ಗೆ ಬರೆದಿದ್ದೇನೆ. ಅಲ್ಲಿಯ ನಮ್ಮ ಭಾಷಣಕ್ಕೆ ಇಳಿವಯಸ್ಸಿನ ವ್ಯಕ್ತಿಯೊಬ್ಬರು ಬಂದಿದ್ದರು. ಕೊಡೆ, ಪುಟ್ಟ ಬ್ಯಾಗು, ಸಂಪ್ರದಾಯದ ವೇಷಭೂಷಣದ ಮನುಷ್ಯ. ಆತ ಭಾಷಣ ಕೇಳಲು ಬಂದಿರಲಿಲ್ಲ. ಸಭೆ ಮುಗಿದೊಡನೆ ನನ್ನಲ್ಲಿಗೆ ಬಂದು, "ಶೃಂಗೇರಿ ಹತ್ತಿರದ ನಮ್ಮ ಮನೆಗೆ ಬರಬೇಕು" ಅಂದರು. ನಾನು ಮನೆಗಳಿಗೆಲ್ಲ ಹೋಗತೊಡಗಿದರೆ ಕಷ್ಟ. ಯಾವುದಕ್ಕೂ ವೇಳೆ ಉಳಿಯುವುದಿಲ್ಲ. "ಆಗುವುದಿಲ್ಲ" ಅನ್ನುವುದಕ್ಕೆ ಮುಂಚೆಯೇ ಆ ವ್ಯಕ್ತಿ "ಅಲ್ಲೊಂದು ಪಕ್ಷಿಧಾಮವಿದೆ, ಹಕ್ಕಿಗಳು ಹೊಸತಾಗಿ ಮಾಡಿಕೊಂಡಿರುವ ಪಕ್ಷಿಧಾಮ. ನೀವು ನೋಡಲೇಬೇಕು" ಅಂದರು. ತಪ್ಪಿಸಿಕೊಳ್ಳುವ ನೆಪವಾಗಿ, "ಈಗಾಗಲೇ ನಾಲ್ಕು ಗಂಟೆಯಾಗಿದೆ, ತಡವಾಗುವುದಿಲ್ಲವೆ?" ಅಂದೆ. "ಹಾಗಲ್ಲ, ಪಕ್ಷಿಗಳು ಬರಲು ಶುರು ಮಾಡೋದೇ ಆರಕ್ಕೆ. ನೀವು ಬನ್ನಿ. ನಾನು ದಾರಿಯಲ್ಲಿ ಕಾಯುತ್ತಿರುತ್ತೇನೆ" ಅಂದರು. ನಮ್ಮ ಕಾರಲ್ಲೇ ಬನ್ನಿ ಅಂದರೆ ಕೇಳಲಿಲ್ಲ. ಕೊಡೆ, ಬ್ಯಾಗ್ ಹಿಡಿದು ಬಸ್ಸಿಗೆ ಹೊರಟೇ ಹೋದರು.

ಯಾರೂ ಅರಿಯದ ಪಕ್ಷಿಧಾಮ. ಶೃಂಗೇರಿ ತಲುಪುವ ಮುನ್ನ ಇದೆ. ನಾವು ಅಲ್ಲಿಗೆ ಹೋದಾಗ ಆರುಗಂಟೆ. ಹಕ್ಕಿಗಳು ಬರತೊಡಗಿದವು. ಶೃಂಗೇರಿಯ ಮಠ, ದೇವಸ್ಥಾನ, ಸುಂದರ ನಿಸರ್ಗ-ಇವನ್ನೆಲ್ಲ ಮನಸ್ಸಿನ ಹಿನ್ನೆಲೆಗೆ ತಳ್ಳುವಂಥ ಜಾಗ. ಗುಂಪುಗುಂಪಾಗಿ ಹಕ್ಕಿಗಳು ಬಂದವು. ನೀರಿನಿಂದ ಮೇಲೆ ಕೊಂಬೆ ಚಾಚಿರುವ ಮರಗಳಲ್ಲಿ ಕೂತವು. ದಿಗಂತ ಮಬ್ಬಾಗುತ್ತಿದ್ದಂತೆ ದೂರದೂರಿನ ಅವತ್ತಿನ ಕತೆ ಹೇಳುತ್ತಿರುವಂತೆ ಸದ್ದು ಮಾಡತೊಡಗಿದವು. ಕೊಕ್ಕರೆ, ಬೆಳ್ಳಕ್ಕಿಗಳು, ಬಹುಪಾಲು ಬಿಳಿಯ ಹಕ್ಕಿಗಳು.



ನಮ್ಮನ್ನು ಕರೆದವರ ಹೆಸರು ಕೃಷ್ಣಮೂರ್ತಿ ಎಂದಂತೆ ನೆನಪು. ಮನೆಗೆ ಕರೆದೊಯ್ಯದೆ ಬಿಡಲಿಲ್ಲ. ಮೂರೆಕರೆ ತೋಟ, ಸ್ವಲ್ಪ ಗದ್ದೆ ಇದೆ ಅಂದರು. ಇಬ್ಬರು ಗಂಡುಮಕ್ಕಳು ಮಾತ್ರ; ಒಬ್ಬ ಅಡಿಕೆ ಮರ ಹತ್ತುತ್ತಾನೆ. ಇನ್ನೊಬ್ಬ ಅಡಿಕೆ ಇಳಿಸಿಕೊಳ್ಳುತ್ತಾನೆ. ನಾನು ನನ್ನ ತಂದೆಗೆ ಒಬ್ಬನೇ ಮಗನಾಗಿದ್ದೆ. ನನಗೆ ಮರ ಹತ್ತಲು ಬರುತ್ತಿರಲಿಲ್ಲ. ತುಂಬ ತೊಂದರೆಯಾಗಿತ್ತು, ಈಗ ನೆಮ್ಮದಿಯಾಗಿದೆ" ಅಂದರು. "ನೀವು ಏನಾದರೂ ಬರೆಯುವುದಿಲ್ಲವಾ?" ಅಂದೆ. "ಇಲ್ಲ, ನನಗೆ ಅಷ್ಟಾಗಿ ಓದುಬರಹ ಬರುವುದಿಲ್ಲ" ಅಂದರು.

ಆಳದ ಕಣಿವೆಯಲ್ಲಿ ಸ್ವಚ್ಛತೆಯಿಂದ ನಿಗಿನಿಗಿ ಬೆಳಗುವಂತಿರುವ ಹೆಂಚಿನಮನೆ, ಸುತ್ತ ಹಸಿರಿನ ರಾಶಿ ರಾಶಿ, ವರ್ಷದಲ್ಲಿ ಆರು ತಿಂಗಳು ಮಳೆ.

ಕೋಡುಬಳೆ, ಮೈಸೂರು ಪಾಕ್ ತಿನ್ನುತ್ತಾ ಆತನ ಸುಖದ ತುಣುಕೊಂದನ್ನು ಅನುಭವಿಸಿದೆವು.


ಚಿನ್ನದ ನಾಡಿನಲ್ಲಿ

ಇನ್ನೆರಡು ವಿಷಯ ಪೋಜಿಗನದಾಗಿದೆ.

ಒಂದು, ಪುರಿ ಜಗದ್ಗುರುವಿನ ಬಗ್ಗೆ ಕೇಂದ್ರ ಸರ್ಕಾರ ನಡೆದುಕೊಂಡ ರೀತಿ. ಆತ ಹೇಳಿದ್ದು ಆಕಸ್ಮಿಕ ಎಂಬಂತೆ ರಾಜೀವ್ ವರ್ತಿಸಿದರು. ಪುರಿಯ ಮೂರ್ಖನನ್ನು ದಸ್ತಗಿರಿ ಮಾಡುವ ಬದಲು ಆತನ ಯಥಾಪ್ರಕಾರ ಪ್ರತಿಸ್ಪರ್ಧಿ ಅಗ್ನಿವೇಶ್‌ರನ್ನು ಬಂಧಿಸಿದರು. ದೂರದರ್ಶನದಲ್ಲಿ ದಲಿತ ಹುಡುಗರಿಂದ, "ನಾವು ಸಂಪ್ರದಾಯವನ್ನು ಗೌರವಿಸುತ್ತೇವೆ" ಎಂದು ಹೇಳಿಸಿ ಪುರಿಯವನಿಗೆ ಪರೋಕ್ಷ ಬೆಂಬಲ ನೀಡಿದರು. ಇದೆಲ್ಲ ಸಾಮಾನ್ಯ. ಇದರ ಆಳಕ್ಕಿರುವ ಅಸ್ಪೃಶ್ಯತೆ, ಪುರಿಯ ಬೇರುಗಳು ಭೀಕರ. ಯು.ಆರ್. ಅನಂತಮೂರ್ತಿ ತರಹದ ಪುರಿ ಶಿಷ್ಯರು ಬೆತ್ತಲೆಸೇವೆ ಕುರಿತು ವಿದೇಶಗಳಲ್ಲಿ ಭಾಷಣ ಮಾಡಿ ಬಂದು ತಮ್ಮ ಯಶಸ್ಸನ್ನು ಕುರಿತು ಬೊಗಳೆ ಬಿಡುವಾಗ ಆತನ ಕಾಲುದೆಸೆಯಲ್ಲಿ ಕೂರುವ ದಲಿತ ಹುಡುಗರಿದ್ದಾರೆ, ಬುದ್ಧಿಜೀವಿಗಳಿದ್ದಾರೆ; ದೇವೇಗೌಡ, ಹೆಗಡೆಯ ಪುರೋಹಿತಾರಾಧನೆಯನ್ನು ಸರ್ವೇಸಾಮಾನ್ಯ ಎಂದು ತಿಳಿದು ತಮಾಷೆ ನೋಡುವವರಿದ್ದಾರೆ. ಇಲ್ಲಿ ಪುರಿ ಜಗದ್ಗುರುವಿನ ಸೂಕ್ಷ್ಮಾತಿ ಸೂಕ್ಷ್ಮ ನೀಚತನ ಜನರ ಬದುಕನ್ನೇ ಹಾಳುಗೆಡಹುತ್ತದೆ. ಇಲ್ಲಿಯ ವರ್ಣಭೇದ ದುರಂತಮಯವಾಗಿದೆ.

ಇದೇ ರಾಜೀವರ ಹಿಂದೂ ಜಾತಿಯವ ದಕ್ಷಿಣ ಆಫ್ರಿಕಾದ ವರ್ಣಭೇದ ನೀತಿಯ ವಿರುದ್ಧ ಪ್ರತಿಭಟಿಸಿದಾಗ ಈ ಪ್ರತಿಭಟನೆಯ ಮುಖಗಳನ್ನು ದಿಟ್ಟಿಸಿ ನೋಡಬೇಕೆನ್ನಿಸುತ್ತದೆ. ಇಲ್ಲಿ ವರ್ಣಭೇದ ಮಾಡುವ ನೀಚರೇ ಅಲ್ಲಿ ಹೀರೋಗಳಾಗಲು ಕೂಗಾಡುತ್ತಿದ್ದಾರೆ. ಇಲ್ಲಿ ನರಕವನ್ನು ಸೃಷ್ಟಿಸಿ ಅಲ್ಲಿಯ ಕಷ್ಟಗಳ ಬಗ್ಗೆ ಮಾತಾಡುತ್ತಿದ್ದಾರೆ.

ದಕ್ಷಿಣ ಆಫ್ರಿಕಾ ನಿಜಕ್ಕೂ ಚಿನ್ನದ ನಾಡು. ಸುಮಾರು ಮುನ್ನೂರು ವರ್ಷದ ಹಿಂದೆ ಅಲ್ಲಿ ತಳವೂರಿದ ಬಿಳಿಯರು ಅದು ತಮ್ಮ ಆಸ್ತಿಯೆಂದು ತಿಳಿದು ಕಪ್ಪು ಜನರನ್ನು ಆಡಳಿತದಿಂದ ಹೊರಗಿಟ್ಟಿದ್ದಾರೆ. ಈ ಬಿಳಿಯರ ವಿರುದ್ಧ ಜಗತ್ತಿನ ಎಲ್ಲ ಬಿಳಿಯರೂ, ಅಮೆರಿಕಾದ ಬಿಳಿಯರೂ ಮಾತಾಡುತ್ತಾರೆ. ಆದರೆ ಇಂಗ್ಲೆಂಡ್, ಫ್ರಾನ್ಸ್, ಅಮೆರಿಕಾ ದೇಶಗಳು ಗುಟ್ಟಾಗಿ ದಕ್ಷಿಣ ಆಫ್ರಿಕಾದ ಬಿಳಿಯರಿಗೆ ಆರ್ಥಿಕ ನೆರವು ನೀಡುತ್ತವೆ. ಇದರಿಂದಾಗಿ ದಕ್ಷಿಣ ಆಫ್ರಿಕಾದ ಬೋಥಾ ಸರ್ಕಾರ ಮುಂದುವರೆಯುತ್ತಲೇ ಇದೆ.



ಯೂರೋಪ್, ಅಮೆರಿಕಾದ ಬಿಳಿಯರ ಇಬ್ಬಂದಿತನಕ್ಕೆ, ಭಾರತದ ಕಂದು ಬಣ್ಣದ ಜನರ ತಾಯಿಗಂಡತನಕ್ಕಿರುವಂತೆಯೇ, ತನ್ನದೇ ಆದ ಚರಿತ್ರೆ ಇದೆ. ಆಫ್ರಿಕಾವನ್ನು ದಶಕಗಟ್ಟಲೆ ಆಳಿದ ಜನ ಯುರೋಪಿನ ಬಿಳಿಯರು; ಆಫ್ರಿಕಾದ ಅರಣ್ಯ ಖನಿಜ, ಜನರನ್ನು ಲೂಟಿ ಹೊಡೆದವರು. ಬೆಲ್ಜಿಯಂ ಕೂಡ ಈ ಲೂಟಿಯ ಚರಿತ್ರೆಯನ್ನೇ ಪಡೆದಿದೆ.

ಆದರೆ ಚರಿತ್ರೆಯಿಂದ ಪೂರ್ತಿಯಾದ ವರ್ತಮಾನಕಾಲವನ್ನು ಒರೆಗೆ ಹಚ್ಚುವುದು ಸಣ್ಣತನ. ದಕ್ಷಿಣ ಆಫ್ರಿಕಾದ ಬಿಳಿಯರ ಸಂಖ್ಯೆ ಸಣ್ಣದಿಲ್ಲ. ಆ ರಾಷ್ಟ್ರದ ಐದನೇ ಒಂದು ಭಾಗ ಬಿಳಿಯರು. ಅಲ್ಲಿ ವರ್ಣೀಯರ ಪರವಾಗಿ ಇರುವ ಬಿಳಿಯರೂ ಇದ್ದಾರೆ. ಜೀವ, ಮಾನ ಉಳಿಸಿಕೊಳ್ಳಲು ಕೊನೆಯ ಸಂಗ್ರಾಮವೆಂಬಂತೆ ವರ್ಣೀಯರ ವಿರುದ್ಧ ಅನಿವಾರ್ಯವಾಗಿ ನಿಲ್ಲುವವರಿದ್ದಾರೆ.

ಇದಕ್ಕೆ ನನ್ನಲ್ಲೊಂದು ಸಣ್ಣ ಪರಿಹಾರವಿದೆ. ಸಂಪದ್ಭರಿತವಾದ ದಕ್ಷಿಣ ಆಫ್ರಿಕಾವನ್ನು ವಿಭಜಿಸಿ ಅಷ್ಟೇನೂ ಸಂಪದ್ಭರಿತವಲ್ಲದ ಶೇಕಡ ಹತ್ತು ಭಾಗವನ್ನು ಮಾತ್ರ ಬಿಳಿಯರಿಗೆ ಕೊಟ್ಟು ಕಳಿಸುವುದು ಒಳ್ಳೆಯದು. ದಕ್ಷಿಣ ಆಫ್ರಿಕಾದ ಎಲ್ಲ ಸಂಪತ್ತಿನಲ್ಲೂ ಕೇವಲ ಐದು ಭಾಗವನ್ನು ಇವರಿಗೆ ನೀಡಬಹುದು. ಇಡೀ ಜಗತ್ತಿನ ಶ್ರೀಮಂತ ಬಿಳಿಯರ ಕುಮ್ಮಕ್ಕನ್ನುಳ್ಳ ಇವರು ಬದುಕುವುದು ಕಷ್ಟವಾಗುವುದಿಲ್ಲ; ಅಲ್ಲದೆ ವರ್ಣೀಯರು ಸೇಡು ತೀರಿಸಿಕೊಳ್ಳುವುದು ಕೂಡ ತಪ್ಪುತ್ತದೆ. ಇಪ್ಪತ್ತನೇ ಶತಮಾನದಲ್ಲಿಯೇ ಇಸ್ರೇಲ್, ಬಾಂಗ್ಲಾದೇಶ, ಪಾಕಿಸ್ತಾನಗಳನ್ನೆಲ್ಲ ಸೃಷ್ಟಿಸಿದ ಮನುಷ್ಯರಿಗೆ ಇದು ತೀರಾ ಕಷ್ಟವಾಗಿ ಕಾಣಬಾರದು. ಜನರ ಆಳದ ಕ್ರೌರ್ಯ, ಇಬ್ಬಂದಿತನ, ಸಣ್ಣತನ ಯಾವುದೇ ಸಹಜ ಪರಿಹಾರಕ್ಕೆ ಅವರನ್ನು ಬಿಡುವುದಿಲ್ಲ.

ಪ್ರೀತಿಗೆ ತಾಜ್‌ಮಹಲ್, ತುಂಟಾಟಕ್ಕೆ?



ಡಿ.ಎಲ್.ಶ್ವೇತಾ. ಹರಪನಹಳ್ಳಿ
ಭಾರತೀಯರಿಗೆ ಭಗವಂತ ರೆಷ್ಟು?
* ಕೋಟಿ
ಭಗವಂತರಿದ್ದರೂ ನಮಗೆ ಬಂದ ಭಾಗ್ಯವೆಷ್ಟು?

ಕೆ.ವಿ.ಶಿವಕುಮಾರ್. ಕಾಳೀಹುಂಡಿ
ಈ ಭೂಮಿ ಬಣ್ಣದ ಬುಗುರಿ... ಪ್ರೀತಿ?
* ಚಾಟಿ... ಲಯ ತಪ್ಪಿದರೆ ಚಾಟಿ ಏಟು!

ಮುಂಚಾಲಿ ಗುರುರಾಜಚಾರು. ಬಳ್ಳಾರಿ
ಹೆಣ್ಣಿನ ಬಾಯಲ್ಲಿ ಗುಟ್ಟು ನಿಲ್ಲುವುದಿಲ್ಲ. ರಾಜಕೀಯ ನಾಯಕರ ಬಾಯಲ್ಲಿ?
* ನಿಜ ಬರುವುದಿಲ್ಲ.

ಡಿ.ಎಲ್. ನಾಗರಾಜ್. ಹರಪನಹಳ್ಳಿ
ಮೈಸೂರು ಹುಲಿಯನ್ನು ಶೆಟ್ಟಿ ಶಂಕರಮೂರ್ತಿ ತನ್ನ ತಕ್ಕಡಿಯಲ್ಲಿ ತೂಗಿ ಆತ ಕನ್ನಡದ್ರೋಹಿ ಅಂದಿದ್ದಾರಲ್ಲ?
* ಶೆಟ್ಟಿಯ ಪಂಚಿಕ ತಕ್ಕಡಿ ಬಗ್ಗೆ ಹೇಳೋದಕ್ಕೆ ಏನೂ ಉಳಿದಿಲ್ಲಾರೀ!

ಎಂ. ನಿಸರ್ಗ. ದಾವಣಗೆರೆ
ಡಾ. ರಾಜ್ ಸಮಾಧಿ ಬಳಿ ಮಲಗಲು ಸಿಎಂ ಯಾವಾಗ ಮನಸ್ಸು ಮಾಡ್ತಾರೆ?
* ಶೂ...ಈ ತಲೆಕೆಟ್ ಗಿರಾಕಿ ಹೋದ್ರೂ ಹೋಗೊಪ್ಪೆ.

ಚಂದ್ರಶೇಖರ. ಶೋರಾಪೂರ
ಹುಡ್ಗೀರಿಗೂ ಕನ್ನಡಿಗೂ ಎಂಥಾ ನಂಟು?
* ಹರೆಯದಲ್ಲಿ ಪ್ರೀತಿಯ ನಂಟು, ವಯಸ್ಸಾದ ಮೇಲೆ ಮುಖ ಗಂಟು.

ಡಿ.ಎಲ್. ಚಂದ್ರಿಕಾ. ಹರಪನಹಳ್ಳಿ
ಶೋಭಾಯಾತ್ರೆಗೂ, ಸೋಬಾನರಾತ್ರಿಗೂ ವ್ಯತ್ಯಾಸ?
* ಅದು ನಿಷೇಧ, ಇದು ನಿಶೇಕ.

ಕವಿತಾ ಮಧುಸೂದನ್. ದಾವಣಗೆರೆ
ಮಟ್ಟಣ್ಣನವರ್ ಸಂಪಾದಕನಾದ ಪತ್ರಿಕೆಯ ಬರಹಗಳ ಗುಣಮಟ್ಟ ಹೇಗಿರಬಹುದು?
* ಮಟ್ಟವಿಲ್ಲದ ಮಟ್ಟಯಂತಿರುತ್ತದೆ ಎಂಬುದು ಹಲವರ ಅಭಿಪ್ರಾಯ.

ಅನಾರ್ಕಲಿಸಲೀಂಚಿಣ್ಯ. ಶ್ರೀರಂಗಪಟ್ಟಣ
ಸಮ್ಮಿಶ್ರ ಸರ್ಕಾರ ಪತನದ ನಂತರ ದೇವೇಗೌಡರ ದಾರಿ ಏನಿರಬಹುದು?
* ಅದೇ ಹಳೇ ಕಂಟ್ರಾಕ್ಟರ್ ಕೆಲಸ... ಆದರೆ ಈ ಬಾರಿ ಮಕ್ಕಳ ಅಕ್ರಮ ಕಟ್ಟಡಗಳ ಉಸಾಬರಿ ಅಂತೆ.

ಕೆ.ಶ್ರೀನಿವಾಸ್. ಮಂಡ್ಯ
ನಿಮಗೆ ದಯ್ಯ-ಭೂತ ಎಲ್ಲಿದೆ ಗೊತ್ತಾ?
* ದೇವೇಗೌಡರ ಮನಸ್ಸಲ್ಲಿ.

ಬಿ.ಎಂ. ಪರಶಿವಮೂರ್ತಿ. ಬೆಂಗಳೂರು
ಎಲ್ಲಾ ಹೆಂಗಸ್ರೂ ಬಜಾರಿಯರಾದ್ರೆ?
* ಬೆಚಾರಗಳಿಗೆ ತುಂಬಾ ಸಮಸ್ಯೆ.

ಉದಯಕೃಷ್ಣ ವಿಟ್ಲ. ಮಂಗಳೂರು
ಚಂಪಾಗ್ಯಾಕ್ ಬಂತು ಇಂಗ್ಲಿಷ್ ವ್ಯಾಮೋಹ?
* ಅವರಿಗೀಗ 'ಸಂಕ್ರಮಣ' ಕಾಲ!

ಮಂಜುನಾಥ್. ಗೆದರೆ
'ತನನಂ ತನನಂ' ಚಿತ್ರದ ಮೂರು ಜಡೆಗಳು TVನಲ್ಲಿ ಜೊತೆಗೆ ಕಾಣಿಸಿಕೊಂಡವಲ್ಲಾ?
* ಆ ಜಡೆಗಳ ರಿಬ್ಬನ್ ಸುರೇಶ್ ಕೂಡ ಇದ್ದರಲ್ಲಾ.

ನಿರಂಜನ. ಹುನಸನಹಳ್ಳಿ
ಮಾತಾಡ್ದೇ ಪ್ರೀತಿ ಮಾಡೋದು ಹ್ಯಾಗೆ?
* ಮುತ್ತೆ ಮಾತಾದರೆ, ಮಾತು ಯಾಕೆ ಬೇಕು?

ಅಂಬಿಕಾ. ಬಹರೈನ್
ಬೆಂಗಳೂರಿನ ಆಟೋ ಡ್ರೈವರ್‌ಗಳು ಫಿಲಾಸಫರ್ಸ್ ಎಂಬುದು ನನ್ನ ಅಂಬೋಣ?
* ಬದುಕೆಂಬ ಮೀಟರ್ ಕಲಿಸಿದ ಪಾಠ ಕಣ್ರೀ ಅದು.

ಪ್ರಸಾದ್. ಮಾಗಡಿ
ಜೀವನ ಬೋರ್ ಅನ್ನಿಸ್ತಿದೆ, ಏನ್ಮಾಡಲಿ?
* ಸುಮ್ಮನಿರಿ ಮಾರಾಯ್ರೆ, ಅದನ್ನು ಯೋಚಿಸೋದಕ್ಕೂ ಪುರುಸೊತ್ತು ಇಲ್ಲದಷ್ಟು ಕೆಲಸ ಹಚ್ಚಿಕೊಂಡಿದ್ದೀವಿ.

ಬಹುಮಾನಿತ ಪ್ರಶ್ನೆ
ಚಾಂದ್‌ಪಾಷಾ. ದೇವದುರ್ಗ
ಪ್ರೀತಿಗೆ ತಾಜ್‌ಮಹಲ್, ತುಂಟಾಟಕ್ಕೆ?
* 'ಕೋಲ್-ಮಹಲ್'.

ಛೀ ತುಂಟಿ!

ಗಣಿತಶಾಸ್ತ್ರದ ಉಪನ್ಯಾಸಕನೊಬ್ಬ ತನ್ನ ಹೆಂಡತಿಗೆ ಈ ಪತ್ರ ಬರೆದು ಕಳುಹಿಸಿದ.

"ಪ್ರೀತಿಯ ಮಡದಿ,

ನಿನಗೀಗ 54 ವರ್ಷ ವಯಸ್ಸಾಗಿರುವುದರಿಂದ ನನ್ನ ಹಲವು ಅಗತ್ಯಗಳನ್ನು ನಿನ್ನಿಂದ ಈಗ ಪೂರೈಸಲಾಗುತ್ತಿಲ್ಲ. ಆದರೆ ನೀನು ನನ್ನ ಹೆಂಡತಿ ಎಂಬ ಕಾರಣಕ್ಕೆ ಈ ವಿಷಯ ನಿನಗೆ ತಿಳಿಯಬೇಕಿದೆ. ಅದೇನೆಂದರೆ ಈ ಪತ್ರ ನಿನ್ನನ್ನು ತಲುಪಿದಾಗ ನಾನು 18 ವರ್ಷದ ಹುಡುಗಿಯೊಬ್ಬಳೊಂದಿಗೆ ಅಶೋಕಾ ಹೋಟೆಲ್‌ನ ಕೊಠಡಿಯೊಂದರಲ್ಲಿ ಇರುತ್ತೇನೆ. ಇದನ್ನು ಓದಿ ಬೇಸರ ಮಾಡಿಕೊಳ್ಳಬೇಡ. ಇವತ್ತು ರಾತ್ರಿ ನಾನು ತಡವಾಗಿ ಮನೆಗೆ ಬರುತ್ತೇನೆ.

ಇಂತಿ ನಿನ್ನ ಗಂಡ....."

ಈ ಪತ್ರವನ್ನು ಕಳುಹಿಸಿ ಹೋಟೆಲ್ ಅಶೋಕದಲ್ಲಿ ಆತ ಹಾಜರಾದಾಗ ಅವನ ಹೆಂಡತಿಯಿಂದ ಫ್ಯಾಕ್ಸ್ ಮೂಲಕ ಬಂದಿದ್ದ ಪತ್ರ ಅವನಿಗಾಗಿ ಕಾದಿತ್ತು.

ಅದರಲ್ಲಿ ಹೆಂಡತಿ ಹೀಗೆ ಉತ್ತರಿಸಿದ್ದಳು.

"ಪ್ರೀತಿಯ ಗಂಡ,

ನಿನಗೂ ಈಗ 54 ವರ್ಷ ವಯಸ್ಸಾಗಿದೆ. ನಿನಗೆ ಈ ಪತ್ರ ತಲುಪುವಷ್ಟರಲ್ಲಿ ನಾನು ವೆಸ್ಟ್ ಎಂಡ್ ಹೋಟೆಲಿನ ಕೊಠಡಿಯೊಂದರಲ್ಲಿ 18 ವರ್ಷದ ಯುವಕನೊಂದಿಗೆ ಇರುತ್ತೇನೆ. ಗಣಿತಶಾಸ್ತ್ರವನ್ನು ಚೆನ್ನಾಗಿ ಬಲ್ಲ ನಿನಗೆ ಒಂದು ವಿಷಯ ನೆನಪಿರಲಿ: 54 ಅನ್ನು 18 ರಿಂದ ವಿಭಾಗಿಸಿದರೆ 3 ಸಿಗುತ್ತದೆ. ಆದರೆ 18 ಅನ್ನು 54ರಿಂದ ವಿಭಾಗಿಸಿದರೆ ಸಿಗುವುದು ಕೇವಲ 0.333!

ಇಂತಿ ನಿನ್ನ ಹೆಂಡತಿ...

ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ವಾರದ ಪ್ರಶ್ನೆ:

ಕೋಮುವಾದಿ ಸರ್ಕಾರವೇ 'ಕೋಮುವಾದಿಗಳಿಗೆ ಶಿಕ್ಷೆ' ಎನ್ನುತ್ತಿದೆಯಲ್ಲ?

ಅಕ್ಟೋಬರ್ 11ರ ಸಂಚಿಕೆಯ ನಮ್ಮ ಪ್ರಶ್ನೆ: ಬೆಳಗಾವಿಯಲ್ಲೂ ಬೆತ್ತಲಾಯ್ತಲ್ಲ ಈ ಸರ್ಕಾರ?

ನಿಮ್ಮ ಉತ್ತರ: ಬರುವಾಗ ಬೆತ್ತಲೆ, ಹೋಗುವಾಗ ಬೆತ್ತಲೆ. ಇವೆರಡರ ನಡುವೆ ಮತದಾರನಿಗೆ ಬರಿ ಕತ್ತಲೆ.

ಉತ್ತರ ಕಳುಹಿಸಿ ಬಹುಮಾನ ಪಡೆದಿರುವವರು: ರಾಮಕೃಷ್ಣೇಗೌಡ, ಹೊಳೆನರಸೀಪುರ

ಗನ್ ಮೇನಿಯ

ಜುಟ್ಟುಗಳ ಕೈಲೂ ಪಿಸ್ತೂಲ್

ಪಿಸ್ತೂಲು ಇಟ್ಟುಕೊಳ್ಳುವುದು ಪ್ರತಿಷ್ಠೆಯ ಸಂಕೇತ ಎಂದು ಶ್ರೀಮಂತರಿಗೆ ಅನಿಸಿದರೆ, ಮತ್ತೆ ಕೆಲವರಿಗೆ ಅದು ಫ್ಯಾನ್ಸಿ, ಕೆಲವರಿಗೆ ಆತ್ಮರಕ್ಷಣೆ. ರೌಡಿಗಳಿಗೆ 'ಈಜಿ ಟು ಹೈಡ್ ಅಂಡ್ ಈಜಿ ಟು ಕಿಲ್.' ವಿಪರ್ಯಾಸವೆಂದರೆ, ಆತ್ಮರಕ್ಷಣೆಗೆ ಗನ್ ಇಟ್ಟುಕೊಂಡಿದ್ದವರು ಚಲಾಯಿಸಲು ಬಾರದೆ ಸತ್ತಿದ್ದಾರೆ. ಫ್ಯಾನ್ಸಿಗೆ ಇಟ್ಟುಕೊಂಡವರು ವಿನಾಕಾರಣ ಹಾರಿಸಿ ಫಜೀತಿಗೆ ಸಿಲುಕಿದ್ದಾರೆ. ರೌಡಿಗಳು ಮಾತ್ರ ಹಾರಿಸುತ್ತಲೇ ಇದ್ದಾರೆ. ಮುಂದೆಯೂ ಹಾರಿಸುತ್ತಾರೆ. ಅದು ಈ ಉದ್ಯಾನ ನಗರಿಗೆ ಬಡಿದಿರುವ ಶಾಪ.

ಎಂ.ಎಸ್. ಸತೀಶ್

'ಸಿಲಿಕಾನ್ ಸಿಟಿ' ಮತ್ತು 'ಉದ್ಯಾನ ನಗರಿ' ಎಂಬ ಹೆಮ್ಮೆಯೊಂದಿಗೆ ಇನ್ನು ಮುಂದೆ ಬೆಂಗಳೂರು ನಗರವನ್ನು ಧಾರಾಳವಾಗಿ 'ದಿ ಗನ್ ಸಿಟಿ' ಎಂದು ಕರೆಯಬಹುದು. ಇತ್ತೀಚೆಗೆ ನಗರದಲ್ಲಿ ನಡೆಯುತ್ತಿರುವ ಅಪರಾಧ ಪ್ರಕರಣಗಳನ್ನು ಗಮನಿಸಿದರೆ ಬೆಂಗಳೂರು ಭೂಗತ ಜಗತ್ತು ತನ್ನ ಕೃತ್ಯಗಳಿಗೆ ಬಳಸುತ್ತಿದ್ದ ಮಚ್ಚು-ಲಾಂಗ್‌ಗಳನ್ನು ಬದಿಗಿಟ್ಟು ರಿವಲ್ವಾರ್-ಪಿಸ್ತೂಲುಗಳನ್ನು ಬಳಸಲು ಆರಂಭಿಸಿರುವುದು ಎದ್ದುಕಾಣುತ್ತದೆ. ಅದಕ್ಕಿಂತ ಹೆಚ್ಚಾಗಿ ಪಿಸ್ತೂಲು ಮತ್ತು ಬಂದೂಕುಗಳು ಈಗ ಶ್ರೀಮಂತರ ಪ್ರತಿಷ್ಠೆಯ ಸಂಕೇತದಂತಾಗಿದೆ. ರಿಯಲ್ ಎಸ್ಟೇಟ್ ಮತ್ತು ಭೂಗಳ್ಳರಿಗೆ ಇದು ಮೊಬೈಲ್ ಟೆಲಿಫೋನಿನಷ್ಟೇ ಅವಶ್ಯಕವಾದ ಉಪಕರಣದಂತೆ ಕಂಡುಬರುತ್ತಿದೆ.

ಕೇವಲ ಎರಡು ತಿಂಗಳಲ್ಲಿ ನಡೆದ ಘಟನೆಗಳನ್ನು ಗಮನಿಸಿ. ಕೆಂಗೇರಿಯ ಸಮೀಪ ಎದುರಾಳಿಗಳಿಂದ ಕೊಲೆಯಾದ ರೌಡಿ ಸೂರಿ ಮತ್ತು ಟೋನಿಯ ಬಳಿ ಪಿಸ್ತೂಲಿತ್ತು. ಹಂತಕರ ಮೇಲೆ ಸೂರಿ ಗುಂಡು ಹಾರಿಸಿದ್ದನಾದರೂ ಅದು ಗುರಿ ತಪ್ಪಿತ್ತು. ಅದಕ್ಕೂ ಮುನ್ನವೇ ಹಂತಕರು ಅವನ ಮೇಲೆ ಗುಂಡು ಹಾರಿಸಿದ್ದರು. ಆದರೆ ಕೊಚ್ಚಿ ಕೆಡವಿದ್ದು ಮಾತ್ರ ಮಚ್ಚು-ಲಾಂಗ್‌ಗಳಲ್ಲಿ. ಅಂದರೆ ಎರಡೂ ಗುಂಪುಗಳ ರೌಡಿಗಳ ಬಳಿ ಪಿಸ್ತೂಲುಗಳಿದ್ದವು.

ಅಕ್ಟೋಬರ್ 7 ರಂದು ಕೊಲೆಯಾದ ಕನಕಪುರ ರಸ್ತೆಯ ದೊಡ್ಡಕಲ್ಲಸಂದ್ರ ಗ್ರಾಮ ಪಂಚಾಯ್ತಿ ಅಧ್ಯಕ್ಷ ಮುನಿಸ್ವಾಮಿ ಬಳಿ ರಿವಲ್ವಾರ್ ಇತ್ತು. ಆದರೆ ಹಂತಕರು ಅವನ ಮೇಲೆ ದಾಳಿ ಮಾಡಿದಾಗ ಫೈರ್ ಮಾಡಲು ಸಾಧ್ಯವಾಗಲಿಲ್ಲ. ಯಾಕೆಂದರೆ ಸೇಫ್ಟಿಲಾಕ್ ಆಗಿದ್ದ ರಿವಲ್ವಾರ್ ಓಪನ್ ಮಾಡುವುದೇ ಮುನಿಸ್ವಾಮಿಗೆ ಗೊತ್ತಿರಲಿಲ್ಲ.

ಕೇವಲ ಪ್ರತಿಷ್ಠೆಗಾಗಿ ರಿವಲ್ವಾರ್ ಕೊಂಡಿದ್ದ ಮುನಿಸ್ವಾಮಿ ಅದನ್ನು ಉಪಯೋಗಿಸುವುದನ್ನೇ ಕಲಿತಿರಲಿಲ್ಲ. ಈಗ ಆ ಲೈಸೆನ್ಸ್‌ಡ್ ರಿವಲ್ವಾರ್ ಹಂತಕರ ಕೈ ಸೇರಿದೆ. ಇದು ಮತ್ತಿನ್ಯಾವ ಅನಾಹುತಕ್ಕೆ ಮುನ್ಸೂಚನೆ?

ಈ ಘಟನೆ ಸಂಭವಿಸಿದ ಮಾರನೇ ದಿನ ಹೆಬ್ಬಾಳ ರಸ್ತೆಯ ಕೃಷಿ ವಿಶ್ವವಿದ್ಯಾಲಯ ಆವರಣದಲ್ಲಿರುವ 60 ವರ್ಷದ ಸುಬ್ಬಯ್ಯ ಎಂಬುವವರು ಪಡೆದಿದ್ದ ಸಾಲ ವಸೂಲಿ ಮಾಡಲು ಹೋದ ಮಹೇಶ ಎಂಬಾತ, ಅವರನ್ನು ಬೆದರಿಸಲು ಹಣೆಗೆ ಪಿಸ್ತೂಲಿಟ್ಟಿದ್ದಾನೆ. ಹೆದರಿಕೆಯಿಂದ ನಡುಗಿದ ಮುದುಕ ಸುಬ್ಬಯ್ಯ ಹೃದಯಾಘಾತದಿಂದ ಸ್ಥಳದಲ್ಲೇ ಪ್ರಾಣ ಬಿಟ್ಟಿದ್ದಾನೆ. ಇದು ಇತ್ತೀಚೆಗೆ ನಡೆದ ಪಿಸ್ತೂಲು ಮತ್ತು ರಿವಲ್ವಾರ್‌ಗಳ ಅನಾಹುತಗಳ ಒಂದೆರಡು ಸ್ಯಾಂಪಲ್‌ಗಳಷ್ಟೇ. ಇವುಗಳನ್ನು ಗಮನದಲ್ಲಿಟ್ಟುಕೊಂಡು ಬೆಂಗಳೂರಿನಲ್ಲಿ ಈ ಹಿಂದೆ ನಡೆದ ಇಂತಹ ಘಟನೆಗಳೆಲ್ಲಾ ಕೆದಕುತ್ತಾ ಹೋದರೆ, ಇವತ್ತು ಬೆಂಗಳೂರಿನ ಭೂಗತ ಜಗತ್ತು, ರಿಯಲ್ ಎಸ್ಟೇಟು, ವ್ಯಾಪಾರಿಗಳು, ರಾಜಕಾರಣಿಗಳು, ಚಿತ್ರೋದ್ಯಮಿಗಳು ಮತ್ತು ಕೆಲವು ಪತ್ರಕರ್ತರ ಕೈಯಲ್ಲಿ ರಿವಾಲ್ವಾರ್‌ಗಳು ಥಕಥೈ ಎಂದು ಕುಣಿಯುತ್ತಿರುವುದು ಸ್ಪಷ್ಟವಾಗುತ್ತದೆ.



ಡಿಡಿ ರವಿ

ಬೆಂಗಳೂರು ನಗರದ ಬಹುತೇಕ ಜನರು ಭಾವಿಸಿರುವುದು ಈ ಗನ್ ಸಂಸ್ಕೃತಿ ಇಲ್ಲಿಗೆ ಕಾಲಿಟ್ಟಿರುವುದೇ ಮುಂಬೈ ಭೂಗತ ಲೋಕದಿಂದ ಎಂದು. ಆದರೆ ಬಹುತೇಕರಿಗೆ ಗೊತ್ತಿಲ್ಲ, 1980 ರಲ್ಲೇ ಬೆಂಗಳೂರು ಭೂಗತ ಲೋಕದಲ್ಲಿ ಪಿಸ್ತೂಲು ಗುಂಡು ಭೋರ್ಗರೆದಿತ್ತು.


ಬಹುಶಃ ಇವತ್ತಿಗೂ ಭೂಗತ ಜಗತ್ತಿನ ಹಳೇ ಹಂಟರ್‌ಗಳಿಗೆ ಕೊಡಿಗೆ ಹಳ್ಳಿ ಮುನೇಗೌಡನ ನೆನಪಿದೆ. ಯಲಹಂಕ ರಸ್ತೆಯ ಕೋಡಿಗೆ ಹಳ್ಳಿಯ ಮುನೇಗೌಡ ನದು ಕಬ್ಬಿಣದಂತಹ ಶರೀರ. ಬರಿಗೈಲಿ ಯಾರದಾದರೂ ಜೀವ ತೆಗೆಯುವಂತಹ ತಾಕತ್ತು. ಅದ್ಯಾರು ಇಂಥವನ ಕೈಗೆ ಪಿಸ್ತೂಲು ಕೊಟ್ಟರೊ ಗೊತ್ತಿಲ್ಲ. ಈ ಹಳ್ಳಿ ಹುಂಬ ಅದನ್ನು ಪ್ರಯೋಗಿಸಿಯೂಬಿಟ್ಟ. ಅದು ಯಾರ ಮೇಲೆ? ಆಗ ಯಶವಂತಪುರ ವಿಭಾಗದ ಅಸಿಸ್ಟೆಂಟ್ ಕಮಿಷನರ್ ಆಫ್ ಪೊಲೀಸ್ ಆಗಿದ್ದ ಸತ್ಯದೇವ್ ಕೊಲೆ ಪ್ರಕರಣದ ಆರೋಪಿ ಸೋಮಶೇಖರ್ ಮೇಲೆ.

ಶಿವಾನಂದಾ ಸ್ಟೋರ್ಸ್ ಸಮೀಪದಲ್ಲಿ ಟ್ರಾವಲ್ಸ್ ಒಂದಿತ್ತು. ಆ ಟ್ರಾವಲ್ಸ್‌ನಲ್ಲಿ ಸೋಮಶೇಖರ್ ಸಂಬಂಧಿಯೊಬ್ಬ ಆರು ಕಾರ್‌ಗಳನ್ನು ಬಾಡಿಗೆಗೆ ಬಿಟ್ಟಿದ್ದ. ಪೊಲೀಸ್ ಅಧಿಕಾರಿಯ ಸಂಬಂಧಿ ಎಂಬ ಕಾರಣಕ್ಕೆ ಟ್ರಾವೆಲ್ಸ್ ಮಾಲೀಕ ಅವನದೇ ಕಾರುಗಳಿಗೆ ಹೆಚ್ಚಿನ ಟ್ರಿಪ್ ನೀಡುತ್ತಿದ್ದ. ಇದರಿಂದ ಸಿಟ್ಟಿಗೆದ್ದ ಇತರೇ ಡ್ರೈವರ್‌ಗಳು, ಅದೇ ಏರಿಯಾದ ಪಟ್ಟಿ ಸುದೀರ ಮತ್ತು ಶೇಖರ್ ಎಂಬ ಇಬ್ಬರು ರೌಡಿಗಳನ್ನು ಕರೆಸಿ ಟ್ರಾವಲ್ಸ್ ಮಾಲೀಕನಿಗೆ ಅವಾಜ್ ಹಾಕಿಸಿದರು.

ವಿಷಯ ಎಸಿಪಿ ಸೋಮಶೇಖರ್ ತನಕ ಮುಟ್ಟಿತು. ಸ್ವಭಾವತ ಮುಂಗೋಪಿಯಾದ ಸಾಹೇಬರು ತಾವೇ ಯಾವುದೋ ಖಾಸಗಿ ಕಾರಿನಲ್ಲಿ ಟ್ರಾವಲ್ಸ್‌ಗೆ ಬಂದು "ಯಾರವರು ರೌಡಿಗಳು? ಬಲಿ ಹಾಕಿಬಿಡುತ್ತೇನೆ" ಎಂದು ಹಾರಾಡಲು ಆರಂಭಿಸಿದರು. ವಿಷಯ ಅದ್ಹೇಗೋ ಅಲ್ಲೆ ಹತ್ತಿರದಲ್ಲಿ ಅಡ್ಡೆ ಹಾಕಿದ್ದ ಪಟ್ಟಿ ಸುಧೀರ ಮತ್ತು ಶೇಖರನಿಗೆ ಮುಟ್ಟಿತ್ತು. ದುರಾದೃಷ್ಟಕ್ಕೆ ಆ ಸಮಯದಲ್ಲಿ ಅವರೊಂದಿಗೆ ಕೊಡಿಗೆಹಳ್ಳಿ ಮುನೇಗೌಡ ಇದ್ದ ಮತ್ತು ಅವನ ಜೇಬಿನಲ್ಲಿ ಲೋಡೆಡ್ ಪಿಸ್ತೂಲಿತ್ತು.

ತಮ್ಮನ್ನು ಹೊಡೆಯಲು ಟ್ರಾವಲ್ಸ್ ಮಾಲೀಕ ಬೇರ್‍ಯಾವನೋ ರೌಡಿಯನ್ನು ಕರೆಸಿದ್ದಾನೆಂದು ಭಾವಿಸಿದ ಈ ಮೂವರು ರೌಡಿಗಳು, ಒಂದೇ ಬೈಕಿನಲ್ಲಿ ಟ್ರಾವಲ್ಸ್ ಬಳಿಗೆ ಬಂದಿಳಿದರು. ಅಲ್ಲಿ ಇನ್ನೂ ಎಸಿಪಿ ಸಾಹೇಬರ ಯಕ್ಷಗಾನ ನಡೆಯುತ್ತಿತ್ತು. ಕೋಡಿಗೆಹಳ್ಳಿ ಮುನೇಗೌಡ ಅಂಡ್ ಕೋ ಅಲ್ಲಿ ಹೋಗಿ ಇಳಿಯುತ್ತಿದ್ದಂತೆ ಟ್ರಾವಲ್ಸ್ ಮಾಲೀಕ, ಇವರೇ ಆ ರೌಡಿಗಳೆಂದು ತೋರಿಸಿಬಿಟ್ಟ. ಎಸಿಪಿ ಸೋಮಶೇಖರ್ ಬಿರುಗಾಳಿಯಂತೆ ಈ ಮೂವರೆಡೆಗೆ ನುಗ್ಗಿಬಂದರು. ಕ್ಷಣಾರ್ಧದಲ್ಲಿ ಮುನೇಗೌಡನ ಕೈಗೆ ಕಿಸೆಯಿಂದ ರಿವಲ್ವಾರ್ ಹೊರಬಂದು ಗುಂಡು ಸಿಡಿಯಿತು.

ಸೋಮಶೇಖರ್ ಇದನ್ನು ನಿರೀಕ್ಷಿಸಿರಲಿಲ್ಲ. ಚಾಕಚಕ್ಯತೆಯಿಂದ ತಪ್ಪಿಸಿಕೊಂಡು, ತಾವು ಬಂದಿದ್ದ ಕಾರಿನಲ್ಲಿ ಹಾರಿ ಕೂತು ಪರಾರಿಯಾದರು. ಆನಂತರ ಮುನೇಗೌಡ ಮತ್ತವನ ಸಹಚರರನ್ನು ಹುಡುಕಿ ರಿಪೇರಿ ಮಾಡಿದ್ದು ಬೇರೆ ಕಥೆ. ಆದರೆ ಅದು ಬಹಿರಂಗವಾಗಲಿಲ್ಲ. ಕೇಸ್ ಕೂಡಾ ರಿಜಿಸ್ಟರ್ ಆಗಲಿಲ್ಲ. ಕೆಲ ವರ್ಷಗಳ ನಂತರ ಮುನೇಗೌಡನೇ ಕೊಲೆಯಾದ. ಬಹುಶಃ ಬೆಂಗಳೂರು ಭೂಗತ ಲೋಕದಲ್ಲಿ ಪಿಸ್ತೂಲು ಬಳಕೆಯಾದ ಪ್ರಥಮ ಪ್ರಕರಣವಿದು. ಆನಂತರ ಕೆಲವು ವರ್ಷಗಳು, ಬೆಂಗಳೂರಿನಲ್ಲಿ ಪಿಸ್ತೂಲು, ಗುಂಡು, ಬಾಂಬು ಎನ್ನುವ ಶಬ್ದಗಳು ಕೇಳಿರಲಿಲ್ಲ. ಆದರೆ ಜೈರಾಜ್ ಮತ್ತು ಬೂಟ್‌ಹೌಸ್ ಕುಮಾರ್ ನಡುವಣ ಜಿದ್ದುಬಿದ್ದು ಎರಡೂ ಗುಂಪುಗಳು ಹೊಡೆದಾಟಕ್ಕೆ ಇಳಿಯುವ ಮೂಲಕ ಕ್ರೂಡ್ ಬಾಂಬ್‌ಗಳ ಬಳಕೆ ಆರಂಭವಾಯ್ತು. ಆನಂತರ ಕುಖ್ಯಾತ ರೌಡಿ ಜೈರಾಜ್‌ನನ್ನು ಗುಂಡಿಕ್ಕಿ ಉಡಾಯಿಸುವ ವಿಫಲಯತ್ನ ನಡೆಯಿತು. ನಗರದ ಸೆಂಟ್ರಲ್ ಜೈಲ್ ಆವರಣಕ್ಕೆ ಬಂದಿದ್ದ ಜೈರಾಜ್ ಮೇಲೆ ಇತ್ತೀಚೆಗೆ ಕೊಲೆಯಾದ ಮತ್ತೊಬ್ಬ ರೌಡಿ ಚಿಕ್ಕನಕಣ್ಣು ರಾಜೇಂದ್ರ ಮತ್ತವನ[...] ತಂಡ ಈ ಯತ್ನ ನಡೆಸಿತು. ಆದರೆ ಕಂಟ್ರಿ ಬಂದೂಕು[...] ಹಿಡಿದು ನಿಂತಿದ್ದ ಮಹದೇವ ಎಂಬ ಮತ್ತೊಬ್ಬ ರೌಡಿ[...] ಟ್ರಿಗರ್ ಎಳೆದಾಗ ಬುಲೆಟ್ ಬ್ಯಾರಲ್‌ನಿಂದ ಹೊರ[...] ಸಿಡಿಯುವುದರ ಬದಲು ಮೇಲ್ಮುಖವಾಗಿ ಹೊರಬಂದು[...] ಎಡವಟ್ಟಾಗಿ ಜಯರಾಜ್ ಬಚಾವಾಗಿದ್ದ.



ಮುನಿಸ್ವಾಮಿ

ಎರಡನೆಯ ಘಟನೆ ಎಂದರೆ ಜೇಡರಹಳ್ಳಿ ಕೃಷ್ಣಪ್ಪ[...] ಶ್ರೀರಾಂಪುರ ಕಟ್ಟೆಯ ಮೇಲೆ ಬಿನ್ನಿಮಿಲ್ ಸಮೀಪ[...] ಗುಂಡು ಹಾರಿಸಿದ್ದು. ಕೃಷ್ಣಪ್ಪ ವಿನೋ[...] ಸರಿಯಾದ ಪಿಸ್ತೂಲಿನಿಂದ ಗುರಿಯಿಟ್ಟೇ[...] ಹಾರಿಸಿದ್ದ. ಆದರೆ ಗುಂಡು ಹೃದಯಕ್ಕಿ[...] ಸ್ವಲ್ಪ ಮೇಲ್ಭಾಗದಲ್ಲಿ ತೂರಿ ಬೆನ್ನಿನ[...] ಭಾಗದಲ್ಲಿ ಲ್ಯಾಂಡ್ ಆಗಿದ್ದರಿಂದ ಆತ[...] ಉಳಿದಿದ್ದ. ಆನಂತರ ಕೆಲ ವರ್ಷಗಳು[...] ನಡೆದಿದ್ದು ಬರೀ ಬಾಂಬ್‌ಗಳ ಹಾವಳಿ[...] ಈ ಮಧ್ಯೆ ಬಾಂಬ್ ಪ್ರಕರಣದಲ್ಲಿ[...] ಟಾಡಾ ಬಂಧಿಯಾಗಿ ಜೈಲು ಸೇರಿದ್ದ[...] ಜೇಡರಹಳ್ಳಿ, ಬಿಡುಗಡೆಯಾಗಿ ಕೆಲವೇ[...] ತಿಂಗಳಲ್ಲಿ ಮತ್ತೆ ಬಂಧನಕ್ಕೊಳಗಾಗಿ[...] ಜೈಲು ಸೇರಿದ. ಹೆಬ್ಬಾಳದ ಸಮೀಪ[...] ಕಾರಿನಲ್ಲಿ ಬರುತ್ತಿದ್ದ ಕೃಷ್ಣಪ್ಪನನ್ನು ಪೊಲೀಸರು ತಡೆದು[...] ಶೋಧಿಸಿದಾಗ ಆತನ ಬಳಿ ನಿಷೇಧಿತ .38 ಸರ್ವೀಸ್[...] ರಿವಲ್ವಾರ್ ಪತ್ತೆಯಾಯ್ತು. ಇದು ಪೊಲೀಸರು[...] ಮಾತ್ರವೇ ಬಳಸಲು ಪರವಾನಿಗೆ ಇರುವ ಶಸ್ತ್ರ.

ಆನಂತರ ತಲೆ ಮರೆಸಿಕೊಂಡಿದ್ದ ಕುಖ್ಯಾತ ರೌಡಿ[...] ಹಾಗು ಡಿ.ಡಿ. ರವಿಯ ಸಹಚರ ಪ್ರವೀಣನ ಸೋಲ[...] ದೇವನಹಳ್ಳಿಯ ಅಡ್ಡೆ ಮೇಲೆ ಪೀಣ್ಯಾ ಇನ್ಸ್‌ಪೆಕ್ಟರ್[...] ಸುಬ್ಬಣ್ಣ ರೇಡ್ ಮಾಡಿದರು. ಆಗ ಪ್ರವೀಣನ ಗ್ಯಾಂಗು[...] ಪೊಲೀಸರ ಮೇಲೆ ಡಬ್ಬಲ್ ಬ್ಯಾರಲ್ ಗನ್‌ನಿಂದ[...] ಗುಂಡು ಹಾರಿಸಿ ಪರಾರಿಯಾಯ್ತು. ಈಗ ಇದೇ[...] ಪ್ರವೀಣ, ಮಾರ್ಕೆಟ್‌ನ ಗೇಟ್ ಗಣೇಶ ಮತ್ತು[...] ಮುಬಾರಕ್‌ನನ್ನು ಮುಗಿಸಲು ಜೈಲು ಶಿಕ್ಷೆಗ[...] ಒಳಗಾಗಿರುವ ಡಿ.ಡಿ. ರವಿ., ಸುಸೈರಾಜ್ ಮತ್ತು[...] ಜಾನ್ಸನ್ ಎಂಬ ಬಾಣಸವಾಡಿಯ ರೌಡಿಗಳಿಗೆ ಸುಪಾರಿ[...] ಕೊಟ್ಟಿದ್ದಾನೆ. ಯಾಕೆಂದರೆ ಈ ಹಿಂದೆ ಪ್ರವೀಣ್[...] ಮುಬಾರಕ್ ಮತ್ತು ಗೇಟ್ ಗಣೇಶ್, ರವಿಯ ತಮ್ಮ[...] ಉಮಾಶಂಕರನನ್ನು ಕೊಂದಿದ್ದರು. ಕುಣಿಗಲ್[...] ಮಹಾಲಕ್ಷ್ಮಿ ಲೇಔಟ್ ಮತ್ತು ಹಾಸ್‌ಮ್ಯಾಟ್ ಆಸ್ಪತ್ರೆಯ[...] ಹತ್ತಿರ ನಡೆದ ಮೂರು ಕೊಲೆ ಪ್ರಕರಣಗಳಲ್ಲಿ[...] ತಲೆಮರೆಸಿಕೊಂಡಿರುವ ಈ ಇಬ್ಬರು[...] ರೌಡಿಗಳ ಬಳಿ ವಿದೇಶಿ ಪಿಸ್ತೂಲಿದೆ ಎಂದು[...] ಹಿರಿಯ ಪೊಲೀಸ್ ಅಧಿಕಾರಿಯೊಬ್ಬರ[...] ಹೇಳುತ್ತಾರೆ.


ಬೆಂಗಳೂರು ನಗರದಲ್ಲಿ ರೌಡಿಗಳ[...] ಕೈಯಲ್ಲಿ ಪಿಸ್ತೂಲು ಸಿಕ್ಕ ಇನ್ನೂ ಕೆಲವು[...] ಪ್ರಕರಣಗಳು ದಾಖಲಾಗಿವೆ. ಮಾಜಿ ಸಚಿವ[...] ಮೊಹಿನುದ್ದೀನ್‌ರವರ ಪುತ್ರ ಫರ್ದೀನ್[...] ಎಂಬುವವನು .45 ಪಿಸ್ತೂಲು ಹೊಂದಿದ[...] ಸಂದರ್ಭದಲ್ಲಿ ಉಪ್ಪಾರಪೇಟೆ ಪೊಲೀಸರು[...] ಅವನನ್ನು ಬಂಧಿಸಿದರು. ಅಮಾನುಲ್ಲಾಖಾನ್[...] ಅಲಿಯಾಸ್ ಬಚ್ಚನ್ ಎಂಬಾತ ಸಹ .38 ಪಿಸ್ತೂಲು[...] ಹೊಂದಿದ್ದಾಗ ನ್ಯಾಯಾಲಯದ ಆವರಣದಲ್ಲಿ[...] ಬಂಧಿಸಲಾಗಿತ್ತು. ಕೆಂಗೇರಿಯಲ್ಲಿ ಸೂರಿ ಮತ್ತು ಟೋನಿ[...] ಕೊಲೆಯಾದ ನಂತರ, ಸೂರಿಯ ಗುರು ಗೋವಿಂದ[...] ಇಡೀ ಗೋವಿಂದರಾಜನಗರದಲ್ಲಿ ದಾಂಧಲೆ ಎಬ್ಬಿಸಿದ[...] ಆ ಸಮಯದಲ್ಲಿ ಪೊಲೀಸರು ಅವನನ್ನು ಬಂಧಿಸಿದಾಗ[...] ಗೋವಿಂದನ ಬಳಿ ಪಿಸ್ತೂಲು ಪತ್ತೆಯಾಯ್ತು. ಆದರ[...]

ಎನ್‌ಕೌಂಟರ್ !

ಇನ್ನು ಪೊಲೀಸರು ಪಿಸ್ತೂಲು ಬಳಸುವ ವಿಚಾರಕ್ಕೆ ಬಂದರೆ ಅದೂ ಸಹ ಇತ್ತೀಚಿನ ಬೆಳವಣಿಗೆ. ಎನ್‌ಕೌಂಟರ್ ಎಂಬ ಪದವೇ ಬೆಂಗಳೂರಿನ ಜನರಿಗೆ ಮೊದಲು ಅಪರಿಚಿತವಾಗಿತ್ತು. ಪೊಲೀಸ್ ಅಧಿಕಾರಿಗಳ ಸೊಂಟದಲ್ಲಿ ರಿವಲ್ವಾರ್ ನೋಡುವುದು ಸಹ ಅಪರೂಪವೇ ಆಗಿತ್ತು. ಯಾವಾಗ 1980 ರಲ್ಲಿ ನಗರದ ಕಂಟೋನ್ಮೆಂಟ್ ರೈಲ್ವೆ ಸ್ಟೇಷನ್ ಬಳಿ ಸುನಿಲ್‌ಕುಮಾರ್ ಎಂಬ ಸಬ್‌ಇನ್ಸ್‌ಪೆಕ್ಟರ್ ಇರಿತಕ್ಕೊಳಪಟ್ಟು ಸತ್ತರೊ, ಆಗ ಆದೇಶ ಹೊರಬಿತ್ತು, ಎಸ್.ಐ. ದರ್ಜೆಯ ಮೇಲ್ಪಟ್ಟು, ಎಸಿಪಿಯವರೆಗೆ ಎಲ್ಲಾ ಅಧಿಕಾರಿಗಳಿಗೆ ರಿವಲ್ವಾರ್ ಧರಿಸುವುದು ಕಡ್ಡಾಯ ಎಂದು.




ಆದರೆ ಮೊದಲ ಎನ್‌ಕೌಂಟರ್‌ಗೆ ಬಲಿಯಾದವನು 1989 ರಲ್ಲಿ ಸ್ಟೇಷನ್ ಶೇಖರ್ ಎಂಬ ರೌಡಿ. ಎನ್‌ಕೌಂಟರ್ ಮಾಡಿದವರು ಈಗಿನ ಅಲಸೂರ್‌ಗೇಟ್ ಎಸಿಪಿ ಬಿ.ಬಿ. ಅಶೋಕ್‌ಕುಮಾರ್. ಆನಂತರ ಡೆಡ್ಲಿ ಸೋಮ ಮತ್ತು ಬಸವ ಇದೇ ಅಶೋಕ್‌ಕುಮಾರ್ ಕೈಲಿ ಹತರಾದರು. ರೌಡಿ ಪ್ರವೀಣನ ತಮ್ಮ ರಜನಿ ಮತ್ತು ವಯಾಲಿಕಾವಲ್‌ನ ಕೃಷ್ಣಸಿಂಗ್ ಎಂಬ ರೌಡಿಗಳು ಅಶೋಕ್‌ಕುಮಾರ್ ಗುಂಡಿನೇಟಿನ ರುಚಿ ನೋಡಿದರಾದರೂ ಬದುಕುಳಿದರು. ಇನ್ಸ್‌ಪೆಕ್ಟರ್ ಕೃಷ್ಣಪ್ಪ ಅಲ್ಲೈಮಣಿ ಎಂಬ ವಿಕೃತ ಕಾಮಿಯನ್ನು ಗುಂಡಿಟ್ಟು ಕೊಂದರು. ಎಸಿಪಿ ಅಬ್ದುಲ್ ಅಜೀಮ್, ರೇಪಿಸ್ಟ್ ಮುನಿಯ ಮತ್ತವನ ಸಹಚರನನ್ನು ಶೂಟ್ ಮಾಡಿದ್ದರು.



ಇವರೆಲ್ಲರ ನಂತರದ ಮತ್ತು ಇತ್ತೀಚಿನ ಎನ್‌ಕೌಂಟರ್ ಸರದಿ, ಸಿಸಿಬಿಯ ಎಸಿಪಿ ಬಿ.ಕೆ. ಶಿವರಾಮ್‌ರವರದು. ಇವರ ಲಿಸ್ಟಿಗೆ ಶಾರ್ಪ್ ಶೂಟರ್ ರಜಾಕ್ ಮತ್ತು ಲೈವ್‌ಬ್ಯಾಂಡ್ ಗಾಯಕಿಯರ ಪಾಲಿನ ಪೀಡೆ ನಸ್ರು ಸೇರುತ್ತಾರೆ.

ಒಂದು ಕಾಲದ ಕುಖ್ಯಾತ ರೌಡಿ ಬಾಂಬ್ ಕೃಷ್ಣಮೂರ್ತಿಯನ್ನು ಬಂಧಿಸಲು ನಡುರಾತ್ರಿಯಲ್ಲಿ ಇನ್ಸ್‌ಪೆಕ್ಟರ್ ಬಿ.ಕೆ. ಶಿವರಾಮ್ ಹೋಗಿರುತ್ತಾರೆ. ನಿರ್ಜನ ಪ್ರದೇಶದಲ್ಲಿದ್ದ ಕೃಷ್ಣಮೂರ್ತಿಯ ಮನೆ ಬಾಗಿಲನ್ನು ಬಡಿದಾಗ, ಬಾಗಿಲು ತೆರೆದದ್ದು ಮಡಿಲಲ್ಲಿ ಮಗುವನ್ನು ಹಿಡಿದಿದ್ದ ಆತನ ಪತ್ನಿ, ಎಲ್ಲಮ್ಮ. ಕೃಷ್ಣಮೂರ್ತಿ ಎಂದು




ಕೇಳುವಷ್ಟರಲ್ಲಿ, ಮೇಲಿನಿಂದ ಕೃಷ್ಣಮೂರ್ತಿ ಧ್ವನಿ ಕೇಳುತ್ತದೆ. ಕೈಯಲ್ಲಿ ಒಂದು ಗಾಜಿನ ಜಾಡಿ ಹಿಡಿದು ಮಹಡಿಯ ಮೇಲೆ ನಿಂತಿದ್ದ ಕೃಷ್ಣಮೂರ್ತಿ "ಸಾರ್ ಇನ್ ಒಂದೇ ನಿಮಿಷ, ಇಲ್ಲಿಂದ ಹೊರಟೋಗಿ ಈ ಜಾಡಿ ತುಂಬಾ ಆಸಿಡ್ ಇದೆ, ಒಂದ್ಹೆಜ್ಜೆ ಮುಂದಿಟ್ರೆ ಜಾಡಿ ಕೆಳಗೆ ಬಿಟ್ ಬಿಡ್ತೀನಿ" ಎಂದು ಧಮಕಿ ಹಾಕುತ್ತಾನೆ. ಇನ್ಸ್‌ಪೆಕ್ಟರ್ ಶಿವರಾಮ್ ಅಷ್ಟೇ ತಣ್ಣಗಿನ ಧ್ವನಿಯಲ್ಲಿ "ಕೃಷ್ಣಮೂರ್ತಿ, ಇಲ್ಲಿ ನಿನ್ನ ಹೆಂಡ್ತಿ ಮಗು ಇದಾರೆ ನನ್ ರಿವಾಲ್ವಾರು ನಿನ್ನ ಹೆಂಡ್ತಿ ಎದೆಗಿದೆ ಏನ್ಹೇಳ್ತಿಯ?" ಎಂದು ಕೇಳುತ್ತಾರೆ. ಒಂದೇ ಕ್ಷಣದಲ್ಲಿ ಕೃಷ್ಣಮೂರ್ತಿ ಓಡಿ ಬಂದು ಶರಣಾಗುತ್ತಾನೆ. ಇದು ಪಿಸ್ತೂಲು ಭಾಷೆ, ಪೊಲೀಸರಿಗೆ ಈ ರೀತಿ ಬಳಕೆಯಾದರೆ, ರೌಡಿಗಳಿಗೆ ಮತ್ತೊಂದು ರೀತಿ.

ಜೀವ ತಪ್ಪಿಸಿ ಜೀವಿಸಬಾರದಾರಿಗೆಯೂ ಅಹಿಂಸಾ ಪರಮೋಧರ್ಮಃ ಎಂಬ ಶ್ರಾವಕರ ನಾನಾರನೂ ಕಾಣೆ-ಅಲ್ಲಮ

ಮಾಜಿ ರೌಡಿಗಳಿಗೂ ಲೈಸೆನ್ಸ್?

ಬೆಂಗಳೂರು ನಗರ ಒಂದರಲ್ಲೇ ಅಧಿಕೃತ ಬಂದೂಕು ಪರವಾನಗಿ ಹೊಂದಿರುವವರ ಸಂಖ್ಯೆ 1678. ಇವರಲ್ಲಿ ವ್ಯಾಪಾರಸ್ಥರು, ಗುತ್ತಿಗೆದಾರರು, ಬಾರ್ ಓನರ್‌ಗಳು, ಗ್ರಾನೈಟ್ ಮಾಲೀಕರು, ರಾಜಕಾರಣಿಗಳು ಮತ್ತು ಕೆಲವು ಪತ್ರಕರ್ತರು ಸೇರಿದ್ದಾರೆ. ಆದರೆ ಅಕ್ರಮವಾಗಿ ಬಂದೂಕು ಮತ್ತು ಪಿಸ್ತೂಲು ಹೊಂದಿರುವವರ ಸಂಖ್ಯೆ 500 ಮೀರಬಹುದೆಂಬ ಕಳವಳಕಾರಿ ಅಂಶವನ್ನು ನಗರದ ಪೊಲೀಸ್ ಅಧಿಕಾರಿ ಯೊಬ್ಬರು ವ್ಯಕ್ತಪಡಿಸಿದ್ದಾರೆ.




ಬಂದೂಕು ಲೈಸೆನ್ಸ್ ನೀಡುವಾಗ ಅದಕ್ಕೆ ನಿರ್ದಿಷ್ಟವಾದ ನಿಯಮಗಳಿವೆ. ಅಷ್ಟಲ್ಲದೆ ಬಂದೂಕು ಮತ್ತು ಪಿಸ್ತೂಲು ಹೊಂದಲು ಸೂಕ್ತವಾದ ಕಾರಣವನ್ನು ಅರ್ಜಿದಾರ ಮನವರಿಕೆ ಮಾಡಿಕೊಡಬೇಕಾಗುತ್ತದೆ. ಗನ್ ಲೈಸೆನ್ಸ್‌ನ್ನು ಮೂರು ಕಾರಣಗಳಿಗಾಗಿ ನೀಡಲಾಗುತ್ತದೆ. ಒಂದು, ಆಸ್ತಿ-ಪಾಸ್ತಿ ಮತ್ತು ಬೆಳೆ ರಕ್ಷಣೆ, ಎರಡನೆಯದು ಪ್ರಾಣ ರಕ್ಷಣೆ, ಮೂರನೆಯದು ಕ್ರೀಡೆ. ಆದರೆ ಈಗ ಗನ್ ಲೈಸೆನ್ಸ್ ಹೊಂದಿರುವವರ ಪಟ್ಟಿಯನ್ನು ನೋಡಿದರೆ ಈ ಮೂರೂ ಕ್ಯಾಟೆಗೆರಿಗೆ ಬಾರದ ಲೈಸೆನ್ಸ್‌ದಾರರೇ ಅಧಿಕ ಸಂಖ್ಯೆಯಲ್ಲಿರುವಂತೆ ಕಾಣುತ್ತಿದೆ.

ರಿಯಲ್ ಎಸ್ಟೇಟ್ ಖದೀಮರಿಗೆ ಬೆಳೆ ರಕ್ಷಣೆಯ ಹೆಸರಿನಲ್ಲಿ, ಹಿಂದೆ ಹಲವಾರು ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿದ್ದು ಈಗ 'ಪರಿವರ್ತನೆಯಾಗಿದ್ದೇವೆ' ಎಂದು ಹೇಳಿಕೊಳ್ಳುತ್ತಿರುವ ಹಳೇ ರೌಡಿಗಳಿಗೆ ಪ್ರಾಣ ರಕ್ಷಣೆಗಾಗಿ ಮತ್ತು ಇಸ್ಪೀಟ್ ಪಂಟರ್‌ಗಳಿಗೆ ಕ್ರೀಡೆಯ ಹೆಸರಿನಲ್ಲಿ ಬಂದೂಕು ಲೈಸೆನ್ಸ್ ನೀಡಲಾಗಿದೆ. ಇದು ಗನ್ ಲೈಸೆನ್ಸ್ ನೀಡಿರುವ ಬೇಜವಾಬ್ದಾರಿಯ ಉದಾಹರಣೆಯಷ್ಟೇ. ಆದರೆ ಇಂತಾ ಲೈಸೆನ್ಸ್ ನೀಡುವಲ್ಲಿ ಹಣ ಮತ್ತು ರಾಜಕೀಯ ಒತ್ತಡ ಬೀರಿರುವುದರಲ್ಲಿ ಸಂಶಯವಿಲ್ಲ.

ಇಲ್ಲದಿದ್ದರೆ ಮುಂಬೈ ಸರಣಿ ಸ್ಫೋಟದ ಪ್ರಮುಖ ಆರೋಪಿ ಟೈಗರ್ ಮೆಮೋನ್ ನಂತಹ ಕ್ರಿಮಿನಲ್‌ಗಳಿಗೆ ಹುಬ್ಬಳ್ಳಿ-ಪೊಲೀಸರು ಬಂದೂಕು ಲೈಸೆನ್ಸ್ ನೀಡುತ್ತಿದ್ದರೆ? ಎಲ್ಲಕ್ಕಿಂತ ಹೆಚ್ಚಿನ ಆತಂಕಕಾರಿ ವಿಷಯವೆಂದರೆ, ಎರಡು ದಶಕಗಳ ಹಿಂದೆ ಬೆಂಗಳೂರು ಪೊಲೀಸ್ ಕಮಿಷನರ್ ಕಚೇರಿಯ ಆರ್ಮ್ಸ್ ಸೆಕ್ಷನ್‌ನಿಂದ ಗನ್ ಲೈಸೆನ್ಸ್ ಅರ್ಜಿಗಳು ಕಳುವಾಗಿದ್ದವಂತೆ. ಮೂಲಗಳ ಪ್ರಕಾರ ಈ ಅರ್ಜಿಗಳ ಮೇಲೆ ಅದಾಗಲೇ ಕಮಿಷನರ್ ಸೀಲ್ ಬಿದ್ದಿದ್ದು ಅವರ ಸಹಿ ಮಾತ್ರ ಬಾಕಿ ಉಳಿದಿತ್ತು. ಈ ಅರ್ಜಿಗಳನ್ನು ಕದ್ದು ಅದರಲ್ಲಿ ಯಾರದೋ ಹೆಸರನ್ನು ತುಂಬಿಸಿ, ಕಮಿಷನರ್ ನಕಲಿ ಸಹಿ ಮಾಡಿ ಗನ್ ಲೈಸೆನ್ಸ್ ನೀಡಲಾಗಿತ್ತಂತೆ. ಈ ಹಗರಣಕ್ಕೆ ಸಂಬಂಧಿಸಿದಂತೆ ಅಂದಿನ ಕಮಿಷನರ್ ಕಚೇರಿಯ ಮ್ಯಾನೇಜರ್ ಆಗಿದ್ದ ಕ್ರಿಶ್ಚಿಯನ್ ಮಹಿಳೆಯೊಬ್ಬರ ಮೇಲೆ ಕ್ರಮ ಜರುಗಿಸಲಾಗಿತ್ತಂತೆ. ಆದರೆ ಸುದ್ದಿ ಬಹಿರಂಗವಾದರೆ ಮರ್ಯಾದೆ ಹೋಗುವುದು ನಮ್ಮದೇ ಎಂದು ಇಡೀ ಪೊಲೀಸ್ ಇಲಾಖೆ ಬಾಯಿ ಬಂದ್ ಆಯಿತಂತೆ. ಈ ಲೈಸೆನ್ಸು ಯಾರ‍್ಯಾರ ಕೈಗೆ ಸೇರಿತೊ?

ಇದೇನೆ ಇರಲಿ ಸದರಿ ಬಂದೂಕು-ಪಿಸ್ತೂಲುಗಳು ಅಪಾತ್ರರ ಕೈಗೆ ಸಿಲುಕುತ್ತಿರುವುದಂತೂ ನಿಜ. ಚಾಮರಾಜಪೇಟೆ ಮಾಜಿ ಶಾಸಕ ಆರ್.ವಿ. ದೇವರಾಜ್ ಬಂಟರಾದ ಪುಣಿ, ಜಾರ್ಜ್ ಬಳಿ ಪಿಸ್ತೂಲುಗಳಿವೆಯಂತೆ. ಮಾಜಿ ಸಚಿವ ಡಿ.ಕೆ. ಶಿವಕುಮಾರ್ ಗನ್ ಲೈಸೆನ್ಸ್ ನೀಡುವಂತೆ ಕೆಲವರ ಹೆಸರನ್ನು ಶಿಫಾರಸ್ಸು ಮಾಡಿದ್ದರಂತೆ. ಈ ಹಿಂದೆ ತನ್ನ ರಕ್ಷಣೆಗೆ ಎಸ್.ಪಿ.ಜಿ. (ಶಿವಕುಮಾರ್ ಪ್ರೊಟೆಕ್ಷನ್ ಗ್ರೂಪ್) ರಚಿಸಿದ್ದ ಈ ಮಹಾನುಬಾವ, ಅವರೆಲ್ಲರಿಗೂ ತಲಾ ಒಂದೊಂದು ಪಿಸ್ತೂಲು ಕೊಡಿಸಿದ್ದನೋ ಏನೋ?




...ಹಿರಂಗ ಪಡಿಸದ ಅನೇಕ ಕಾರಣಗಳಿಗಾಗಿ ಆ ...ಷಯಗಳನ್ನು ಪೊಲೀಸರೇ ಉದ್ದೇಶಪೂರ್ವಕವಾಗಿ ...ಚ್ಚಿಟ್ಟ ಉದಾಹರಣೆಗಳೂ ಇವೆ.

ಜೇಡರಹಳ್ಳಿ ಕೃಷ್ಣಪ್ಪನಿಂದ ಮಾರಣಾಂತಿಕ ಹಲ್ಲೆ ...ಳಗಾಗಿ ಆನಂತರ ಚೇತರಿಸಿಕೊಂಡಿದ್ದ ಲೇಔಟ್ ...ಂಜ, ನಂತರದ ದಿನಗಳಲ್ಲಿ ಕೃಷ್ಣಪ್ಪನನ್ನು ಹುಡುಕುತ್ತಾ ...ಸ್ತೂಲಿಟ್ಟುಕೊಂಡು ಸುತ್ತಾಡುತ್ತಿದ್ದ ಎಂಬುದು ಇಡೀ ...ಗತಲೋಕಕ್ಕೆ ಗೊತ್ತಿತ್ತು. ಕೆಲವು ತಿಂಗಳ ನಂತರ ...ದೇ ಕೃಷ್ಣಪ್ಪನ ಗ್ಯಾಂಗ್‌ನಿಂದ ಆತ ಕೊಲೆಯಾದಾಗ ...ಸ್ತೂಲು ಅವನ ಮಾರುತಿ ಕಾರಿನಲ್ಲೇ ಇತ್ತು.

ಜೈಲಿನಲ್ಲಿ ಕೊಲೆಯಾದ ಬಲರಾಮು ಎರಡು, ...ರು ಬಾರಿ ಎಂ.ಜಿ. ರಸ್ತೆಯ ಲೈವ್‌ಬ್ಯಾಂಡ್‌ಗಳಲ್ಲೇ ...ವಲ್ವಾರ್ ಝಳಪಿಸಿದ್ದ. ಇವನೊಂದಿಗಿದ್ದ ಮಲಬಾರಿ ...ಧರ ಎಂಬಾತ ರಾಜಾಜಿನಗರದ ಒಬ್ಬ ಮರಿ ರೌಡಿಗೆ ...ವಾಲ್ವಾರ್ ತಿರುಗಿಸಿ ಮೂಗು ಮುರಿಯುವಂತೆ ...ಟ್(ಹಿಂಭಾಗ)ನಲ್ಲಿ ಹೊಡೆದಿದ್ದ. ಕೊತ್ವಾಲ್ ಕೊಲೆ ...ಕರಣದ ಆರೋಪಿ ಸೀತಾರಾಮ ಶೆಟ್ಟಿಯ ಹತ್ತಿರ ...ತ್ಯಾಧುನಿಕ ಕೋಲ್ಟ್ ರಿವಲ್ವಾರ್ ಇತ್ತು. ಯಲಹಂಕ ...ಲ್ಲಿ ಕೊಲೆಯಾದ ಮಚ್ಚ ಮಂಜನ ಬಳಿ ರಿವಲ್ವಾರ್ ...ತ್ತಾದರು, ಕೊಲೆಯಾದ ಸಮಯದಲ್ಲಿ ಅದು ಮನೆಯ ...ಡ್ರೇಜ್ ಕಪಾಟನಲ್ಲಿ ಮಲಗಿತ್ತಂತೆ.


ಫೈರ್ ಆರ್ಮಸ್ ಅಂದರೆ ಪಿಸ್ತೂಲು, ರಿವಲ್ವಾರ್ ...ಗ್ಗೆ ಅತ್ಯಾಕರ್ಷಣೆ ಬೆಳೆಸಿಕೊಂಡಿದ್ದವನು ಬೂಟ್‌ಹೌಸ್ ...ಮಾರ್. ವಿವಿಧ ನಮೂನೆಯ ಆರೇಳು ವಿದೇಶಿ ...ವಲ್ವಾರ್‌ಗಳು ಇವನ ಬಳಿ ಇದ್ದವಂತೆ. ಆದರೆ ಆತ ...ವನ್ನು ಎಂದಿಗೂ ಬಳಸಲಿಲ್ಲ, ತಮಾಷೆ ಎಂದರೆ ...ವನಿಗೆ ಪಿಸ್ತೂಲಿಗಿಂತ ಬೆಂಗಳೂರು ...ಡಿಗಳ ಚಾಕು-ಚೂರಿಯ ಬಗ್ಗೆ ಸಾಕಷ್ಟು ...ಯವಿತ್ತು, ಹಾಗಾಗಿ ಸದಾ ಸ್ಟ್ಯಾಬ್‌ಪ್ರೂಫ್ ...ಕೇಟ್ ಧರಿಸಿ ಓಡಾಡುತ್ತಿದ್ದ. ಈ ...ಚಾರ ತಿಳಿದಿದ್ದ ಹಂತಕರು ಅವನ ಕುತ್ತಿಗೆ ...ಯ್ದು ಹತ್ಯೆಗೈದರು.

ಇದಕ್ಕೆ ತದ್ವಿರುದ್ಧ ಎಂದರೆ ಜೈರಾಜ್. ...ವುದೋ ಡೀಲಿಗೆ ಬಂದಿದ್ದ ...ಂಬೈನ ಭೂಗತರು ಜೈರಾಜ್ ಜೊತೆಗೆ ...ಟಕ್ಕೆ ಕೂತಿದ್ದಾಗ, "ನಿಮಗೆ ಬೇಕಾದರೆ ...ವು ಬಂದೂಕು, ಪಿಸ್ತೂಲು ಕೊಡ್ತೇವೆ" ...ದ್ರಂತೆ. ಈ ಮಾತಿಗೆ ನಕ್ಕ ಜೈರಾಜ್, ... ಪಕ್ಕದಲ್ಲಿದ್ದ ಕೋಟೆ ನಾರಾಯಣ, ...ಟೆ ಶಿವ, ಫ್ರೂಟ್, ನಾರಾಯಣ, ...ಸನ್, ಬರ್ನರ್ ನಾರಾಯಣ ಮುಂತಾ... ...ವರನ್ನು ತೋರ‍್ಸಿ, "ಇವ್ರ ತೋಳು, ತೊಡೆ, ...ಗಾರಿಕೆ, ತಲವಾರ್ ಮುಂದೆ ...ನ್ನದು, ದೀಪಾವಳಿ ಪಿಸ್ತೂಲು?" ...ದ್ರಂತೆ. ಆದ್ರೆ ದುರಾದೃಷ್ಟ ನೋಡಿ. ... "ದೀಪಾವಳಿ ಪಿಸ್ತೂಲಿನಿಂದ" ...ರಾಜ್ ಅಂತ್ಯವಾಯ್ತು.



ಮಚ್ಚ ಮಂಜ ಮತ್ತು ಎಂ.ಪಿ. ಜಯರಾಜ್

... ಜೈರಾಜ್, ಕದಿರೇನಹಳ್ಳಿ ಕ್ರಾಸ್ ಸೀನ, ಬಬ್ಲರ್ ...



ವಿಕೃತಕಾಮಿ ನಸ್ರುವನ್ನು ಎನ್‌ಕೌಂಟರ್ ಮಾಡಿದ ಬಿ.ಕೆ. ಶಿವರಾಮ್

ಸುಬ್ಬರಾಜು ಇವರದೆಲ್ಲಾ ನಾವು ಕಂಡ ಪೂರ್ಣ ಪ್ರಮಾಣದ ಶೂಟ್‌ಔಟ್ ಕೊಲೆ ಪ್ರಕರಣಗಳು. ಆದರೆ ಇದರಲ್ಲಿ ಮುಂಬೈ ಮೂಲದ ಶಾರ್ಪ್‌ಶೂಟರ್‌ಗಳ ಕೈವಾಡ ಇರೋದ್ರಿಂದ ಬೆಂಗಳೂರು ರೌಡಿಗಳ ಜೊತೆ ಕೊಂಡಿ ಹಾಕೋಕ್ಕೇ ಸಾಧ್ಯವಿಲ್ಲ.

ಹೋಗ್ಲಿ ಇವರಿಗೆ ಈ ವೆಪನ್‌ಗಳು ಎಲ್ಲಿಂದ ಬರುತ್ತೆ? ಕಾಶ್ಮೀರಿ ಉಗ್ರಗಾಮಿಗಳು! ತಮಿಳ್ನಾಡಿನಲ್ಲಿ ಅಡಗಿರುವ ಎಲ್‌ಟಿಟಿಇ ಟೈಗರ್‌ಗಳು! ಇಂಜಿನಿಯರಿಂಗ್ ಓದುತ್ತಿರುವ ಬಿಹಾರ, ಉತ್ತರ ಪ್ರದೇಶ ಮತ್ತು ಛತ್ತೀಸ್‌ಘರದ ವಿದ್ಯಾರ್ಥಿಗಳು? ಇದು ಇರಲಿ, ಬಿಡಲಿ. ಒಂದು ವಿಷಯ ನೆನಪಿಡಿ. ಲೈಸೆನ್ಸ್ ಅವಶ್ಯವಿಲ್ಲದ ಕೇವಲ ಹಕ್ಕಿ-ಪಕ್ಷಿ ಮತ್ತು ಕೋತಿಗಳನ್ನು ಬೆದರಿಸಲು ಅಥವಾ ಕ್ರೀಡೆಗೆ ಬಳಸುವ, ಸಾವಿರದಿಂದ, ಮೂರು ಸಾವಿರದ ಐನೂರು ರೂಪಾಯಿಗೆ ಸುಲಭವಾಗಿ ದೊರಕುವ ಏರ್ ಪಿಸ್ಟಲ್ ಅಥವಾ ಏರ್‌ಗನ್‌ಗಳನ್ನು ಒಬ್ಬ ನುರಿತ ಕುಶಲ ಕರ್ಮಿ ಮಾರಾಣಾಂತಿಕ ಬಂದೂಕಾಗಿ ಪರಿವರ್ತಿಸಬಿಡಬಹುದು.

ಕೇವಲ ಹನ್ನೆರಡು ವರ್ಷದ ಹಿಂದೆ ಪೀಣ್ಯಾದ ಕೈಗಾರಿಕಾ ಪ್ರದೇಶದಲ್ಲಿ ಇಂತಾ ಒಂದು ಅನಧಿಕೃತ ಬಂದೂಕು ಕಾರ್ಖಾನೆಯನ್ನು ಪೊಲೀಸರು ಪತ್ತೆಹಚ್ಚಿದ್ದರು. ಸಾಧಾರಣ ಏರ್‌ಗನ್ ಒಂದರ ಬ್ಯಾರಲ್ ಸುತ್ತಳತೆಯನ್ನು ಅಗಲಗೊಳಿಸಿ, ಬುಲೆಟ್ ಸ್ಟ್ರೈಕ್ ಮಾಡಲು ಶಕ್ತಿಶಾಲಿಯಾದ ಹ್ಯಾಮರ್ ಜೋಡಿಸಿ, ಅದಕ್ಕೆ ತಕ್ಕನಾದ ಸ್ಪ್ರಿಂಗ್ ಅಳವಡಿಸಿದರೆ ಒಂದು ಸಿಂಗಲ್ ಬ್ಯಾರಲ್ ಬಂದೂಕು ಸಿದ್ಧ. ಇದನ್ನು ಯಾವುದೇ ಲೇತ್‌ನಲ್ಲಿ ಮಾಡಬಹುದು. ಅಷ್ಟೇ ಏಕೆ ಸಾಮಾನ್ಯ ಏರ್‌ಗನ್ ಕೂಡ ಪಾಯಿಂಟ್ ಬ್ಲಾಂಕ್ ರೇಂಜ್‌ನಿಂದ ಆಯಕಟ್ಟಿನ ಜಾಗಕ್ಕಿಟ್ಟು ಹೊಡೆದರೆ ವ್ಯಕ್ತಿ ಸಾಯುತ್ತಾನೆ.

ಹೀಗೆ ಸಾಗಿರುವ ಗನ್ ಪುರಾಣವು ಈಗ ಈ ಮಟ್ಟಕ್ಕೆ ತಲುಪಿದೆ. ಪಿಸ್ತೂಲು ಇಟ್ಟುಕೊಳ್ಳುವುದು ಪ್ರತಿಷ್ಠೆಯ ಸಂಕೇತ ಎಂದು ಶ್ರೀಮಂತರಿಗೆ ಅನಿಸಿದರೆ, ಮತ್ತೆ ಕೆಲವರಿಗೆ ಅದು ಫ್ಯಾನ್ಸಿ, ಕೆಲವರಿಗೆ ಆತ್ಮರಕ್ಷಣೆ. ರೌಡಿಗಳಿಗೆ 'ಈಜಿ ಟು ಹೈಡ್ ಅಂಡ್ ಈಜಿ ಟು ಕಿಲ್.' ವಿಪರ್ಯಾಸವೆಂದರೆ, ಆತ್ಮರಕ್ಷಣೆಗೆ ಗನ್ ಇಟ್ಟುಕೊಂಡಿದ್ದವರು ಚಲಾಯಿಸಲು ಬಾರದೆ ಸತ್ತಿದ್ದಾರೆ. ಫ್ಯಾನ್ಸಿಗೆ ಇಟ್ಟುಕೊಂಡವರು ವಿನಾಕಾರಣ ಹಾರಿಸಿ ಫಜೀತಿಗೆ ಸಿಲುಕಿದ್ದಾರೆ. ರೌಡಿಗಳು ಮಾತ್ರ ಹಾರಿಸುತ್ತಲೇ ಇದ್ದಾರೆ. ಮುಂದೆಯೂ ಹಾರಿಸುತ್ತಾರೆ. ಅದು ಈ ಉದ್ಯಾನ ನಗರಿಗೆ ಬಡಿದಿರುವ ಶಾಪ.

ಆದರೆ ನಗರದಲ್ಲಿ ಈ ಮಟ್ಟದಲ್ಲಿ 'ರಿವಾಲ್ವರ್ ಮೇನಿಯಾ' ಆರಂಭವಾಗಲು ಕಾರಣವೇನು? ಈ ಪ್ರಶ್ನೆಗೊಂದು ಸಿಂಪಲ್ ಉತ್ತರ- ರಾಜಕಾರಣಿ, ರಿಯಲ್ ಎಸ್ಟೇಟ್, ಭೂಗತ ಜಗತ್ತು ಮತ್ತು ಬಿಸಿನೆಸ್‌ಗಳು ಈಗ ಪರಸ್ಪರ ಬೆಸೆದುಕೊಂಡಿರುವುದು. ಕೆಲ ವರ್ಷಗಳ ಹಿಂದೆ ರಾಜಕಾರಣಿಯೇ ಒಂದು ಗುಂಪು, ರೌಡಿಯೇ ಮತ್ತೊಂದು ಗುಂಪು ಎಂಬ ಅಭಿಪ್ರಾಯವಿತ್ತು, ಆದರೆ ಇವತ್ತು ರಾಜಕಾರಣಿಯೇ ರೌಡಿ, ರೌಡಿಯೇ ರಾಜಕಾರಣಿ.

ಎರಡು ಬಾರಿ ನಗರ ಪಾಲಿಕೆಗೆ ಆಯ್ಕೆಯಾಗಿದ್ದ ಕಾಮಾಕ್ಷಿಪಾಳ್ಯದ ಗೋಪಾಲಯ್ಯ, ಮಚ್ಚ ಮಂಜನ ಕೊಲೆ ಮಾಡಿಸುತ್ತಾನೆ. ಇಂತಾ ಗೋಪಾಲಯ್ಯ ಗ್ರಾನೈಟ್ ಉದ್ದಿಮೆದಾರ ಸಹ. ಇವನನ್ನು ರೌಡಿ ಎನ್ನೋಣವೆ? ರಾಜಕಾರಣಿ ಎಂದು ಕರೆಯೋಣವೆ? ಗೋಪಾಲಯ್ಯನ ವಿರುದ್ಧ ಚುನಾವಣೆಗೆ ಸ್ಪರ್ಧಿಸಲು ತಯಾರಿ ನಡೆಸಿದ್ದ ಮಚ್ಚ ಗೋಪಾಲಯ್ಯನ ಕಡೆಯವರಿಗೆ ಹೆದರಿ ಪಿಸ್ತೂಲು ಹಿಡಿದು ಓಡಾಡುತ್ತಾನೆ. ಈಗ ಪಿಸ್ತೂಲು ಹಿಡಿದು ಗ್ಯಾಂಗ್ ಕಟ್ಟಿಕೊಂಡು ಓಡಾಡುವ ಸರದಿ ಗೋಪಾಲಯ್ಯನದು. ಅವನಿಗೆ ಮಚ್ಚನ ಕಡೆಯವರಿಂದ ಪ್ರಾಣಭೀತಿ.



ತಿಮ್ಮೇನಹಳ್ಳಿ ಗೋವಿಂದ ಮತ್ತು ತಿಮ್ಮೇನಹಳ್ಳಿ ಸೂರಿ


ಲ್ಯಾಂಡ್ ಡೀಲಿಂಗ್‌ನಲ್ಲಿ ಇದ್ದ ದೊಡ್ಡಕಲ್ಲಸಂದ್ರ ಗ್ರಾಮ ಪಂಚಾಯ್ತಿ ಅಧ್ಯಕ್ಷ ಮುನಿಸ್ವಾಮಿ ಅಜಾತಶತ್ರುವಂತೆ. ಆದರೂ ಅವನಿಗೆ ಪಿಸ್ತೂಲು ಹುಚ್ಯಾಕೆ? ಜೀವಭಯವೇಕಿತ್ತು? ರಿಯಲ್ ಎಸ್ಟೇಟು, ರಾಜಕೀಯ, ಹೋಟೇಲು ಉದ್ಯಮ ಎಲ್ಲದರಲ್ಲೂ ಕೈ ಆಡಿಸುತ್ತಿರುವ ಮಾಜಿ ಶಾಸಕ ಆರ್.ವಿ. ದೇವರಾಜ್ ಅಕ್ಕಪಕ್ಕದಲ್ಲಿರುವವರ ಜೇಬಲ್ಲೇಕೆ ಪಿಸ್ತೂಲು? ಒಟ್ಟನಲ್ಲಿ ರಿವಾಲ್ವರ್ ಮೇನಿಯಾಕ್ಕೆ ಮೂಲ ಕಾರಣ ರೌಡಿಗಳು, ಭೂಗಳ್ಳರು ರಾಜಕಾರಣಿಗಳಾಗುತ್ತಿರುವುದು ಮತ್ತು ಅವರ ಹಳೇ ದುಷ್ಮನ್‌ಗಳೂ ಅದೇ ಜಾಡಿನಲ್ಲಿ ಹಿಂಬಾಲಿಸುತ್ತಾ ಒಬ್ಬರನ್ನೊಬ್ಬರು ಹಣಿಯಲು ಹವಣಿಸುತ್ತಿರುವುದು. ■

ಶಿಕ್ಷೆ ಏಕೆ ಸಾಧ್ಯವಿಲ್ಲ?

ಜೇಡರಹಳ್ಳಿ ಕೈಲಿ .38 ರಿವಲ್ವಾರ್ ಸಿಗ್ತು, ಘರ್ದಿನ್ ಕೈಲಿ ಪಾಯಿಂಟ್ ಫೋರ್ ಫೈವ್ ಸಿಗ್ತು, ಇದೆಲ್ಲಾ ಕಾನೂನಿನ ಪ್ರಕಾರ ಗುರುತರವಾದ ಅಪರಾಧ. ಆರ್ಮ್ ಆಕ್ಟ್ 1959 ಸೆಕ್ಷನ್ 25 ಮತ್ತು 5 ರ ಪ್ರಕಾರ 3 ವರ್ಷದಿಂದ 10 ವರ್ಷದವರೆಗೆ ಈ ಅಪರಾಧಕ್ಕೆ ಶಿಕ್ಷೆಯಾಗಬಹುದು. ಆದರೆ ಬಹುತೇಕ ಪ್ರಕರಣಗಳಲ್ಲಿ ಶಿಕ್ಷೆ ಆಗುವುದಿಲ್ಲ ಮತ್ತು ಆಗಿರುವ ನಿದರ್ಶನಗಳೂ ಇಲ್ಲ. ಈ ಧೈರ್ಯದಿಂದಲೇ ರೌಡಿಗಳು ಗನ್‌ಗಳನ್ನು ಬಳಸುತ್ತಾರೆ, ಹೊಂದಿರುತ್ತಾರೆ ಮತ್ತು ಸಿಕ್ಕಿಬಿದ್ದರೆ ವಾರದಲ್ಲೇ ಜಾಮೀನಿನ ಮೇಲೆ ಹೊರಬರುತ್ತಾರೆ.

ಇದಕ್ಕೆ ಕಾರಣ ಕಾನೂನಿನಲ್ಲಿರುವ ಲೋಪವಲ್ಲ, ತನಿಖಾ ಸಂಸ್ಥೆಗಳಿಗಿರುವ ಮಿತಿ ಮತ್ತು ಕಾರ್ಯವ್ಯಾಪ್ತಿಯಿಂದಾಗಿ ಇಂತಹ ಆರೋಪಗಳನ್ನು ನ್ಯಾಯಾಲಯದಲ್ಲಿ ಸಾಬೀತು ಮಾಡುವಲ್ಲಿ ತನಿಖಾ ಸಂಸ್ಥೆಗಳು ವಿಫಲವಾಗುತ್ತವೆ.

ಒಂದು ರಿವಲ್ವಾರ್ ಅಥವಾ ಪಿಸ್ತೂಲಿನಲ್ಲಿ ಅಪರಾಧ ಕೃತ್ಯ ಸಂಭವಿಸಿದೆಯೆಂದರೆ ಮಹಜರ್‌ನಲ್ಲಿ ಆ ಶಸ್ತ್ರದ ಮೂಲವನ್ನು ಪತ್ತೆಹಚ್ಚುವುದು ಮತ್ತು ನ್ಯಾಯಾಲಯದ ಮುಂದೆ ಹಾಜರುಪಡಿಸುವುದು ಬಹುಮುಖ್ಯ. ಉದಾಹರಣೆಗೆ ಒಂದು ಕೊಲೆ 'ವೆಬ್ಲಿ ಅಂಡ್ ಸ್ಕಾಟ್' ಪಿಸ್ತೂಲಿನಿಂದ ನಡೆದಿದೆ ಎಂದು ಭಾವಿಸೋಣ. ಇದು ಜರ್ಮನಿ ಮತ್ತು ಬೆಲ್ಜಿಯಂನಲ್ಲಿ ತಯಾರಾಗುವ ಶಸ್ತ್ರ. 'ಕೋಲ್ಟ್' ಆದರೆ ಬ್ರಿಟಿಷ್ ಮೂಲದ್ದು. ಅಂದರೆ ತನಿಖಾಧಿಕಾರಿಗಳಾಗಲಿ ಅಥವಾ ಸಂಸ್ಥೆಯಾಗಲಿ ಇದರ ಮೂಲವನ್ನು ಕೆದಕಿಕೊಂಡು ಆ ದೇಶಗಳಿಗೆ ಹೋಗಬೇಕು. ಅದಕ್ಕೆ ಅಗತ್ಯವಾದ ಸೌಕರ್ಯಗಳೇ ನಮ್ಮಲ್ಲಿ ಇರುವುದಿಲ್ಲ. ಮೂಲತಃ ಇಂತಹ ಶಸ್ತ್ರಗಳು ಕಳ್ಳಸಾಗಣೆಯ ಮೂಲಕ ಒಳನುಸುಳಿದವು.





ಇನ್ನು ಕೆಲವು ಅನಾಮದೇಯ ಮೂಲಗಳಿಂದ, ಅಪರಿಚಿತ ವ್ಯಕ್ತಿಗಳಿಂದ ಸರಬರಾಜಾಗತ್ತವೆ. ಕೊಡು-ಕೊಳ್ಳುವ ಸಂದರ್ಭ ಹೊರತುಪಡಿಸಿದರೆ ಆನಂತರ ಕೊಂಡವನಿಗೆ ಮಾರಿದವನ್ಯಾರು ಎಂಬುದೇ ಗೊತ್ತಿರುವುದಿಲ್ಲ, ಆ ಸಂದರ್ಭದಲ್ಲೂ ತನಿಖೆಗೆ ಹಿನ್ನಡೆ ಉಂಟಾಗುತ್ತದೆ.

ಎಲ್ಲಕ್ಕಿಂತ ಒಂದು ಸರಳ ಮತ್ತು ನೈಜ ಉದಾಹರಣೆ ಎಂದರೆ, ರೌಡಿಯೊಬ್ಬನ ಮೇಲೆ ಗುಂಡು ಹಾರಿಸಿದ ಆರೋಪದ ಮೇಲೆ ಮತ್ತೊಬ್ಬ ರೌಡಿಯನ್ನು ಬಂಧಿಸಲಾಯ್ತು. ಮಹಜರ್‌ಗಾಗಿ ಆತನಿಂದ ಪಿಸ್ತೂಲು ವಶಪಡಿಸಿಕೊಳ್ಳುವುದು ಅವಶ್ಯಕ. ವಿಚಾರಣೆಯ ಸಂದರ್ಭದಲ್ಲಿ ಪಿಸ್ತೂಲನ್ನು ಮುಂಬೈನಲ್ಲಿ ಬಚ್ಚಿಟ್ಟಿರುವುದಾಗಿ ರೌಡಿ ಬಾಯಿಬಿಟ್ಟ. ಹಿಂದು-ಮುಂದು ಯೋಚಿಸದ ಪೊಲೀಸರು ರೌಡಿಯೊಂದಿಗೆ ಮುಂಬೈಗೆ ಹೋದರು. ಅಲ್ಲಿ ಜುಹು ಬೀಚಿಗೆ ಪೊಲೀಸರನ್ನು ಕರೆದೊಯ್ದು ರೌಡಿ 'ಇಲ್ಲೇ ಎಸೆದೇ ಸಾರ್' ಎಂದು ಸಮುದ್ರವನ್ನು ತೋರಿಸಿದ್ದ. ಪೊಲೀಸರು ಉಪ್ಪು ನೀರು ಕುಡಿದವರಂತೆ ಮುಖ ಮಾಡಿಕೊಂಡು ಬಂದಿದ್ದರು.


ಮತ್ತೊಬ್ಬ ರೌಡಿ ಇಲ್ಲೇ ಹತ್ತಿರದ ಗಗನಚುಕ್ಕಿ-ಭರಚುಕ್ಕಿ (ಬ್ಲಫ್) ಜಲಪಾತಕ್ಕೆ ಪೊಲೀಸರನ್ನು ಕರೆದೊಯ್ದು ಜಲಪಾತದ ಮೇಲೆ ನಿಂತು ಪ್ರಪಾತವನ್ನು ತೋರಿಸಿ 'ಅಲ್ಲಿ ಎಸೆದೆ' ಸಾರ್ ಎಂದು ಹೇಳಿದ್ದ. ಈ ಎರಡೂ ಪ್ರಕರಣಗಳಲ್ಲಿ ಕೃತ್ಯಕ್ಕೆ ಬಳಸಿದ ಆಯುಧವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲಾಗದೆ ಪ್ರಾಸಿಕ್ಯೂಷನ್ ಮೊಕದ್ದಮೆಯಲ್ಲಿ ಸೋಲು ಅನುಭವಿಸಬೇಕಾಯ್ತು. ಇಂತಹ ಲೋಪದೋಷಗಳೇ ದಾರಾಳ ಗನ್ ಬಳಕೆಗೆ ಕಾರಣವಾಗಿದೆ.

ಭಾರತದಲ್ಲಿ ಜಾತಿ, ಬಡತನಕ್ಕಿಂತ ದೊಡ್ಡ ಹಿಂಸೆ ಬೇರೊಂದಿಲ್ಲ-ಗದ್ದರ್

ಯಾವತ್ತು ಮೊದಲ ಕೊಲೆಯಲ್ಲೇ ಸೀನನನ್ನು ಪೊಲೀಸರು ಹಿಡಿಯಲಿಲ್ಲವೋ ಅದಾಗಿ ವರ್ಷ ತುಂಬುವ ಮೊದಲೇ ಸೀನ ಒಂದು ಹತ್ಯೆಯನ್ನು ಮುಚ್ಚಿಕೊಳ್ಳಲು ಮತ್ತೊಂದು ಜೋಡಿ ಕೊಲೆಯನ್ನು ಮಾಡಿಬಿಟ್ಟ. ಹೋಗಲಿ ಈ ಎರಡನೇ ಹತ್ಯಾಕಾಂಡದ ನಂತರವಾದರೂ ಸೀನನನ್ನು ಪೊಲೀಸರು ಬಂಧಿಸಿದ್ದಾರಾ?


ಎಚ್.ಡಿ.ರೇವಣ್ಣ


ಬಾಲಕೃಷ್ಣ


ಚೆನ್ನಿಗಪ್ಪ


ಕುಮಾರಸ್ವಾಮಿ

ರೌಡಿ ರಾಜ್ಯ


ರೌಡಿಗಳು ಕಾಂಗ್ರೆಸ್‌ನಲ್ಲೂ ಇಲ್ವಾ? ಅಲ್ರೀ ನಂ ಸರ್ಕಾರ ಅಂತ ಬಂದ್ಮೇಲೆ ನಂ ಪಾರ್ಟಿಲಿರೋ ರೌಡಿಗಳಿಗೆ ಅನುಕೂಲ ಆಗದಿದ್ದರೆ ಹೇಗೆ? ಬಿಟ್ಟು ಕಳಿಸ್ರೀ ಅವರನ್ನಾ.....!

ಇದು ಗಣಿ ಮಂತ್ರಿ ಶ್ರೀಮಾನ್ ಚೆನ್ನಿಗಪ್ಪನವರು ನೆಲಮಂಗಲದ ಪರಮದಕ್ಷ(!) ಇನ್ಸ್‌ಪೆಕ್ಟರ್ ಜಗನ್ನಾಥ್ ರೈ ಸಾಹೇಬರಿಗೆ ಫೋನಿನಲ್ಲಿ ಗದರಿದ ರೀತಿ ನೀತಿ. ಸಂದರ್ಭ–ಕಡಬಗೆರೆಯ ಖತರ್‌ನಾಕ್ ಕ್ರಿಮಿನಲ್ ಪಾಯ್ಸನ್ ರಾಮ ಮತ್ತು ಆತನ ಡಜನ್ನುಗಟ್ಟಲೆ ಹುಡುಗರನ್ನು ರಾತ್ರೋರಾತ್ರಿ ದಾಳಿ ಮಾಡಿ ಅವರ ಬಳಿಯಿದ್ದ ಬರೋಬ್ಬರಿ ಒಂದು ಮೂಟೆಯಷ್ಟು ಮಚ್ಚು ಲಾಂಗುಗಳ ಸಮೇತ ಸೆರೆಹಿಡಿದಾಗ!

ಮೊದಲು ಕಾಮಾಕ್ಷಿಪಾಳ್ಯದ ಜಾನಿಯನ್ನು ಕತ್ತರಿಸಿ, ಆನಂತರ ರೌಡಿ ಮಚ್ಚ ಉರ್ಫ್ ಮಂಜನನ್ನು ಕೊಂದು, ಇದಾಗಿ ಆರೇ ತಿಂಗಳಿಗೆ ನೆಲಮಂಗಲದ ವಕೀಲ ದೇವರಾಜ್ ಮತ್ತು ಗ್ರಾಮ ಪಂಚಾಯ್ತಿ ಸದಸ್ಯ ಕೃಷ್ಣಮೂರ್ತಿಯವರ ಜೋಡಿ ಕೊಲೆಗೆ ಪ್ರಮುಖ ಕೊಂಡಿಯಾಗಿದ್ದವನು ಪಾಯ್ಸನ್ ರಾಮ ಅಲಿಯಾಸ್ ಕಡಬಗರೆ ರಾಮ. ಆತ ಕಾಮಾಕ್ಷಿಪಾಳ್ಯದ ರಕ್ತಪಿಪಾಸು ಗೋಪಾಲಯ್ಯನ ಜೋಡಿದಾರ. ಅಂಥವನನ್ನು ಭಾರೀ ಪರಿಶ್ರಮದಿಂದ ಇನ್ಸ್‌ಪೆಕ್ಟರ್ ಜಗನ್ನಾಥ್ ರೈ ಮತ್ತು ಎಸ್ಪೈ ಪರಮೇಶ್ ತಂಡ ಕಡಬಗೆರೆಗೇ ನುಗ್ಗಿ ಒಂದು ಮೂಟೆಯಷ್ಟು ಮಚ್ಚು ಲಾಂಗುಗಳ ಸಮೇತ ಆತನ ಒಂದು ಡಜನ್ ಹುಡುಗರನ್ನು ಎಳೆದೊಯ್ದರೆ, 'ಕಂಡಿದೀನಿ ಬಿಟ್ಟು ಕಳಸಯ್ಯಾ ಅವರ್ನ' ಎಂದು ಪೊಲೀಸರನ್ನೇ ದಬಾಯಿಸುತ್ತಾನೆ ಗಣಿ ಮಂತ್ರಿ ಚೆನ್ನಿಗಪ್ಪ.

ಹಿಂದೆ ಕೃಷ್ಣರ ಕಾಲದಲ್ಲಿ ಡೀಕೆಗೂ ಇಂಥ ಖಯಾಲಿಯಿತ್ತಾದರೂ ಆತ ಯಾವತ್ತಿಗೂ ಯಾವುದೇ ರೌಡಿಗಳ ಜೊತೆ ಬಹಿರಂಗವಾಗಿ ಕಾಣಿಸಿಕೊಂಡಿದ್ದಾಗಲಿ, ಅವರ ಹತ್ಯೆಗಳನ್ನು ಈ ರೀತಿ ಲಜ್ಜೆಗೆಟ್ಟು ಸಮರ್ಥಿಸಿಕೊಂಡಿದ್ದಾಗಲಿ, ಅಥವಾ ಕೊಂದವರನ್ನು ಬಿಟ್ಟುಬಿಡಿ ಎಂದು ಪೊಲೀಸರನ್ನು ದಬಾಯಿಸಿದ್ದಾಗಲಿ ಮಾಡಲಿಲ್ಲ. ಆದರೆ ಜೆಡಿಎಸ್‌ನ ಜಾಯಮಾನ ಹಾಗಲ್ಲ. ಮಚ್ಚನ ಕೊಲೆ ಕೇಸಿನ ಪ್ರಮುಖ ಆರೋಪಿಗಳಾದ ಗೋಪಾಲಯ್ಯ ಮತ್ತು ಡಾಬಾ ಸೀನರನ್ನು ಬೆಂಗಳೂರಿನಲ್ಲಿ ಪೊಲೀಸರು ಹುಡುಕುತ್ತಿದ್ದರೆ; ಅವರಿಬ್ಬರೂ ಗೋವಾದಲ್ಲಿ ಮುಖ್ಯಮಂತ್ರಿ ಕುಮಾರಸ್ವಾಮಿಯ ಆಜೂಬಾಜು ನಿಂತು ಪೋಜು ಕೊಟ್ಟ ಫೋಟೋ ಪ್ರಜಾವಾಣಿಯಲ್ಲಿ ಅಚ್ಚಾಗುತ್ತದೆ!

ನೆಲಮಂಗಲದ ಜೋಡಿ ಕೊಲೆಯ ಮತ್ತೊಬ್ಬ ಪ್ರಮುಖ ಆರೋಪಿ ಚೆತ್ತನಗೆರೆ ಸೀನ ಒಂದಲ್ಲ ಎರಡು ಹತ್ಯಾಕಾಂಡಗಳನ್ನು ಪೂರೈಸಿಯೂ ಪೊಲೀಸರಿಗೆ ಸಿಗದಿದ್ದರೇನಂತೆ; ಆತ ಲೋಕೋಪಯೋಗಿ ಮಂತ್ರಿ ರೇವಣ್ಣನವರ ಛೇಂಬರಿನಲ್ಲಿ ರಾಜಾರೋಷವಾಗಿ ಠಳಾಯಿಸುತ್ತಾನೆ!



ಕಡಬಗೆರೆಯ ಪಾಯ್ಸನ್ ರಾಮನ ಪರವಾಗಿ ಮಂತ್ರಿ ಚೆನ್ನಿಗಪ್ಪನವರೇ ಪೊಲೀಸರಿಗೆ ಧಮಕಿ ಹಾಕುತ್ತಾರೆ ಮತ್ತು ಮಚ್ಚನ ಮತ್ತೊಬ್ಬ ಹಂತಕ ಡಾಬಾ ಸೀನ ಉರ್ಫ್ ಜೇಕೆ ಸೀನ ಇವತ್ತಿಗೂ ಮುಖ್ಯಮಂತ್ರಿ ಜೊತೆಗೆ ರಾಜ್ಯ ಪ್ರವಾಸ ಮಾಡಿಕೊಂಡಿದ್ದಾನೆ!







ಕೊಲೆಯಾದ ಕೃಷ್ಣಮೂರ್ತಿ ಮತ್ತು ವಕೀಲ ದೇವರಾಜ್

ಓರ್ವ ಮುಖ್ಯಮಂತ್ರಿಯೇ ಈ ರೀತಿ ಒಂದರ [illegible] ನಾಲ್ಕು ಹತ್ಯೆಗಳನ್ನೆಸಗಿದ ಪಾತಕಿಗಳ ಜೊತೆ ಬಹಿರಂ[illegible]ವಾಗಿ ಅಡ್ಡಾಡುತ್ತಾನೆಂದರೆ ಇನ್ನು ಪೊಲೀಸರನ್[illegible] ಕೇಳಬೇಕೆ?

ಶಾಮೀಲಾದ ಪೊಲೀಸರು

ಸದ್ಯ ಕಾಮಾಕ್ಷಿಪಾಳ್ಯದ ರಕ್ತಪಿಪಾಸು ಗೋಪಾ[illegible]ಲಯ್ಯ, ಈತನ ಕೊಲೆಗಡುಕ ತಮ್ಮ ಗೂಳಿ ಬಸವ[illegible] ಕಡಬಗೆರೆಯ ಹಂತಕ ಸಹೋದರರಾದ ಜೇಕೆ ಸೀ[illegible] ಮತ್ತು ಪಾಯ್ಸನ್ ರಾಮ, ನೆಲಮಂಗಲದ ಜೋ[illegible] ಕೊಲೆಯ ಕರ್ತೃ ಚೆತ್ತನಗೆರೆ ಸೀನ ಮುಂತಾದವ[illegible]ಲ್ಲರನ್ನೂ ಮುಖ್ಯಮಂತ್ರಿಯಷ್ಟೇ ಜೋಪಾನ ಮಾ[illegible] ಪೊಲೀಸರು ಕಾಯುತ್ತಿದ್ದಾರೆ. ಈ ಪೈಕಿ ಯಾ[illegible] ಎಷ್ಟೇ ತಲೆ ತೆಗೆದರೂ ಅದು ಅಪರಾಧವೇ ಅ[illegible] ಬದಲಾಗಿ ಅವರನ್ನು ವಿರೋಧಿಸುವವನೇ ರೌ[illegible] ಅಂಥವರನ್ನೇ ಹಿಡಿದು ಪೊಲೀಸರು ಲಾಕಪ್[illegible] ದಬ್ಬುತ್ತಾರೆ ಮತ್ತು ಜೈಲಲ್ಲಿದ್ದರೂ ಕರೆತಂ[illegible]ರುಬ್ಬುತ್ತಾರೆ.

ಇದನ್ನೇ ನೀವು ಜಂಗ್ಲೀನ್ಯಾಯ ಎನ್ನುವಿರಾದ[illegible] ಈಗ ಕಾಮಾಕ್ಷಿಪಾಳ್ಯ, ನೆಲಮಂಗಲ, ದೊಡ್ಡಬಳ್ಳಾಪು[illegible] ಮತ್ತು ಕುಣಿಗಲ್ ಪೊಲೀಸ್ ಠಾಣೆಗಳಲ್ಲಿ ನಡೆಯು[illegible]ತ್ತಿರುವುದೂ ಇಂಥದ್ದೇ ಪೊಲೀಸ್ ರಾಜ್ಯ.

ಬೆಂಗಳೂರು ಗ್ರಾಮಾಂತರದ ಅಡಿಷನಲ್ [illegible] ಎಲ್.ಜಿ. ಕೃಷ್ಣಪ್ಪ, ಕುಣಿಗಲ್ ಇನ್ಸ್‌ಪೆಕ್ಟರ್ [illegible] ರಾಮೇಗೌಡ, ದೊಡ್ಡಬಳ್ಳಾಪುರದ ಸರ್ಕಲ್ ಇನ್[illegible]ಪೆಕ್ಟರ್ ರಮೇಶ್‌ಕುಮಾರ್ ಮತ್ತು ವಿಜ[illegible] ನಗರದ ಎಸಿಪಿ ಕುಮಾರಸ್ವಾಮಿಯಂಥ ಪ[illegible] ಜೆಡಿಎಸ್ ಬೆಂಬಲಿಗ ಪೊಲೀಸ್ ಅಧಿಕಾರಿ[illegible] ಗುಂಪೊಂದಕ್ಕೆ ಶತಾಯಗತಾಯ ಕಾಮಾಕ್ಷಿಪಾಳ[illegible] ರಕ್ತಪಿಪಾಸು ಗೋಪಾಲಯ್ಯನ ಎಲ್ಲಾ ವಿರೋಧಿಗಳ[illegible] ಮುಗಿಸ ಬೇಕಿದೆ. ಹಾಗೆ ನೆಲಮಂಗಲದ ಜೋ[illegible] ಕೊಲೆಯ ಮುಖ್ಯ ಆರೋಪಿ ಚೆತ್ತನಗೆರೆ ಸೀನನನ[illegible] ರಕ್ಷಿಸಬೇಕಿದೆ. ತನ್ಮೂಲಕ ಮಚ್ಚನ ಕೊಲೆಯನ್ನು ಮು[illegible] ಹಾಕಿ ನೆಲಮಂಗಲದ ಜೋಡಿ ಕೊಲೆಗೂ ಗತಿ ಕಾ[illegible] ಬೆಂಗಳೂರಿನ ಖತರ್‌ನಾಕ್ ಪಡೆಯೊಂದನ್ನು ಮತ್ತ[illegible] ಬಲಪಡಿಸುವುದೇ ಈ ಖಾಕಿವೀರರ ಪರಮಗುರಿ[illegible]

ಜೆಡಿಎಸ್ ಅಧಿಕಾರಕ್ಕೆ ಬಂದ ನಂತರ ಕೇ[illegible] ಒಂದು ವರ್ಷದಲ್ಲಿ ನಡೆದ ಈ ನಾಲ್ಕೂ ಹತ್ಯೆಗಳ[illegible] ಪೊಲೀಸರ ವರ್ತನೆಯೇ ಇದಕ್ಕೆ ಪುರಾವೆ ಒದಗಿ[illegible]ತ್ತದೆ.

ಸಧ್ಯ ಮಂತ್ರಿ ಚೆನ್ನಿಗಪ್ಪನ ಮಗ ಗೌರಿಶಂಕರನೇ [illegible] ಎಲ್ಲಾ ಹಂತಕ ಪಡೆಗಳಿಗೆ ಅಧಿಪತಿ. ಮೊದ[illegible] ಕೊಲೆಯಾದವನು ನೆಲಮಂಗಲ ತಾಲ್ಲೂಕು ದಾಸನ[illegible] ಹೋಬಳಿ ಚೆತ್ತನಗೆರೆಯ ಕಾಂಗ್ರೆಸ್ ಕಾರ್ಯಕ[illegible] ಬಸವಯ್ಯ. 2005 ರ ಜೂನ್ ಹದಿನಾರರಂ[illegible] ನೆಲಮಂಗಲದ ಆತನ ಬಾಳೆಕಾಯಿ ಮಂಡಿಗೇ [illegible] ಕೊಚ್ಚಿ ಹಾಕಲಾಯ್ತು. ಕೊಂದ ಮಚ್ಚು ಮುನಿ[illegible] ಅನಂತ, ಬೀರಯ್ಯ ಮತ್ತು ಚೆತ್ತನಗೆರೆ ಸೀನರ [illegible] ಚೆತ್ತನಗೆರೆ ಸೀನ ಮಂತ್ರಿ ಚೆನ್ನಿಗಪ್ಪನವರ ಪರಮ[illegible]

ರೌಡಿ-ಪೊಲೀಸ್ ಪಾನಗೋಷ್ಠಿಯಲ್ಲಿ ಮಂತ್ರಿಗಳು!


ಗೌರಿಶಂಕರ್

ಒಂದೆಡೆ ನೆಲಮಂಗಲದ ಕಾಂಗ್ರೆಸ್ ಕಾರ್ಯಕರ್ತರನ್ನು ಒಬ್ಬೊಬ್ಬರಾಗಿ ಮುಗಿಸಿದ ಜೆಡಿಎಸ್ ಗ್ಯಾಂಗ್ ಇತ್ತ ಗೋಪಾಲಯ್ಯನ ವಿರೋಧಿಗಳನ್ನೆಲ್ಲ ಮಟ್ಟ ಹಾಕಿದ್ದಕ್ಕೆ ಇತ್ತೀಚೆಗೊಂದು ವಿಜಯೋತ್ಸವದ ಪಾರ್ಟಿ ಹಮ್ಮಿಕೊಂಡಿತ್ತು. ಮಾಗಡಿ ರಸ್ತೆಯ ಸನ್‌ವ್ಯಾಲಿ ಕ್ಲಬ್‌ನಲ್ಲಿ ನಡೆದ ಈ ಪಾರ್ಟಿಯಲ್ಲಿ ಸಾರಿಗೆ ಮಂತ್ರಿ ಚೆಲುವರಾಯಸ್ವಾಮಿ, ಗಣಿ ಮಂತ್ರಿ ಚೆನ್ನಿಗಪ್ಪ ಮತ್ತು ಮಾಗಡಿ ಶಾಸಕ ಬಾಲಕೃಷ್ಣ ಭಾಗವಹಿಸಿದ್ದರು. ಆವತ್ತು ಕಂಠಮಟ್ಟ ಕುಡಿದು ಕುಣಿದಾಡಿದವನು ಚೆನ್ನಿಗಪ್ಪನ ಮಗ ಗೌರಿಶಂಕರ. ಸದ್ಯ ಈತನೇ ಇಡೀ ಗೋಪಾಲಯ್ಯನ ತಂಡದ ಅಧಿಪತಿ. ಪಾರ್ಟಿ ಕೊಟ್ಟವನು ಜೇಕೆ ಸೀನ ಉರ್ಫ್ ಡಾಬಾಸೀನ. ಅಲ್ಲಿ ಹಾಜರಿದ್ದ ಇತರೆ ಆಸಾಮಿಗಳೇನು ಕಮ್ಮಿಯವರೆ?

ಗೋಪಾಲಯ್ಯ, ಆತನ ತಮ್ಮ ಬಸವ, ಬಾಮೈದ ಧರಣಿ, ವೈನ್ಸ್ ಲೋಕಿ, ಚೆತ್ತನಗೆರೆ ಸೀನ, ಯಡಾಳು ದೇವಿ, ಮುಲಾಮನ ಶಿಷ್ಯರಾದ ರಾಮ, ಲಕ್ಷ್ಮಣ, ಪಾಯ್ಸನ್ ರಾಮ ಇತ್ಯಾದಿ ಇತ್ಯಾದಿ. ಸಾಲದ್ದಕ್ಕೆ ಬೆಂಗಳೂರು ಗ್ರಾಮಾಂತರ ಅಡಿಷನಲ್ ಎಸ್ಪಿ ಕೃಷ್ಣಪ್ಪ ಮತ್ತು ವಿಜಯನಗರದ ಎಸಿಪಿ ಕುಮಾರಸ್ವಾಮಿ ಕೂಡ ಹಾಜರಿದ್ದರಂತೆ!

ಸರ್ಕಾರವೊಂದರ ಮಂತ್ರಿಗಳು ಕೊಲೆಗಡುಕರ ಜೊತೆ ಕೂತು ಕುಡಿಯುತ್ತಾರೆಂದರೆ ಕನಿಷ್ಠ ಚಪ್ಪಾಳೆ ತಟ್ಟುವುದಕ್ಕಾದರೂ ಪೊಲೀಸರು ಇರಲೇಬೇಕಲ್ಲ!

ಇತ್ತೀಚಿನ ಸುದ್ದಿಯೇನೆಂದರೆ ಮಾಗಡಿ ಶಾಸಕ ಬಾಲಕೃಷ್ಣ ಮತ್ತು ಕಡಬಗೆರೆಯ ಪಾಯ್ಸನ್ ರಾಮ ಸೇರಿಕೊಂಡೇ ರಿಯಲ್ ಎಸ್ಟೇಟ್ ಧಂದೆಗಿಳಿದಿದ್ದಾರೆ. ಹಾಗೇ ಚೆನ್ನಿಗಪ್ಪನ ಮಗ ಗೌರಿಶಂಕ್ರ ಮತ್ತು ಗೋಪಾಲಯ್ಯ ಸೇರಿಕೊಂಡು ಲ್ಯಾಂಡ್ ಡೀಲು, ನೆಲಮಂಗಲ ಸುತ್ತಮುತ್ತ ಲೈವ್‌ಬ್ಯಾಂಡ್ ಧಂದೆಗೂ ಕೈಹಾಕಿದ್ದಾರೆ.

ಚೆತ್ತನಗೆರೆ ಗ್ರಾಮ ಪಂಚಾಯ್ತಿಯ ಸದಸ್ಯ ಮತ್ತು ಜೆಡಿಎಸ್‌ನ ಲೋಕಲ್ ಪುಢಾರಿ ದೇವ. ಬಸವಯ್ಯನ ಹತ್ಯೆಗೆ ಸಾಕ್ಷಿಯಾಗಿದ್ದವರು ಅದೇ ಚೆತ್ತನಗೆರೆಯ ವಕೀಲ ದೇವರಾಜು ಮತ್ತು ಮತ್ತೊಬ್ಬ ಗ್ರಾಮ ಪಂಚಾಯ್ತಿ ಸದಸ್ಯ ಕೃಷ್ಣಮೂರ್ತಿ. ಕೋರ್ಟಿನಲ್ಲಿ ಸೀನನಿಗೆ ಸಜೆ ಗ್ಯಾರಂಟಿ ಎನ್ನುವ ಹೊತ್ತಿಗೆ ಸೀನನ ಗ್ಯಾಂಗ್ ಸಾಕ್ಷಿಗಳನ್ನು ಹೆದರಿಸುತ್ತದೆ. ಅದಕ್ಕೂ ಜಗ್ಗದೇ ಹೋದಾಗ 2006 ರ ಮೇ ಐದರಂದು ದೊಡ್ಡಬಳ್ಳಾಪುರದಿಂದ ಮದುವೆ ಮುಗಿಸಿಕೊಂಡು ವಾಪಸ್ಸಾಗುತ್ತಿದ್ದ ವಕೀಲ ದೇವರಾಜು ಮತ್ತು ಕೃಷ್ಣಮೂರ್ತಿಯವರನ್ನು ಟಾಟಾ ಸುಮೋಗಳಲ್ಲಿ ಹಿಂಬಾಲಿಸಿ ಬಂದ ಸೀನನ ಗ್ಯಾಂಗ್ ನಡುರಸ್ತೆಯಲ್ಲೇ ಕೊಚ್ಚಿ ಹಾಕುತ್ತದೆ.

ದುರಂತವೆಂದರೆ ಮೊದಲ ಕೊಲೆ ನಡೆದು ವರ್ಷ ಆಗುತ್ತಾ ಬಂದಿದ್ದರೂ ಪೊಲೀಸರು ಹಂತಕರ ಗ್ಯಾಂಗ್ ಲೀಡರ್ ಚೆತ್ತನಗೆರೆ ಸೀನನನ್ನು ಬಂಧಿಸಿರುವುದಿಲ್ಲ. ಬಸವಯ್ಯನ ಕೊಲೆ ಕೇಸಿನಲ್ಲಿ ಮಿಕ್ಕೆಲ್ಲರನ್ನೂ ಜೈಲಿಗೆ ಹಾಕಿದ ಪೊಲೀಸರಿಗೆ ಚೆತ್ತನಗೆರೆ ಸೀನ ಜೆಡಿಎಸ್‌ನ ಮತ್ತೊಬ್ಬ ನಾಯಕ ಯಡಾಳು ದೇವಿಯ ತೋಟದ ಮನೆಯಲ್ಲಿದ್ದಾನೆಂಬ ಖಚಿತ ಮಾಹಿತಿಯಿತ್ತು. ಚೆನ್ನಿಗಪ್ಪನ ಮಗ ಗೌರಿಶಂಕರನ ಜೊತೆಗೇ ಆತ ಓಡಾಡುತ್ತಿದ್ದಾನೆಂಬ ಸುಳಿವಿತ್ತು. ಹಾಗಿದ್ದೂ ನೆಲಮಂಗಲದ ಇನ್ಸ್‌ಪೆಕ್ಟರ್ ಜಗನ್ನಾಥ್ ರೈ ಸೀನನನ್ನು ಬಂಧಿಸಲಿಲ್ಲ. ಅದಕ್ಕೆ ಕಾರಣನಾದವನು ಬೆಂಗಳೂರು ಗ್ರಾಮಾಂತರದ ಅಡಿಷನಲ್ ಎಸ್ಪಿ ಎಲ್.ಜಿ. ಕೃಷ್ಣಪ್ಪ. ಕೃಷ್ಣಪ್ಪನ ಪತ್ನಿ ಕೂಡ ನೆಲಮಂಗಲದ ಜೆಡಿಎಸ್ ಕಾರ್ಯಕರ್ತೆ ಮತ್ತು ಗ್ರಾಮ ಪಂಚಾಯ್ತಿ ಸದಸ್ಯೆ.

ಯಾವತ್ತು ಮೊದಲ ಕೊಲೆಯಲ್ಲೇ ಸೀನನನ್ನು ಪೊಲೀಸರು ಹಿಡಿಯಲಿಲ್ಲವೋ ಅದಾಗಿ ವರ್ಷ ತುಂಬುವ ಮೊದಲೇ ಸೀನ ಒಂದು ಹತ್ಯೆಯನ್ನು ಮುಚ್ಚಿಕೊಳ್ಳಲು ಮತ್ತೊಂದು ಜೋಡಿ ಕೊಲೆಯನ್ನು ಮಾಡಿಬಿಟ್ಟ. ಹೋಗಲಿ ಈ ಎರಡೇ ಹತ್ಯಾಕಾಂಡದ ನಂತರವಾದರೂ ಸೀನನನ್ನು ಪೊಲೀಸರು ಬಂಧಿಸಿದ್ದಾರಾ?

ಸಧ್ಯ ನೆಲಮಂಗಲಕ್ಕೆ ಇನ್ಸ್‌ಪೆಕ್ಟರ್ ಆಗಿರುವ ರಾಮಚಂದ್ರ ಇವತ್ತಿಗೂ ಸೀನನನ್ನು ಹುಡುಕ್ತಾ ಇದೀವಿ ಅನ್ನುತ್ತಿದ್ದಾರೆಯೇ ಹೊರತು ಅವರ ಕೈಗೆ ಈತನಕ ಸೀನ ಸಿಕ್ಕೇ ಇಲ್ಲವಂತೆ. ವಿಪರ್ಯಾಸವೆಂದರೆ ಹಂತಕ ಸೀನ ಸಧ್ಯ ಹಾಸನದಲ್ಲಿದ್ದಾನೆ. ಅದೂ ತನ್ನ ಜೊತೆ ಮೂರ್ನಾಲ್ಕು ಟಾಟಾ ಸುಮೋಗಳಲ್ಲಿ ರೌಡಿ ಪಡೆ ಕಟ್ಟಿಕೊಂಡು ಸುತ್ತುತ್ತಾನೆ. ವಿಧಾನಸೌಧದ ಮಂತ್ರಿ ರೇವಣ್ಣನ ಛೇಂಬರಿನಲ್ಲಿ ಕನಿಷ್ಠ ವಾರಕ್ಕೊಮ್ಮೆಯಾದರೂ ಅಡ್ಡೆ ಹಾಕುತ್ತಾನೆ. ಹಾಗಿದ್ದೂ ನೆಲಮಂಗಲದ ಪೊಲೀಸರಿಗಾಗಲಿ, ಅಡಿಷನಲ್ ಎಸ್ಪಿ ಕೃಷ್ಣಪ್ಪನವರ ಸ್ಕ್ವಾಡಿಗಾಗಲಿ ಸೀನ ಸಿಗುತ್ತಿಲ್ಲ ಎಂದರೆ ಏನರ್ಥ?

ಮೊದಲು ಬಸವಯ್ಯನನ್ನು ಸೀನನ ಗ್ಯಾಂಗ್ ಕೊಂದಾಗ ಯಾವ ಇನ್ಸ್‌ಪೆಕ್ಟರ್ ರಮೇಶ್‌ಕುಮಾರ್ ಸೀನನನ್ನು ಹಿಡಿಯದೇ ನೆರವಾದರೋ ಈಗ ಅದೇ ರಮೇಶ್‌ಕುಮಾರ್‌ರನ್ನು ಚೆನ್ನಿಗಪ್ಪನವರೇ ಹಠತೊಟ್ಟು ದೊಡ್ಡಬಳ್ಳಾಪುರಕ್ಕೆ ಹಾಕಿಸಿದ್ದಾರೆ. ಅಂದರೆ ಜೋಡಿಕೊಲೆ ನಡೆದದ್ದು ದೊಡ್ಡಬಳ್ಳಾಪುರ ವ್ಯಾಪ್ತಿಯಲ್ಲಿ ಮತ್ತು [illegible] ತನಿಖೆ ಮಾಡುತ್ತಿರುವುದೂ ಇನ್ಸ್‌ಪೆಕ್ಟರ್ ರಮೇಶ್‌ಕುಮಾರ್ ಸಾಹೇಬ್ರೇ. ಲೇಟೆಸ್ಟ್ ಸುದ್ದಿಯೇನೆಂದರೆ ಜೋಡಿ ಕೊಲೆಯ ಪ್ರಮುಖ ಆರೋಪಿ [illegible] ಯಡಾಳು ದೇವಿ, ಪದೇಲಳ್ಳಿ ಜೈರಾಮು, ಯಡಾಳು [illegible]ನಾಥ, ಸೀನನ ಚಿಕ್ಕಪ್ಪನ ಮಗ ಮಾದೇವ ಮತ್ತು [illegible] ಮತ್ತೊಬ್ಬ ಮುಂಜಣ ಹೆಸರುಗಳನ್ನು [illegible] ಜೋಡಿ ಕೊಲೆಗೆ ಚಾರ್ಜ್‌ಶೀಟ್ [illegible]. ಇವರೆಲ್ಲರೂ ಜೆಡಿಎಸ್ ಕಾರ್ಯಕರ್ತರೇ. [illegible] ಜೆಡಿಎಸ್ ಸರ್ಕಾರದ ಕಾನೂನು [illegible] ಹಾಗೆ [illegible]!

[illegible] ಜೋಡಿಕೊಲೆ ನಡೆದಾಗಲೇ ಅಡಿಷನಲ್ ಎಸ್ಪಿ [illegible] ಹಂತಕರ ರಕ್ಷಣೆಗೆ ನಿಂತಿದ್ದಾರೆಂಬ ಬಗ್ಗೆ [illegible]



ಆರೋಪಿ ಶ್ರೀನಿವಾಸ್

ಪತ್ರಿಕೆ ಬರೆದಿತ್ತು. ದುರಂತವೆಂದರೆ ಇವತ್ತಿಗೂ ಕೃಷ್ಣಪ್ಪನವರನ್ನು ಅದೇ ಹುದ್ದೆಯಲ್ಲಿ ಮುಂದುವರಿಸಿದ್ದಾರೆ. ಬೆಂಗಳೂರು ಗ್ರಾಮಾಂತರದ ಎಸ್ಪಿ ಶ್ರೀನಿವಾಸ್ ಡೇಳಿಕೇಳಿ ಕೃಷ್ಣಪ್ಪನವರ ರಬ್ಬರ್‌ಸ್ಟ್ಯಾಂಪ್.

ಇನ್ನೂ ದುರಂತವೆಂದರೆ ನೆಲಮಂಗಲದ ಜೋಡಿಕೊಲೆಯ ಇನ್ನಿಬ್ಬರು ಪ್ರಮುಖ ಆರೋಪಿಗಳಾದ ಕಡಬಗೆರೆಯ ಪಾಯ್ಸನ್ ರಾಮ ಮತ್ತು ಚಿಕ್ಕಗೊಲ್ಲರಹಟ್ಟಿಯ ವೈನ್ಸ್ ಲೋಕಿಯನ್ನು ಈತನಕ ಪೊಲೀಸರು ಮುಟ್ಟಿಲ್ಲ. ಇವರಿಬ್ಬರು ಮಚ್ಚನ ಕೊಲೆಯ ಪ್ರಮುಖ ಆರೋಪಿಗಳು. ಮತ್ತು ಕಾಮಾಕ್ಷಿಪಾಳ್ಯದ ಮಾಜಿ ಕಾರ್ಪೊರೇಟರ್ ಗೋಪಾಲಯ್ಯನ ಸಹಚರರು.

ನೆಲಮಂಗಲದ ಜೋಡಿ ಕೊಲೆಯನ್ನು ಕೇವಲ ಚೆತ್ತನಗೆರೆ ಸೀನನ ಗ್ಯಾಂಗ್ ಮಾತ್ರವೇ ಎಸಗಿದೆಯೆಂದು ಭಾವಿಸಿದ್ದ ಪೊಲೀಸರಿಗೆ ಅದರಲ್ಲಿ ಕಾಮಾಕ್ಷಿಪಾಳ್ಯದ ಗೋಪಾಲಯ್ಯನ ಕೈವಾಡವಿದೆಯೆಂದು ಗೊತ್ತಾಗಿದ್ದು 2006 ರ ಜುಲೈ ತಿಂಗಳಲ್ಲಿ. ಹತ್ಯೆಗೆ ಬಳಸಿದ ಟಾಟಾ ಸುಮೋದ ಡ್ರೈವರ್‌ನನ್ನು ದೊಡ್ಡಬಳ್ಳಾಪುರದ ಪೊಲೀಸರು ಬಂಧಿಸಿದಾಗ ಆತ ಬಾಯಿಬಿಟ್ಟ ಹೆಸರುಗಳೇ ಪಾಯ್ಸನ್ ರಾಮ ಮತ್ತು ವೈನ್ಸ್ ಲೋಕಿ!

ಅಲ್ಲಿಗೆ ಕಾಮಾಕ್ಷಿಪಾಳ್ಯದ ಮತ್ತೊಬ್ಬ ರೌಡಿ ಮಚ್ಚ ಉರ್ಫ್ ಮಂಜನ ಕೊಲೆಗೂ ನೆಲಮಂಗಲದ ಜೋಡಿ ಕೊಲೆಗೂ ಒಂದೇ ಗ್ಯಾಂಗ್ ಕಾರಣವೆಂಬ ಸಂಗತಿ ಬಯಲಾಗಿತ್ತು.



ಅಡಿಷನಲ್ ಎಸ್ಪಿ ಎಲ್.ಜಿ.ಕೃಷ್ಣಪ್ಪ

ಜೆಡಿಎಸ್-ರಕ್ತ ರಾಜಕೀಯ

ಮಚ್ಚ ಕೊಲೆಯಾದದ್ದು 2005 ರ ನವೆಂಬರ್ ಒಂದನೇ ತಾರೀಖಿನಂದು. ಯಲಹಂಕದ ಜಡ್ಜಸ್ ಕಾಲೋನಿಯಲ್ಲಿ ಸರಿಸುಮಾರು ಎಂಭತ್ತು ಮಂದಿಯಿದ್ದ ಹಂತಕರ ಪಡೆ ಆತನ ಕಾರಿಗೆ ಡಿಕ್ಕಿ ಕೊಟ್ಟು ಖಾರದ ಪುಡಿ ಎರಚಿ ಕೊಂದಿತ್ತು. ಮಚ್ಚನ ಜೊತೆಗಿದ್ದ ಕೋತಿರಾಮನೂ ಗಾಯಗೊಂಡಿದ್ದ. ಮಚ್ಚನ ಪತ್ನಿ ಯಲಹಂಕದ ಪೊಲೀಸರಿಗೆ ಕೊಟ್ಟ ದೂರಿನಲ್ಲಿ ಮೊದಲಿಗಿದ್ದ ಹೆಸರೇ ಕಾಮಾಕ್ಷಿಪಾಳ್ಯದ ಮಾಜಿ ಕೌನ್ಸಿಲರ್ ಗೋಪಾಲಯ್ಯ. ಎರಡನೇ ಹೆಸರು ಡಾಬಾ ಸೀನ ಉರ್ಫ್ ಜೇಕೆ ಶ್ರೀನಿವಾಸ್ ಎಂಬಾತನದು. ಈತ ಕಡಬಗೆರೆಯ ಪಾಯ್ಸನ್ ರಾಮನ ಅಣ್ಣ, ಮಾಗಡಿ ಶಾಸಕ ಬಾಲಕೃಷ್ಣ ಸಾರಿಗೆ ಮಂತ್ರಿ ಚಲುವರಾಯಸ್ವಾಮಿಗೆ ಸಕಲ ಸರಬರಾಜುದಾರ. ಸಾಲದ್ದಕ್ಕೆ ಮುಖ್ಯಮಂತ್ರಿ ಕುಮಾರಸ್ವಾಮಿಗೂ ಗಳಸ್ಯ ಕಂಠಸ್ಯ.

ಆದರೆ ಯಲಹಂಕ ಪೊಲೀಸರು ಜೇಕೆ ಸೀನ ಉರ್ಫ್ ಡಾಬಾ ಸೀನನ ಬದಲಿಗೆ ಇದ್ಯಾವುದಕ್ಕೂ ಸಂಬಂಧವೇ ಇಲ್ಲದ ಜೇಕೆ ಆಲಿಯಾಸ್ ಜೇಡರಹಳ್ಳಿ ಕೃಷ್ಣಪ್ಪನ ಹೆಸರನ್ನು ಎಫ್‌ಐಆರ್‌ನಲ್ಲಿ ದಾಖಲಿಸಿದ್ದರು! ಮೊದಲನೇ ಆರೋಪಿಯನ್ನಾಗಿಸಬೇಕಿದ್ದ ಗೋಪಾಲಯ್ಯನನ್ನು ಹದಿನಾಲ್ಕನೇ ಆರೋಪಿಯನ್ನಾಗಿ ಆರೋಪ ಪಟ್ಟಿಯಲ್ಲಿ ಸೇರಿಸಿದ್ದರು. ಮಚ್ಚನ ಕೊಲೆ ಆರೋಪಿಗಳಿಗಾಗಿ ಪೊಲೀಸರು ಬೆಂಗಳೂರಿನಲ್ಲಿ ತಡಕಾಡುತ್ತಿರುವಾಗಲೇ 'ಪ್ರಜಾವಾಣಿ'ಯಲ್ಲಿ ಫೋಟೋ ಒಂದು ಅಚ್ಚಾಗಿತ್ತು. ಅದರಲ್ಲಿ ಗೋವಾದ ರೆಸಾರ್ಟ್ ಒಂದರಲ್ಲಿ ಜೆಡಿಎಸ್ ಶಾಸಕರನ್ನು ಕಲೆ ಹಾಕಿಕೊಂಡಿದ್ದ ಮುಖ್ಯಮಂತ್ರಿ ಕುಮಾರಸ್ವಾಮಿಯ ಅಜೂಬಾಜುವಿಗೆ ಗೋಪಾಲಯ್ಯ ಮತ್ತು ಜೇಕೆ ಸೀನ ನಿಂತು ಪೋಜು ಕೊಡುತ್ತಿದ್ದರು!



ಪಾಯ್ಸನ್ ರಾಮ


ಅಲ್ಲಿಗೆ ಮಚ್ಚನ ಹಂತಕರೆಲ್ಲ ಮುಖ್ಯಮಂತ್ರಿ ಕುಮಾರಸ್ವಾಮಿಯ ಜೊತೆಗೇ ಗೋವಾದಲ್ಲಿದ್ದಾರೆಂಬುದು ಪೊಲೀಸರಿಗೆ ಮನದಟ್ಟಾಗಿ ಹೋಗಿತ್ತು. ಕುಮಾರಸ್ವಾಮಿ ತನ್ನ ಬಹು ಮತ ಸಾಬೀತುಪಡಿಸಿ ಚೆನ್ನಿಗಪ್ಪ ಮತ್ತು ಚಲುವರಾಯಸ್ವಾಮಿ ಮಂತ್ರಿಗಳಾದ ಮೇಲಂತೂ ಕಾಮಾಕ್ಷಿಪಾಳ್ಯದಿಂದ ಹಿಡಿದು ನೆಲಮಂಗಲದ ತನಕ ಈ ಹಂತಕ ಕೂಟದ್ದೇ ದರಬಾರಾಯಿತು. ಇದಾಗಿ ಆರೇ ತಿಂಗಳಿಗೆ ಮಚ್ಚನನ್ನು ಕೊಂದ ತಂಡವೇ ನೆಲಮಂಗಲದಲ್ಲಿ ಜೋಡಿ ಕೊಲೆ ಮಾಡಿತ್ತು. ಇದು ಜೆಡಿಎಸ್ ಹಂತಕ ಪಡೆಯೆಂಬುದರಲ್ಲಿ ಯಾವುದೇ ಸಂದೇಹ ಉಳಿದಿಲ್ಲ. ಮಚ್ಚನನ್ನು ಮುಗಿಸಿದ [illegible]



[illegible]

ಗೋಪಾಲಯ್ಯ ಜೆಡಿಎಸ್‌ನ ರಾಜ್ಯ ಕಾರ್ಯದರ್ಶಿ. ಆತನ ಸಹಚರ ಜೇಕೆ ಸೀನ ಮಾಗಡಿ ಶಾಸಕ ಬಾಲಕೃಷ್ಣ ಮಂತ್ರಿ ಚೆನ್ನಿಗಪ್ಪ ಮತ್ತು ಚಲುವರಾಯಸ್ವಾಮಿಗೆ ಸಕಲ ಸರಬರಾಜುದಾರ. ಇವನ ತಮ್ಮ ಕಡಬಗೆರೆಯ ಪಾಯ್ಸನ್ ರಾಮ ಜೆಡಿಎಸ್‌ನ ಗ್ರಾಮ ಪಂಚಾಯ್ತಿ ಸದಸ್ಯ. ಜೋಡಿ ಕೊಲೆಯ ಮೊದಲ ಆರೋಪಿ ಚೆತ್ತನಗೆರೆ ಸೀನನೂ ಇದೇ ಜೆಡಿಎಸ್‌ನ ಪಂಚಾಯ್ತಿ ಸದಸ್ಯ. ಒಂದೇ ವರ್ಷದಲ್ಲಿ ತಮ್ಮ ನಾಲ್ವರು ವಿರೋಧಿಗಳನ್ನು ವಿವಿಧ ಮೂರು ಪ್ರಕರಣಗಳಲ್ಲಿ ಕೊಂದು ಹಾಕಿತ್ತು ಗೋಪಾಲಯ್ಯನ ಗ್ಯಾಂಗ್.

ಆದರೆ ಪೊಲೀಸರು ಬೆನ್ನುಬಿದ್ದದ್ದು ಈ ಹಂತಕರ ವಿರುದ್ಧವಲ್ಲ! ಬದಲಿಗೆ ಇವರನ್ನು ವಿರೋಧಿಸುತ್ತಿದ್ದ ಕಾರಣಕ್ಕೇ ಕಾಂಗ್ರೆಸ್ ನೆರಳಿನಲ್ಲಿದ್ದವರನ್ನು. ಈ ಪೈಕಿ ಅತ್ಯಂತ ಧಾರುಣ ಪೊಲೀಸ್ ದೌರ್ಜನ್ಯಕ್ಕೀಡಾದವರು ಹತ ಮಚ್ಚನ ಬೆಂಬಲಿ



ಕಲಗಚ್ಚು ಸೀನ

ಗರು. ಮಚ್ಚನ ಜೊತೆ ಯಾವತ್ತೋ ಮಾತಾಡಿದನೆಂದೋ, ಆತ ಬದುಕಿದ್ದಾಗ ಪರಿಚಯವಿದ್ದ ಕಾರಣಕ್ಕೋ ಕಾಮಾಕ್ಷಿಪಾಳ್ಯದ ಗೋಲಿ ಆಡುವ ಹುಡುಗನನ್ನೂ ಬಿಡದೇ ಪೊಲೀಸರು ಸುಳ್ಳು ಕೇಸಲ್ಲಿ ಜೈಲಿಗೆ ಹಾಕಿದ್ದಾರೆ. ಈ ಪೈಕಿ ಹೇರೋಹಳ್ಳಿಯ ಜಿಲ್ಲಾ ಪಂಚಾಯ್ತಿ ಸದಸ್ಯ ಗೊಲ್ಲರಹಟ್ಟಿ ರಾಜಣ್ಣನವರನ್ನು ಕಡಬಗೆರೆ ರಾಮನನ್ನು ವಿರೋಧಿಸಿದ ಎಂಬ ಒಂದೇ ಕಾರಣಕ್ಕೆ ಮಂಡ್ಯ ಕೃಷ್ಣನ ಕೊಲೆ ಕೇಸಿಗೆ ಸಿಲುಕಿಸಿ ಜೈಲಿಗೆ ಹಾಕಲಾಗಿದೆ. ಇರಲಿ; ಆದರೆ ನೆಲಮಂಗಲದ ಜೋಡಿ ಕೊಲೆಯಲ್ಲಿ ಇವತ್ತಿಗೂ ಆರೋಪಿಗಳಾಗಿರುವ ಮಚ್ಚನ ಹಂತಕರಾದ ಕಡಬಗೆರೆ ರಾಮ ಮತ್ತು ವೈನ್ಸ್ ಲೋಕಿಯನ್ನು ಪೊಲೀಸರು ಏಕೆ ಬಂಧಿಸುತ್ತಿಲ್ಲ? ಜೋಡಿ ಕೊಲೆಯ ಆರೋಪ ಪಟ್ಟಿಯಲ್ಲಿದ್ದ ಐವರು ಜೆಡಿಎಸ್ ಕಾರ್ಯಕರ್ತರ ಹೆಸರನ್ನು ಕೈಬಿಟ್ಟಿದ್ದಾದರೂ ಏಕೆ?

ಈ ಬಗ್ಗೆ [illegible] ಪಕ್ಷದ ನಾಯಕರಾದ ಎಚ್. [illegible] ಇಂಥ ಸರ್ಕಾರದ ಪಾಪ [illegible]


[illegible] ಉದಾಹರಣೆ ಬೇಕೆ?

ಗೋಪಾಲಯ್ಯನ ರಕ್ಕಸಕೂಟಕ್ಕೆ ಸುಗ್ಗಿಯೋ ಸುಗ್ಗಿ

ಇಲ್ಲಿಗೆ ಎರಡು ತಿಂಗಳ ಹಿಂದೆ ಕಲಗಚ್ಚು ಸೀನ ಎಂಬ ರೌಡಿಯನ್ನು ಕುಣಿಗಲ್ ಇನ್ಸ್‌ಪೆಕ್ಟರ್ ಬಲರಾಮೇಗೌಡರು ಕುಣಿಗಲ್ಲಲ್ಲೇ ಬಂಧಿಸಿ ಜೈಲಿಗೆ ಹಾಕುತ್ತಾರೆ. ಕಲಗಚ್ಚು ಸೀನ ಕಾಮಾಕ್ಷಿಪಾಳ್ಯದ ಗೋಪಾಲಯ್ಯನ ಹತ್ಯೆಗೆ ಹೊಂಚು ಹಾಕುತ್ತಿದ್ದಾಗಲೇ ಆತನನ್ನು ಹಿಡಿಯಲಾಯ್ತು ಎಂದು ಪತ್ರಿಕಾ ಹೇಳಿಕೆಯನ್ನೂ ಕೊಡುತ್ತಾರೆ. ಆದರೆ ಸತ್ಯ ಸಂಗತಿಯೇ ಬೇರೆ.

ಈ ಕಲಗಚ್ಚು ಸೀನ ಯಾವುದೋ ಕಾಲಕ್ಕೆ ಮಚ್ಚನ ಜೊತೆಗಿದ್ದವನು. ಎಲ್ಲಿ ಗೋಪಾಲಯ್ಯನ ಗ್ಯಾಂಗ್ ತನ್ನನ್ನು ಮುಗಿಸುತ್ತೋ ಎಂದು ಕುಣಿಗಲ್ ಸಮೀಪದ ಹಳ್ಳಿಯ ತನ್ನ ಅಜ್ಜಿಯ ಊರಿಗೆ ಬಂದಿದ್ದ. ರಕ್ಷಣೆಗೆಂದು ಒಂದಿಷ್ಟು ಹುಡುಗರನ್ನು ಕಟ್ಟಿಕೊಂಡಿದ್ದ. ಗೋಪಾಲಯ್ಯ ಕುಣಿಗಲ್ ಇನ್ಸ್‌ಪೆಕ್ಟರ್ ಬಲರಾಮೇಗೌಡರನ್ನು ಬುಟ್ಟಿಗೆ ಹಾಕಿಕೊಂಡು ತುಮಕೂರು ಎಸ್ಪಿ ಹರೀಶ್ ಶೇಖರ್‌ಗೆ ಚೆನ್ನಿಗಪ್ಪನವರ ಮೂಲಕ ಹೇಳಿಸಿ ಸೀನನನ್ನು ಜೈಲಿಗೆ ಹೋಗುವಂತೆ ನೋಡಿಕೊಂಡ.

ಇದಕ್ಕೂ ಮುನ್ನ ಮಚ್ಚನ ಹತ್ಯೆಗೆ ಪ್ರತೀಕಾರವಾಗಿ ಕೊರಂಗು ಗ್ಯಾಂಗ್ ಮಂಡ್ಯ ಕೃಷ್ಣನನ್ನು ಕೊಂದಿತ್ತು. ಮಂಡ್ಯದ ಕೊಲೆಯಲ್ಲಿ ಗೋಪಾಲಯ್ಯನ ಹೆಸರನ್ನು ಹದಿನಾಲ್ಕನೇ ಆರೋಪಿಯನ್ನಾಗಿ ಮಾಡಿದ ಪೊಲೀಸರು, ಮಂಡ್ಯ ಕೃಷ್ಣನ ಕೊಲೆಯಲ್ಲಿ ಎಂಥಾ ದಕ್ಷತೆ ಮೆರೆಯುತ್ತಾರೆಂದರೆ; ಆ ಕಾಲದಿಂದಲೂ ಕಡಬಗೆರೆ ರಾಮನನ್ನು ವಿರೋಧಿಸಿಕೊಂಡೇ ಬಂದಿದ್ದ ಹೇರೋಹಳ್ಳಿಯ ಜಿಲ್ಲಾ ಪಂಚಾಯ್ತಿ ಸದಸ್ಯ ಗೊಲ್ಲರಹಟ್ಟಿ ರಾಜಣ್ಣನನ್ನು ಅನ್ಯಾಯವಾಗಿ ಮಂಡ್ಯ ಕೃಷ್ಣನ ಕೊಲೆ ಕೇಸಿಗೆ ಸೇರಿಸುತ್ತಾರೆ. ಮಂಡ್ಯ ಕೃಷ್ಣನ ಕೊಲೆಯಾದಾಗ ರಾಜಣ್ಣ ತನ್ನ ಕಾಂಗ್ರೆಸ್ ಸೇರ್ಪಡೆ ಕಾರ್ಯಕ್ರಮದ ವೇದಿಕೆಯಲ್ಲಿ ಉಪಸ್ಥಿತನಿದ್ದ!



ಗೋಪಾಲಯ್ಯ

ಮಂಡ್ಯ ಕೃಷ್ಣ ಕೊಲೆಯಾಗಿದ್ದು ಮಚ್ಚನ ಹತ್ಯೆಯಾದ ಐದನೇ ದಿನಕ್ಕೆ. ಆಗಿನ್ನು ಮಚ್ಚನೇಟು ತಿಂದು ಕೋತಿರಾಮು ಆಸ್ಪತ್ರೆಯಲ್ಲಿ ಮಲಗೇ ಇದ್ದ. ಹಾಗಿದ್ದೂ ಮಂಡ್ಯ ಕೃಷ್ಣನ ಕೊಲೆ ಕೇಸಿನಲ್ಲಿ ಕೋತಿರಾಮನ ಹೆಸರನ್ನು ಗೋಪಾಲಯ್ಯನೇ ನಿಂತು ಸೇರಿಸಿದ್ದ. ಅಲ್ಲಿಯ ತನಕ ವಿಜಯನಗರಕ್ಕೆ ಎಸಿಪಿಯಾಗಿದ್ದ ಭಂಡಾರಿ ಗೋಪಾಲಯ್ಯನಿಗೆ ಮಣೆ ಹಾಕುತ್ತಿರಲಿಲ್ಲ. ಕಾಮಾಕ್ಷಿಪಾಳ್ಯದ ಇನ್ಸ್‌ಪೆಕ್ಟರ್ ರವಿಪ್ರಕಾಶ್ ಕೂಡ ತೀರ ಅನ್ಯಾಯ ಕ್ಕಿಳಿದವರಲ್ಲ.


ಬಿಜೆಪಿ-ಜೆಡಿಎಸ್ ಸರ್ಕಾರ ರಚನೆಯಾಗುತ್ತಿದ್ದಂತೆಯೇ ವಿಜಯನಗರ ಎಸಿಪಿಯಾಗಿ ತನ್ನ ಪರಮಾಪ್ತ ಕುಮಾರಸ್ವಾಮಿಯನ್ನೇ ಗೋಪಾಲಯ್ಯ ಹಾಕಿಸಿಕೊಂಡ. ಕಾಮಾಕ್ಷಿಪಾಳ್ಯಕ್ಕೆ ಇನ್ಸ್‌ಪೆಕ್ಟರ್ ಆಗಿದ್ದ ರವಿಪ್ರಕಾಶ್‌ನನ್ನು ಮೂರೇ ತಿಂಗಳಿಗೆ ಎತ್ತಂಗಡಿ ಮಾಡಿ ಅಲ್ಲಿಗೆ ಮಂಜುನಾಥರನ್ನು ತಂದಿದ್ದೂ ಗೋಪಾಲಯ್ಯನೇ. ಒಬ್ಬ ಕೊಲೆಗಡುಕ ತನಗೆ ಬೇಕಾದ ಪೊಲೀಸ್ ಅಧಿಕಾರಿಗಳನ್ನು ಮುಖ್ಯಮಂತ್ರಿಯ ಮೂಲಕ ತನಗೆ ಬೇಕಾದಲ್ಲಿಗೆ ಹಾಕಿಸಿಕೊಳ್ಳುತ್ತಾನೆಂದರೆ ಅಲ್ಲಿನ್ನು ನ್ಯಾಯ ಉಳಿದೀತಾ?


ಭಂಡಾರಿಯ ಜಾಗಕ್ಕೆ ಎಸಿಪಿಯಾಗಿ ಬಂದಿದ್ದೇ ಕುಮಾರಸ್ವಾಮಿ ಮಾಡಿದ ಮೊದಲ ಕೆಲಸವೆಂದರೆ ಈಗಾಗಲೇ ಮಂಡ್ಯ ಕೃಷ್ಣನ ಕೊಲೆಯ ಸುಳ್ಳು ಆರೋಪ ಹೊತ್ತು ಜೈಲು ಪಾಲಾಗಿದ್ದ ಜಿಲ್ಲಾ ಪಂಚಾಯ್ತಿ ಸದಸ್ಯ ಗೊಲ್ಲರಹಟ್ಟಿ ರಾಜಣ್ಣನನ್ನು ಇಸ್ಪೀಲ್ಯೋ ಬೋಟ್ಕ್ಯೋ ಕದ್ದರೆಂಬ ಮತ್ತೊಂದು ಬೊಟ್ಟ ಆರೋಪದ ಮೇಲೆ ಜೈಲಿನಿಂದ ಪೊಲೀಸ್ ಕಸ್ಟಡಿಗೆ ಪಡೆದದ್ದು. ಕಾಮಾಕ್ಷಿಪಾಳ್ಯದಲ್ಲಿ ಕೇಬಲ್ ನಡೆಸಿಕೊಂಡಿದ್ದ ಮಚ್ಚನ ಸ್ನೇಹಿತರಾದ ಯದುಗಿರಿ-ಬಲರಾಮರನ್ನು ಸುಳ್ಳು ಕೇಸಿಗೆ ಸಿಲುಕಿಸಿ; ಈ ಮೂವರನ್ನೂ ಗೋಪಾಲಯ್ಯನ ಮನೆ ಮುಂದೆಯೇ ಅರೆಬೆತ್ತಲೆ ಮೆರವಣಿಗೆ ಮಾಡಿದ್ದು.

ಅಲ್ಲಿಗೆ ಇಡೀ ಗೋಪಾಲಯ್ಯನ ವಿರೋಧಿಗಳೆಲ್ಲ ಕಾಮಾಕ್ಷಿಪಾಳ್ಯದಿಂದ ಕಂಬಿಕಿತ್ತರು. ಕಾಮಾಕ್ಷಿಪಾಳ್ಯದ ಜಾನಿಯನ್ನು ಮಂಡ್ಯ ಕೃಷ್ಣನ ಕೊಲೆ ಕೇಸಿನಲ್ಲಿ ಸುಳ್ಳು ಸುಳ್ಳೇ ಜೈಲಿಗೆ ಹಾಕಲಾಯ್ತು. ತೀರ ಇತ್ತೀಚೆಗೆ ಟೋನಿ-ಸೂರಿ ಕೊಲೆ ಕೇಸಿನಲ್ಲಿ ಅಳಿದುಳಿದ ಮಚ್ಚನ ಶಿಷ್ಯರನ್ನೆಲ್ಲ ಗೋಪಾಲಯ್ಯ ಖೊಟ್ಟಿ ಕೇಸಿನಲ್ಲಿ ಜೈಲಿಗೆ ಹಾಕಿಸಿದ್ದಾನೆ. ಈ ಪೈಕಿ ಸಣ್ಣಕ್ಕಿ ಬಯಲಿನ ಚಲ ಎಂಬ ಪಿಯುಸಿ ಓದುತ್ತಿದ್ದ ಹುಡುಗ ಮಾಡಿದ ತಪ್ಪೆಂದರೆ ಆತ ಅದ್ಯಾವತ್ತೋ ಜಾನಿಯ ಜೊತೆ ರಸ್ತೆಯಲ್ಲಿ ನಿಂತು ಮಾತಾಡಿದ್ದು. ಸುಂಕದ ಕಟ್ಟೆಯ ಲಕ್ಷ್ಮೀಶ ಎಂಬ ಮತ್ತೊಬ್ಬ ಹುಡುಗ ವೈನ್ಸ್ ಲೋಕಿಯ ವಿರುದ್ಧ ಕನ್ನಡ ರಾಜ್ಯೋತ್ಸವ ಮಾಡಿದ ಎಂಬ ಒಂದೇ ತಪ್ಪಿಗೆ ಟೋನಿ-ಸೂರಿ ಕೊಲೆ ಆರೋಪ ಹೊತ್ತು ಜೈಲು ಪಾಲಾಗಿದ್ದಾನೆ. ಹೀಗೆ ಸಂಬಂಧವೇ ಇಲ್ಲದೇ ಯಾರ್ಯಾರನ್ನೋ ಪೊಲೀಸರು ಕೊಲೆ ಕೇಸಿಗೆ ಸಿಲುಕಿಸಿ ಜೈಲಿಗೆ ದಬ್ಬುತ್ತಿದ್ದಾರೆ. ಆದರೆ ಒಂದಲ್ಲ ಎರಡು ಹತ್ಯೆ ಮಾಡಿಯೂ ಪಾಯ್ಸನ್ ರಾಮ, ವೈನ್ಸ್ ಲೋಕಿಯನ್ನು ಬಂಧಿಸುತ್ತಿಲ್ಲ ಎಂದರೆ ಏನರ್ಥ?

ಇಲ್ಲಿಗೆ ವಾರದ ಹಿಂದಷ್ಟೇ ಜೈಲಿಂದ ಹೊರಬಿದ್ದ ಗೋಪಾಲಯ್ಯನ ತಮ್ಮ ಬಸವ, ಮುಲಾಮನ ಬಂಟರಾದ ರಾಮ-ಲಕ್ಷ್ಮಣ, ಮಚ್ಚನ ಹಂತಕ ಧರಣಿ, ಪಾಯ್ಸನ್ ರಾಮ ಎಲ್ಲರೂ ಸೇರಿ ಮೂವತ್ತು ಕಾರುಗಳಲ್ಲಿ ಕಾಮಾಕ್ಷಿಪಾಳ್ಯದ ನಡುರಸ್ತೆಯಲ್ಲಿ ಪಟಾಕಿ ಸಿಡಿಸಿ ಮೆರವಣಿಗೆ ಮಾಡುತ್ತಿದ್ದರೆ, ಕಾಮಾಕ್ಷಿಪಾಳ್ಯ ಪೊಲೀಸರು ಅವರ ರಕ್ಷಣೆಗೆ ನಿಲ್ಲುತ್ತಾರೆ.

ಗೋಪಾಲಯ್ಯನ ಹಂತಕ ಪಡೆಗೆ ಸದ್ಯಕ್ಕಂತೂ ಸುಗ್ಗಿ!







ಮಂಗಳೂರು: 'ಹಿಂಸೆಗೆ ತುತ್ತಾದವರೇ ಅಪರಾಧಿಗಳು'

ರಾಜ್ಯ ಗೃಹಮಂತ್ರಿ ಎಂ.ಪಿ. ಪ್ರಕಾಶ್ ಮಂಗಳೂರಿನ ಹಿಂಸಾಚಾರಕ್ಕೆ ಶ್ರೀರಾಮ ಸೇನೆ ಹಾಗೂ ಭಜರಂಗದಳದ ಜೊತೆಗೆ SIMI ಮತ್ತು ಇತರ ಮುಸ್ಲಿಮ್ ಮೂಲಭೂತವಾದಿ ಸಂಘಟನೆಗಳು ಹೊಣೆ ಎಂದು ಹೇಳಿದ್ದಾರೆ. ಗೃಹಮಂತ್ರಿಗಳು ಹಿಂದೂ ಮತ್ತು ಮುಸ್ಲಿಮ್ ಮೂಲಭೂತವಾದಿ ಸಂಘಟನೆಗಳ ಕುರಿತು ರಾಜ್ಯದಲ್ಲಿ ಅವೆರಡರ ಬಲಾಬಲವನ್ನಾಗಲಿ, ಅವುಗಳ ಚರಿತ್ರೆಯನ್ನಾಗಲಿ ಚೂರೂ ಗಣನೆಗೆ ತೆಗೆದುಕೊಳ್ಳದೆ, ಸಾರಾಸಗಟಾಗಿ ತೀರ್ಮಾನ ಹೇಳಿರುವ ಅವಕಾಶವಾದಿ ರಾಜಕಾರಣವನ್ನು ಅರ್ಥ ಮಾಡಿಕೊಳ್ಳುವುದು ಸುಲಭ. ನರೇಂದ್ರ ಮೋದಿ ತಮ್ಮ ಆದರ್ಶ ನಾಯಕ ಎಂದು ಸಾರಿಕೊಳ್ಳುವವರ ಜೊತೆ ಅಧಿಕಾರ ಹಂಚಿಕೊಂಡ ಮೇಲೆ ಇಂತಹ ಸರ್ಕಸ್ಸುಗಳನ್ನು ಮಾಡಲೇಬೇಕು. ಆಶ್ಚರ್ಯದ ಸುದ್ದಿ ಎಂದರೆ ಕರ್ನಾಟಕದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಸಹ ಗೃಹ ಸಚಿವರ ಜೊತೆ ದನಿಗೂಡಿಸಿ ಹಿಂದೂತ್ವದ ಸಂಘಟನೆಗಳ ಜೊತೆ ಕೆಎಫ್‌ಡಿ (ಕರ್ನಾಟಕ ಫೋರಂ ಫಾರ್ ಡಿಗ್ನಿಟಿ) ಎಂಬ ಮುಸ್ಲಿಮ್ ಸಂಘಟನೆಯನ್ನೂ ಹಿಂಸಾಚಾರಕ್ಕೆ ಹೊಣೆಗಾರರೆಂದು ಹೆಸರಿಸಿದೆ.

ಸಿಪಿಎಂ ಯಾರನ್ನು ಮೆಚ್ಚಿಸಲು ಈ ಆರೋಪ ಹೊರಿಸುತ್ತಿದೆ? ಮಂಗಳೂರು ಗಲಭೆಗೆ SIMI ಕೂಡ ಹೊಣೆ ಎಂಬ ತಮ್ಮ ಹೇಳಿಕೆಗೆ ಗೃಹ ಸಚಿವರು ಯಾವ ಸಾಕ್ಷ್ಯಾಧಾರವನ್ನೂ ಕೊಟ್ಟಿಲ್ಲ. SIMI ಒಂದು ನಿಷೇಧಿತ ಸಂಘಟನೆಯಾಗಿದ್ದು, ಆ ಸಂಘಟನೆಗೆ ಸೇರಿದವರು ಸಾರ್ವಜನಿಕರ ಎದುರು ಕಾಣಿಸಿಕೊಳ್ಳುವುದಿಲ್ಲ. ಮಂಗಳೂರಿನ ಘಟನೆಗಳಲ್ಲಿ SIMI ಯ ಕೈವಾಡ ಇರುವುದೇ ಹೌದಾದಲ್ಲಿ ಆ ಮಾಹಿತಿ ಸರ್ಕಾರಕ್ಕೆ ಮಾತ್ರ ಲಭ್ಯವಿರುವಂತಹದ್ದು. ರಾಜ್ಯದ ಗೃಹಮಂತ್ರಿಯೇ ಈ ಮಾಹಿತಿ ಏನು ಎಂದು ಬಹಿರಂಗ ಪಡಿಸದೆ, ಊಹಾಪೋಹಗಳನ್ನು ತೇಲಿ ಬಿಟ್ಟರೆ ಮಾಧ್ಯಮಗಳೂ ಇದೇ ಮಾದರಿಯಲ್ಲಿ ಕಣ್ಣೆದುರಿಗೆ ಕಾಣುವ ಹಿಂಸಾವಾದಿ ಸಂಘಟನೆಗಳನ್ನು ಮರೆಮಾಚಿ ಕಾಣದ ಶಕ್ತಿಗಳು-ಅವು ಯಾವಾಗಲೂ ಇಸ್ಲಾಮಿಕ್ ಸಂಘಟನೆಗಳೇ-ಹಿಂಸಾಕೃತ್ಯಗಳ ಹಿಂದೆ ಇವೆ ಎಂಬ ಪ್ರಚಾರದಲ್ಲಿ ತೊಡಗುತ್ತವೆ.


ಕಾಣದ ಶಕ್ತಿಗಳು ಎಂದ ಮೇಲೆ ಅವಕ್ಕೆ ಸಾಕ್ಷ್ಯಾಧಾರಗಳನ್ನು ಒದಗಿಸಬೇಕಾದ್ದೂ ಇಲ್ಲ. ಈ ತಂತ್ರವನ್ನು ಅನುಸರಿಸಿ, ಕನ್ನಡದ ಪತ್ರಿಕೆಗಳು ಈಗಾಗಲೇ ಇಡೀ ಮುಸ್ಲಿಮ್ ಸಮುದಾಯ ಭಯೋತ್ಪಾದನೆಯಲ್ಲಿ ಶಾಮೀಲಾಗಿದೆ ಎಂಬ ಅಭಿಪ್ರಾಯವನ್ನು ಜನರ ಮನಸ್ಸಿನಲ್ಲಿ ನೆಟ್ಟಿವೆ. ಈಗ ಈ ಸಮುದಾಯವನ್ನು ಟಾರ್ಗೆಟ್ ಮಾಡುವ ಸರದಿ ರಾಜ್ಯ ಗೃಹ ಸಚಿವರದ್ದು.


ಗೃಹ ಸಚಿವರು ತಮ್ಮ ಹೇಳಿಕೆಯಲ್ಲಿ ಹೆಸರಿಸಿದ ಹಿಂದೂತ್ವದ ಸಂಘಟನೆಗಳಾದ ಶ್ರೀರಾಮ ಸೇನೆ ಮತ್ತು ಭಜರಂಗದಳ, SIMI ಯ ಹಾಗೆ ರಹಸ್ಯ ಸಂಘಟನೆಗಳಲ್ಲ. ಅವು ಕಳೆದ ಹಲವು ವರ್ಷಗಳಿಂದ ಕರಾವಳಿಯಲ್ಲಿ ಮುಸ್ಲಿಮರು ಹಾಗೂ ಕ್ರೈಸ್ತರ ವಿರುದ್ಧ ದೈಹಿಕ ಹಲ್ಲೆ, ಲೂಟಿ, ದಾಳಿ, ಮಿಥ್ಯಾರೋಪ, ಅಪಪ್ರಚಾರ ಮುಂತಾದವನ್ನು ನಡೆಸುತ್ತಲೇ ಇವೆ; ಇವೆಲ್ಲವೂ ಸಾರ್ವಜನಿಕರ ಕಣ್ಣೆದುರೇ ನಡೆಯುತ್ತಿರುವ ಘಟನೆಗಳು. ಮಂಗಳೂರಿನ ಹಿಂಸೆಗೆ ಕಾರಣವಾದ ದ.ಕ.ಜಿಲ್ಲಾಬಂದ್ ಕೂಡ ಈ ಸಂಘಟನೆಗಳ ಇಂತಹದ್ದೇ ಒಂದು ಸಾರ್ವಜನಿಕ ಕಾರ್ಯಕ್ರಮ. ಬಂದ್‌ಗೆ ಕಾರಣವಾದದ್ದು ಒಂದು ಕ್ಷುಲ್ಲಕ ಘಟನೆ- ಕುದ್ರೋಳಿ ಎಂಬಲ್ಲಿ ಜಾನುವಾರುಗಳನ್ನು ಸಾಗಿಸುತ್ತಿದ್ದ ವಾಹನವೊಂದು, ಎರಡು ವಾಹನಗಳಿಗೆ ಡಿಕ್ಕಿ ಹೊಡೆದು, ಓರ್ವ ಮಹಿಳೆಯನ್ನು ಗಾಯಗೊಳಿಸಿ ಧಾವಿಸಿತು ಎನ್ನುವುದು. ಈ ಘಟನೆಯ ಸತ್ಯಾಸತ್ಯತೆ ಏನೇ ಇರಲಿ, ಇದು ಒಂದು ಇಡೀ ಜಿಲ್ಲೆಯ ಜನಜೀವನವನ್ನು ಸ್ತಬ್ಧಗೊಳಿಸುವಷ್ಟು ದೊಡ್ಡ ಸಂಗತಿಯೇ? ಇದು ಅಪರಾಧ ಎಂದು ನಿರ್ಧರಿಸುವ ಹಕ್ಕು ಮತ್ತು ಹೊಣೆಗಾರಿಕೆ ಇರುವುದು ಯಾರಿಗೆ? ಸರ್ಕಾರಕ್ಕೋ ಶ್ರೀರಾಮ ಸೇನೆಗೋ? ರಾಜ್ಯ ಸರ್ಕಾರದ ಘಟಕವಾಗಿರುವ ಬಿಜೆಪಿ ಮತ್ತು ಶತಾಯಗತಾಯ ಈ ಸರ್ಕಾರವನ್ನು ಸಂರಕ್ಷಿಸಲೇಬೇಕು ಎಂದು ಹಠ ತೊಟ್ಟಿರುವ ಕನ್ನಡದ ಪತ್ರಿಕೆಗಳು ಈ ಅಂಶವನ್ನೇ ಉದ್ದೇಶಪೂರ್ವಕವಾಗಿ ಮರೆಮಾಚುತ್ತಿವೆ.

ಮಂಗಳೂರಿನ ಇತ್ತೀಚಿಗಿನ ಹಿಂಸಾಚಾರಕ್ಕೆ ಕುದ್ರೋಳಿಯ ಘಟನೆ ಒಂದು ನೆಪ ಮಾತ್ರ. ಕರಾವಳಿಯ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಹಿಂದೂತ್ವವಾದಿ ಸಂಘಟನೆಗಳು ಕಳೆದ 20 ವರ್ಷಗಳಿಂದ ಅಲ್ಪಸಂಖ್ಯಾತರ ಮೇಲೆ ನಡೆಸುತ್ತಿರುವ ಹಿಂಸಾ ಕೃತ್ಯಗಳ ಸರಣಿಯಲ್ಲಿ ಈ ಹಿಂಸಾಚಾರ ಇತ್ತೀಚಿಗಿನದ್ದು ಅಷ್ಟೇ. ಈ ಎಡೆಬಿಡದ ಹಿಂಸಾಚಾರಕ್ಕೆ ಕರಾವಳಿಯ ನಾಗರಿಕ ಸಮಾಜ(!)ದ ಪ್ರತಿಕ್ರಿಯೆ ಯಾವ ಬಗ್ಗೆಯದ್ದು?

ಕರಾವಳಿಯ ಆಡಳಿತ ವ್ಯವಸ್ಥೆ ಮತ್ತು ಪೊಲೀಸು ಇಲಾಖೆಗಳು ಒಂದೋ ಈ ಹಿಂಸಾಚಾರಕ್ಕೆ ಕುಮ್ಮಕ್ಕು ನೀಡಿದವು; ಇಲ್ಲವೆ ನಿಷ್ಕ್ರಿಯವಾಗಿದ್ದವು; ಕರಾವಳಿಯ ಬಿಜೆಪಿಯೇತರ ರಾಜಕೀಯ ಪಕ್ಷಗಳು ಈ ಬಗ್ಗೆ ಮೌನ ವಹಿಸಿದ್ದವು. ಕರಾವಳಿಯ ಪತ್ರಿಕೆಗಳು-ಅವುಗಳಲ್ಲಿಯೂ ಮುಖ್ಯವಾಗಿ ಉದಯವಾಣಿ ಮತ್ತು ವಿಜಯ ಕರ್ನಾಟಕ- ನಿರಂತರವಾಗಿ ಈ ಹಿಂಸೆಗೆ ಬಲಿಯಾದ ಮುಸ್ಲಿಮರನ್ನೇ ಅಪರಾಧಿಗಳು ಎಂಬಂತೆ ಚಿತ್ರಿಸಿದವು. ದೈಹಿಕ ಹಿಂಸೆ, ಮಾನಸಿಕ ಹಿಂಸೆ, ಆಸ್ತಿ-ಪಾಸ್ತಿ ನಷ್ಟ ಮತ್ತು ಅವಮಾನಗಳಿಂದ ನಲುಗಿದ ಮುಸ್ಲಿಮರ ನೋವಿಗೆ ಕರಾವಳಿಯ ನಾಗರಿಕ ಸಮಾಜ ಸ್ಪಂದಿಸಲಿಲ್ಲ ಎನ್ನುವುದು ಕಟುವಾಸ್ತವ. ಈ ಹಿನ್ನೆಲೆಯಲ್ಲಿ SIMI ಯಂತಹ ಸಂಘಟನೆ ಕರಾವಳಿಯಲ್ಲಿ ನೆಲೆ ಕಂಡುಕೊಂಡಿರುವುದೇ ಹೌದಾದಲ್ಲಿ ಅದರ ಕಾರಣ ಪರಂಪರೆಯ ಬಗ್ಗೆ ನಾವು ಪ್ರಾಮಾಣಿಕವಾಗಿ ಯೋಚಿಸಬೇಕು.

ಮಂಗಳೂರಿನ ಹಿಂಸಾಚಾರಕ್ಕೆ ಹೊಣೆಗಾರ ಎಂದು ಸಿಪಿಎಂ ಹೆಸರಿಸಿರುವ ಕೆಎಫ್‌ಡಿ, SIMI ಯ ಹಾಗೆ ರಹಸ್ಯ ಸಂಘಟನೆ ಅಲ್ಲ. ಕಳೆದ ಅನೇಕ ವರ್ಷಗಳಿಂದ ಅದು ತನ್ನ ಕಾರ್ಯಕ್ರಮಗಳನ್ನು ಸಾರ್ವಜನಿಕವಾಗಿ ನಡೆಸುತ್ತಿದೆ. ಅದು ಒಂದು ಇಸ್ಲಾಮಿಕ್ ಮೂಲಭೂತವಾದಿ ಸಂಘಟನೆ ಹೌದು. ಆದರೆ ಇತ್ತೀಚಿಗಿನ ದಿನಗಳಲ್ಲಿ ಕರಾವಳಿ ಮಾತ್ರವಲ್ಲ ಇಡೀ ರಾಜ್ಯದಲ್ಲೇ ಕೆಎಫ್‌ಡಿ ಮುಸ್ಲಿಮರ ಪ್ರತಿಭಟನೆಯ ಏಕೈಕ ಸಂಘಟನೆಯಾಗಿ ಹೊರಹೊಮ್ಮುತ್ತಿದೆ.





ಕರ್ನಾಟಕದ ಮುಸ್ಲಿಮರು ಎಂದೂ ಇಸ್ಲಾಮಿಕ್ ಮೂಲಭೂತವಾದವನ್ನು ಬೆಂಬಲಿಸಿದವರಲ್ಲ. ಅವರು ಇಲ್ಲಿನ ಪ್ರಧಾನ ರಾಜಕೀಯ ಪಕ್ಷಗಳ ಜೊತೆಗೆ (ಮುಸ್ಲಿಮ್ ಲೀಗ್ ಸಹ ಅಲ್ಲ) ತಮ್ಮನ್ನು ಗುರುತಿಸಿಕೊಂಡವರು.

ಆದರೆ ಈ ರಾಜಕೀಯ ಪಕ್ಷಗಳೇ ಅವರನ್ನು ಕೈಬಿಟ್ಟಿರುವ ಸನ್ನಿವೇಶದಲ್ಲಿ, ಮುಸ್ಲಿಮರಲ್ಲಿ ಕೆಲವರು ಈಗ ಕೆಎಫ್‌ಡಿ ಕಡೆಗೆ ಆಕರ್ಷಿತರಾಗುತ್ತಿದ್ದಾರೆ. ಸರ್ಕಾರ, ಪೊಲೀಸರು, ನ್ಯಾಯಾಲಯ, ಮಾಧ್ಯಮ ಮತ್ತು ರಾಜಕೀಯ ಪಕ್ಷಗಳು ಅಂದರೆ ಒಟ್ಟು ವ್ಯವಸ್ಥೆಯೇ ಮುಸ್ಲಿಮರನ್ನು ಅಪರಾಧಿಗಳಂತೆ ಅಥವಾ ಎರಡನೆಯ ದರ್ಜೆಯ ಪ್ರಜೆಗಳಂತೆ ಪರಿಗಣಿಸುತ್ತಿರುವಾಗ ಅವರಾದರೂ ಏನು ಮಾಡಬೇಕು? ಒಂದೋ ಅವರ ತಮಗಾಗುತ್ತಿರುವ ಅವಮಾನ ಹಿಂಸೆಗಳನ್ನು ಮೌನವಾ... ಸಹಿಸಿಕೊಳ್ಳಬೇಕು; ಅಥವಾ ತಮಗೆ ಲಭ್ಯವಿರು... ವಿಧಾನದಲ್ಲಿ ಈ ಹಿಂಸೆಯನ್ನು ಪ್ರತಿಭಟಿಸಬೇಕು.


ಇಷ್ಟು ದಿನವೂ ರಾಜ್ಯದ ಮುಸ್ಲಿಮರು ಈ... ವ್ಯವಸ್ಥೆಯ ಸೋಗಲಾಡಿತನದ ಆದರ್ಶಗಳಲ್ಲಿ ಸೆಕ್ಯುಲ... ರಿಸಂ, ಸಮಾನತೆ, ಕಾನೂನಿನ ಆಳ್ವಿಕೆ, ಇತ್ಯಾದಿ- ನಂಬಿಕೆ ಇಟ್ಟು ತಮ್ಮ ನೋವನ್ನು ನುಂಗಿಕೊಂಡಿದ್ದರು. ಈಗ... ಅವರಲ್ಲಿ ಕೆಲವರು ಕೆಎಫ್‌ಡಿಯಲ್ಲಿ ತಮ್ಮ ಪ್ರತಿಭಟನೆಗೆ... ಒಂದು ಅವಕಾಶವನ್ನು, space ಅನ್ನು, ಕಂಡುಕೊಂಡಿ... ದ್ದಾರೆ. ಕೆಎಫ್‌ಡಿ, ಕರ್ನಾಟಕದ ಮುಸ್ಲಿಮರ ಒಂದು... ಭಾಗದ ಹತಾಶ ಆಯ್ಕೆ; ಅದು ಅವರ ಪ್ರಥಮ... ಆದ್ಯತೆಯ ಆಯ್ಕೆಯೂ ಅಲ್ಲ; ಅದೇ ಅಂತಿಮ ಪ್ರ... ಅಲ್ಲ.

ಇಷ್ಟಾಗಿಯೂ ಮಂಗಳೂರು ಹಿಂಸಾಚಾರದಲ್ಲಿ... ಕೆಎಫ್‌ಡಿ ಭಾಗಿಯಾಗಿದ್ದರೆ, ಅವರಿಗೆ ಕಾನೂನು ಸಮ್ಮತ... ವಿಧಾನಗಳಲ್ಲಿ ಶಿಕ್ಷೆ ಆಗಲೇಬೇಕು. ಆದರೆ ಭಾರತದ... ಕಾನೂನು ವ್ಯವಸ್ಥೆಯೇ ದೇಶದ ಅಲ್ಪಸಂಖ್ಯಾತರು,... ಆದಿವಾಸಿಗಳು, ಕೊಳೆಗೇರಿ ನಿವಾಸಿಗಳು ಮತ್ತು ಈ... ಸಮಾಜದ ಅಂಚಿನಲ್ಲಿರುವ ಎಲ್ಲ ಜನ ವರ್ಗಗಳ... ವಿರುದ್ಧ ಆಳುವವರ ಅಸ್ತ್ರವಾಗಿ ಮಾರ್ಪಟ್ಟಿದೆ.... ಉದಾಹರಣೆಗೆ ಮುಂಬಯಿಯ ವಿಶೇಷ ನ್ಯಾಯಾಲಯ... ವೊಂದು ಈಗ 2003 ರ ಮುಂಬಯಿ ಸರಣಿ... ಸ್ಫೋಟಗಳ ಅಪರಾಧಿಗಳಿಗೆ ಶಿಕ್ಷೆ ಘೋಷಿಸುತ್ತಿದೆ. ಈ... ಪ್ರಕರಣದ ಆರೋಪಿಗಳನ್ನು ಪತ್ತೆಹಚ್ಚಿ ಅವರ... ವಿಚಾರಣೆಯನ್ನು ತ್ವರಿತಗತಿಯಲ್ಲಿ ನಡೆಸುವಲ್ಲಿ ಸರ್ಕಾರ... ವಿಶೇಷವಾದ ಮುತುವರ್ಜಿ ವಹಿಸಿತು. (ಯಾವ... ಸೆಕ್ಯುಲರ್‌ವಾದಿಯೂ ಇದನ್ನು ಪ್ರತಿಭಟಿಸಿಲ್ಲ). ಆದರೆ... ಸರ್ಕಾರ ಇದೇ ಮುತುವರ್ಜಿಯನ್ನು 2002 ಡಿಸೆಂಬರ್... ಮತ್ತು 2003 ಜನವರಿ ತಿಂಗಳಿನ ಮುಂಬಯಿ... ಗಲಭೆಗಳ ಆರೋಪಿಗಳ ವಿಚಾರಣೆಯ ಬಗ್ಗೆ ಯಾಕೆ... ವಹಿಸಲಿಲ್ಲ? ಈ ಗಲಭೆಗಳ ನ್ಯಾಯಾಂಗ ತನಿಖೆ ನಡೆಸಿದ... ಜಸ್ಟೀಸ್ ಶ್ರೀಕೃಷ್ಣ ಆಯೋಗ ಹೆಸರಿಸಿದ ರಾಜಕಾರಣಿಗಳು... (ಹೆಚ್ಚಿನವರು ಬಿಜೆಪಿ ಮತ್ತು ಶಿವಸೇನೆಗಳವರು) ಮತ್ತು... ಪೊಲೀಸು ಅಧಿಕಾರಿಗಳಲ್ಲಿ ಒಬ್ಬನಿಗೂ ಇದುವರೆಗೆ... ಶಿಕ್ಷೆ ಆಗಿಲ್ಲ.

ಪಾರ್ಲಿಮೆಂಟ್ ಭವನದ ಮೇಲೆ ನಡೆದ ಬಾಂಬ್ ದಾಳಿಯ ಅಪರಾಧಿಗಳಿಗೆ ಶಿಕ್ಷೆ ಆಗುತ್ತದೆ; ಅದೇ ವೇಳೆಗೆ ಗುಜರಾತ್ ನರಮೇಧಕ್ಕೆ ಕಾರಣಕರ್ತರಾದವರಲ್ಲಿ ಒಬ್ಬನಿಗೂ ಶಿಕ್ಷೆ ಆಗುವುದಿಲ್ಲ. ಬೆಸ್ಟ್ ಬೇಕರಿ ಪ್ರಕರಣದಲ್ಲಿ ಬೇಕರಿಗೆ ಬೆಂಕಿ ಕೊಟ್ಟು ಒಂದೇ... ಕುಟುಂಬದ 16 ಜನರನ್ನು ಸಾಯಿಸಿದವರಿಗೆ ಶಿಕ್ಷೆ... ಆಗುವುದಿಲ್ಲ. ಆದರೆ ಈ ಘಟನೆಯನ್ನು ಕಣ್ಣಾರೆ... ನೋಡಿದ, ಅದರಲ್ಲಿ ತನ್ನ ತಂದೆಯೂ ಸೇರಿ ಕುಟುಂಬದ... 12 ಜನರನ್ನು ಕಳೆದುಕೊಂಡ ಝಾಹಿರಾ ಶೇಕ್‌ಗೆ... "ತಾಂತ್ರಿಕ ಕಾರಣ"ಗಳಿಗಾಗಿ ಒಂದು ವರ್ಷ ಸಜೆ... ಆಗುತ್ತದೆ. ಕೆಎಫ್‌ಡಿಯಂತಹ ಸಂಘಟನೆ ತಳವೂರುವುದಕ್ಕೆ... ಹೇಳಿ ಮಾಡಿಸಿದಂತಹ ಸನ್ನಿವೇಶ ಇದು. ಈ ಸತ್ಯ... ಸಿಪಿಎಮ್‌ಗೂ ಗೊತ್ತಿದೆ. ಆದರೆ ಅದು ಜಾಣಗುರುಡು... ನಟಿಸುತ್ತಿದೆ.

-ಜೆ. ರಾಜಶೇಖರ...

ಮಾಜಿ ಪ್ರಧಾನಿ ದೇವೇಗೌಡರ ಪುತ್ರ ಎಚ್.ಡಿ. ಕುಮಾರಸ್ವಾಮಿ ಯಾವಾಗ ರಾಜ್ಯದಲ್ಲಿ ಭಾರತೀಯ ಜನತಾಪಕ್ಷದೊಂದಿಗೆ ಅಕ್ರಮ ಸಂಬಂಧ ಬೆಳೆಸಿ ಸರ್ಕಾರ ರಚಿಸಿದರೋ, ಆಗಲೇ ಈ ರಾಜ್ಯ ಕೇಸರಿ ಕೋಮುವಾದಿಗಳ ಕೈಗೆ ಸಿಲುಕುವುದು ಸ್ಪಷ್ಟವಾಗಿತ್ತು. ಕಳೆದ ವಾರ ಮಂಗಳೂರಿನಲ್ಲಿ ನಡೆದ ಕೋಮು ಗಲಭೆ ಮತ್ತು ಚಿಕ್ಕಮಗಳೂರಿನ 'ದತ್ತಪೀಠ'ದ ಅವಾಂತರ ಇದಕ್ಕೆ ಪ್ರತ್ಯಕ್ಷ ಸಾಕ್ಷಿ. ಈ ಎರಡೂ ಅವಘಡಗಳ ಸಂಭವಕ್ಕೆ ದೇವೇಗೌಡ ಮತ್ತವರ ಮುಖ್ಯಮಂತ್ರಿ ಪುತ್ರ ಜವಾಬ್ದಾರಿ ಹೊರುವುದು ...



ಭಜರಂಗಿಗಳ ಫ್ಯಾನ್ಸಿಡ್ರೆಸ್!

ಅಧ್ಯಾಪಕರ ಮೇಲೆ ಹಲ್ಲೆಗೆ ಯತ್ನ

ತಿಪಟೂರು

ಈ ಘಟನೆಗಳ ಬೆನ್ನಲ್ಲೇ, ಅಕ್ಟೋಬರ್ 7ರಂದು ತಿಪಟೂರಿನ ಕಲ್ಪತರು ಪದವಿ ಪೂರ್ವ ಕಾಲೇಜಿನ ಉಪನ್ಯಾಸಕ ಎಸ್.ಕೆ. ಹನುಮಂತಯ್ಯನವರ ಮೇಲೆ ಉಪನ್ಯಾಸ ಕೊಠಡಿಯಲ್ಲೇ ಭಜರಂಗದಳದ ಪಟಿಂಗರು ಹಲ್ಲೆ ಯತ್ನ ನಡೆಸಿದ್ದಾರೆ. ಆ ಪಟಿಂಗರು ಅದೇ ಕಾಲೇಜಿನ ವಿದ್ಯಾರ್ಥಿಗಳು ಎಂಬುದೇ ವಿಪರ್ಯಾಸ. ಅಂದರೆ ಈವರೆಗೆ ನ್ಯಾಸ, ಪೀಠ, ಗೋಪುರ, ಇಟ್ಟಿಗೆ, ರಥ ಎಂದು ಓಡಾಡುತ್ತಿದ್ದ ಭಜರಂಗಿಗಳ ಪಂಚರಂಗಿ ಅವತಾರ ಈಗ ಶಾಲಾ, ಕಾಲೇಜುಗಳ ಮೆಟ್ಟಿಲು ಹತ್ತಿ ತರಗತಿಗಳಲ್ಲೂ ಪ್ರತ್ಯಕ್ಷವಾಗಿದೆ. ಇದು ಅಪಾಯಕಾರಿ ಬೆಳವಣಿಗೆಯೇ ಸರಿ.

ಉಪನ್ಯಾಸಕ ಹನುಮಂತಯ್ಯನವರು ತರಗತಿಯಲ್ಲಿ ಪಾಠ ಮಾಡುತ್ತಿದ್ದಾಗ "ದತ್ತಮಾಲ ಫ್ಯಾನ್ಸಿಡ್ರೆಸ್" ಧರಿಸಿದ್ದ ಕೆಲವು ವಿದ್ಯಾರ್ಥಿಗಳು ಪ್ರವೇಶಿಸಿದ್ದಾರೆ. ಇವರ ಶಲ್ಯ, ನಾಮ, ಪಂಚೆ ಇತ್ಯಾದಿಗಳನ್ನು ನೋಡಿ ಇತರ ವಿದ್ಯಾರ್ಥಿಗಳು ನಗಲಾರಂಭಿಸಿದ್ದಾರೆ. ತರಗತಿಯ ಗಾಂಭೀರ್ಯ ಮತ್ತು ಶಿಸ್ತಿನ ಕಾರಣದಿಂದ ಈ ವೇಷವನ್ನು ಬದಲಿಸಿ ಮಾಮೂಲಿ ಬಟ್ಟೆಯನ್ನು ಧರಿಸಿ ಬರಬೇಕೆಂದು ಹನುಮಂತಯ್ಯ ವಿದ್ಯಾರ್ಥಿಗಳಿಗೆ ತಾಕೀತು ಮಾಡಿದ್ದಾರೆ. ಆದರೆ ಫ್ಯಾನ್ಸಿ ಡ್ರೆಸ್‌ನಲ್ಲಿದ್ದ ಭಜರಂಗಿಗಳು "ನಾವು ಸ್ವಾಮಿಗಳು, ಮಾಲೆ ತೆಗೆಯುವುದಿಲ್ಲ" ಎಂದು ರಚ್ಚೆ ಹಿಡಿದಿವೆ.

ಹನುಮಂತಯ್ಯನವರು ಈ ವಿಷಯವನ್ನು ಪ್ರಿನ್ಸಿಪಾಲರ ಗಮನಕ್ಕೆ ತರಲು ತರಗತಿಯಿಂದ ಹೊರ ನಡೆದಿದ್ದಾರೆ. ಅಷ್ಟರಲ್ಲಿ ಅದೆಲ್ಲಿದ್ದರೋ ಭಜರಂಗದಳದ ಅಸಂಖ್ಯಾತ ಕರಸೇವಕರು ಕಾಲೇಜಿಗೆ ... ಮುತ್ತಿಗೆ ಹಾಕಿ ಹನುಮಂತಯ್ಯನವರ ಮೇಲೆ ಹಲ್ಲೆಗೆ ... ಮುಂದಾಗಿದ್ದಾರೆ. ಪ್ರಿನ್ಸಿಪಾಲ್ ಮತ್ತು ... ಪೊಲೀಸರ ಸಕಾಲಿಕ ಪ್ರವೇಶದಿಂದ ಆಗ... ಬಹುದಾಗಿದ್ದ ಅನಾಹುತ ತಪ್ಪಿದೆ.

ಇಂತಹ ಒಂದು ಅನಾರೋಗ್ಯಕರ ಬೆಳವಣಿಗೆಯನ್ನು ಆರಂಭದಿಂದಲೇ ಚಿವುಟದಿದ್ದರೆ, ಭಜರಂಗಿಗಳು ಶಾಲಾ, ಕಾಲೇಜುಗಳು ಸೇರಿದಂತೆ ... ನರ್ಸರಿ ಪ್ರೈಮರಿ ಶಾಲಾ ಮಕ್ಕಳಿಗೂ ಮಾಲೆ ತೊಡಿಸಿ, ... ಢೋಂಗಿ ಸ್ವಾಮಿಗಳನ್ನಾಗಿ ಮಾಡುವ ಮೂಲಕ ವಿದ್ಯಾ... ಭ್ಯಾಸದ ಅರ್ಥವನ್ನೇ ಕಳೆಯುವುದರಲ್ಲಿ ಸಂದೇಹವಿಲ್ಲ.

-ವರದಿಗಾರ...

ಬಡತನದ ಬವಣೆಯ ಬಗ್ಗೆ ಮೌನವಾಗಿರುವುದು ಹಿಂಸೆಯಲ್ಲದೆ ಬೇರೆಯಲ್ಲ-ರೇಗಿಸ್ ಡಿಬ್ರೇ

ಆರೋಗ್ಯ ಮಂತ್ರಿಗೆ ಹಿಡಿದ ಭೂರೋಗ ಯಾಕೋ ...ಯಾಗುತ್ತಲೇ ಇಲ್ಲ! ತುರಹಳ್ಳಿ ಕಾಡನ್ನು ಕಬಳಿಸಲು ...ಸಿದ ತನ್ನ ಶಿಷ್ಯಕೋಟಿಯನ್ನು ಹೇಗೋ ಪೊಲೀಸ ...ದ ಬಚಾಯಿಸಿ ನಿಟ್ಟುಸಿರಿಟ್ಟವರು ಆರ್. ಅಶೋಕ್. ...ಗ ಅಭಿಮಾನ್ ಸ್ಟುಡಿಯೋ ಜಮೀನು ನುಂಗಿದ್ದನ್ನು ...ಲೇಬೇಕಾದ ಕರ್ಮ ಸುತ್ತಿಕೊಳ್ಳುತ್ತಿದೆ.


ಟೆಲ್ಲಿಸಿ ಕಂಡ ಮಹಾನ್ ನಟ ಟಿ.ಎನ್. ಬಾಲಕೃಷ್ಣರ ...ಗಳು ಗೀತಾಬಾಲಿ ಪೊಲೀಸ್ ಕಮಿಷನರ್ ನೀಲಂ ...ತರಾವ್‌ಗೆ ಕೊಟ್ಟ ದೂರಿನಲ್ಲಿ ನೇರವಾಗಿ ಆರೋಗ್ಯ ...ತ್ರಿ, ಆರ್. ಅಶೋಕ್‌ರನ್ನೇ ಹೆಸರಿಸಿದ್ದಾರೆ. ಅಭಿಮಾನ್ ...ಡಿಯೋ ಕಬಳಿಕೆಯಲ್ಲಿ ಕೇಳಿ ಬಂದ ಮತ್ತೊಂದು ...ರು ಆರೋಗ್ಯ ಮಂತ್ರಿಗಳ ಪರಮಾಪ್ತ ಮತ್ತು ...ರಾಜೇಶ್ವರಿ ಸಿಎಂಸಿಯ ಮಾಜಿ ಅಧ್ಯಕ್ಷ ಬಾಲಕೃಷ್ಣ.

...ಇಲ್ಲಿಗೆ ಎರಡು ವರ್ಷಗಳ ಹಿಂದೆಯೇ ನಟ ...ಲಕೃಷ್ಣರ ಕನಸಿನ ಕೂಸಾದ ಅಭಿಮಾನ್ ಸ್ಟುಡಿಯೋ ...ಳಿಕೆಯ ಬಗ್ಗೆ ವದಂತಿಗಳಿದ್ದವು. ಆಗ ಅಶೋಕ್ ...ತ್ತರಹಳ್ಳಿಗೆ ಶಾಸಕ ಮಾತ್ರ. ಒಂದೆರಡು ಪತ್ರಿಕೆಗಳಲ್ಲಿ ... ಬಗ್ಗೆ ವರದಿಯೂ ಆಗಿತ್ತು. ಹಕೀಕತ್ತೇನೆಂದರೆ ...ಈ ಕರ್ಮಕಾಂಡದಲ್ಲಿ ಎಲ್ಲೂ ಅಶೋಕ್ ನೇರವಾಗಿ ...ಗವಹಿಸಲಿಲ್ಲ. ತನ್ನ ಬೇನಾಮಿ ರಾಜರಾಜೇಶ್ವರಿ ...ಸಿಯ ಮಾಜಿ ಅಧ್ಯಕ್ಷ ಬಾಲಕೃಷ್ಣನನ್ನೇ ಮುಂದಿಟ್ಟು ...ಡರು. ಅದಕ್ಕೆ ಬಲಿಬಿದ್ದವರು ನಟ ಬಾಲಕೃಷ್ಣರ ...ಪುತ್ರ ಗಣೇಶ ಮತ್ತು ಕೊನೆಯ ಮಗ ಶ್ರೀನಿವಾಸ್.

1965 ರಲ್ಲಿ ಕೆಂಗೇರಿ ಬಳಿಯ ಮೈಲಸಂದ್ರದ ... ನಂಬರ್ 26 ರಲ್ಲಿ ಸರ್ಕಾರ ಭೂಮಿಯನ್ನು ...ಜೂರು ಮಾಡಿದ್ದು ಯಾರಿಗೆ ಗೊತ್ತಿಲ್ಲ. ಅದೀಗ ...ಸ ಸರ್ವೆ ನಂಬರ್ ಅರವತ್ತೆಂಟಾಗಿದೆ. ಒಂದಾ ...ದು ಕಾಲಕ್ಕೆ ಜನರೇ ಸುಳಿಯದಿದ್ದ ಅಲ್ಲೀಗ ಎಕರೆಗೆ ...ಯೆಂದರೂ ಮೂರು ಕೋಟಿಯ ಬೆಲೆಯಿದೆ. ...ಕಿದ್ದಷ್ಟೂ ದಿನ ಸ್ಟುಡಿಯೋ ಉದ್ಧಾರವಾಗಲಿಲ್ಲ ...ದು ಕೊರಗಿಯೇ ಸತ್ತ ಬಾಲಕೃಷ್ಣರ ಇಬ್ಬರು ಮಕ್ಕಳೂ ...ಡಾಡಿಗಳೆ.

...ರಾಜರಾಜೇಶ್ವರಿ ಸಿಎಂಸಿಗೆ ಅಧ್ಯಕ್ಷನಾಗಿದ್ದ ಬಾಲಕೃಷ್ಣ ...ಪಿಯ ಲೋಕಲ್ ನಾಯಕ ಕೂಡ. ನಟ ಬಾಲಕೃಷ್ಣರ ...ಮಾನ ಸ್ಟುಡಿಯೋ ಕಬಳಿಕೆ ಅಂದರೆ ಸುಮ್ಮನೇನಾ? ...ಕ್ಕೆಂದು ಉತ್ತರಹಳ್ಳಿ ಶಾಸಕ ಅಶೋಕ್‌ರನ್ನೇ ಕಬಳಿಕೆಯ

ಭೂಗಳ್ಳರ ಹೊಟ್ಟೆಗೆ ಬಾಲಣ್ಣ ಸ್ಟುಡಿಯೋ



ಬಾಲಣ್ಣ ಕುಟುಂಬ

ಪಾಲುದಾರನನ್ನಾಗಿ ಮಾಡಿಕೊಂಡ. ಆ ಹೊತ್ತಿಗಾಗಲೇ ಅಭಿಮಾನ ಎಂಬ ಚಿತ್ರ ನಿರ್ಮಿಸಲು ಹೋಗಿ ಗಣೇಶ್ ಕೈ ಸುಟ್ಟುಕೊಂಡಿದ್ದ. ತಮ್ಮ ಶ್ರೀನಿವಾಸ್ ಕೂಡ ಅದೇ ಚಿತ್ರದಲ್ಲಿ ನಟಿಸಿದ್ದ. ಯಾವುದೂ ಬರಕತ್ತಾಗದೇ ಹೋದಾಗ ಕಣ್ಣಿಗೆ ಬಿದ್ದದ್ದು ಅಪ್ಪನ ಆಸ್ತಿಯಾದ ಅಭಿಮಾನ್ ಸ್ಟುಡಿಯೋ.

2003 ರಲ್ಲಿ ಅಣ್ಣತಮ್ಮಂದಿರಿಬ್ಬರೂ ತಮ್ಮತಮ್ಮಲ್ಲೇ ಪಾರ್ಟಿಷನ್ ಡೀಡ್ ಮಾಡಿಕೊಳ್ಳುತ್ತಾರೆ. ಅದನ್ನು ಎಕರೆಗೆ ಎರಡೋ ಮೂರೋ ಲಕ್ಷದಂತೆ ಕಾಂಗ್ರೆಸ್ ಕೌನ್ಸಿಲರ್ ವೆಂಕಟರಾಮು, ಜಾಲಹಳ್ಳಿಯ ಮಾದೇವಪ್ಪ, ಮುನಿರಾಜ ಮತ್ತು ಸ್ವಾಮಿ ಎಂಬುವವರಿಗೆ ಮಾರಿ ಹಾಕುತ್ತಾರೆ. ಈ ಪೈಕಿ ವೆಂಕಟರಾಮು ಬಂಟ ಬಾಲಕೃಷ್ಣನ ಬೇನಾಮಿಯಾದರೆ ಮುನಿರಾಜ ಮತ್ತು ಸ್ವಾಮಿ ಆರ್. ಅಶೋಕ್‌ನ ರಬ್ಬರ್‌ಸ್ಟಾಂಪ್‌ಗಳು. ಲೆಕ್ಕಕ್ಕೆ ಎರಡೋ ಮೂರೋ ಲಕ್ಷದಂತೆ ತೋರಿಸಲಾಯಿತಾದರೂ ವಾಸ್ತವದಲ್ಲಿ ಎಕರೆಗೆ ಒಂದು ಕೋಟಿಯಂತೆ ಕಿತ್ತಿದ್ದಾರೆ ಬಾಲಣ್ಣನ ಮಕ್ಕಳು.


ಬಾಲಣ್ಣನವರ ಐವರು ಮಕ್ಕಳ ಪೈಕಿ ಇಬ್ಬರು ಗಂಡು ಮಕ್ಕಳಾದರೆ ಮೂವರು ಹೆಣ್ಣುಮಕ್ಕಳು. ಇವರಲ್ಲಿ ಕೊನೆಯವರೇ ಗೀತಾಬಾಲಿ. ಯಾವುದೋ ಚಿತ್ರವೊಂದರಲ್ಲಿ ಸಣ್ಣ ಪಾತ್ರವೊಂದನ್ನು ಮಾಡಿ ಕ್ರಮೇಣ ವಿಲ್ಸನ್ ಗಾರ್ಡನ್ನಿನ ಮುರಳಿ ಕೃಷ್ಣರನ್ನು ಮದುವೆಯಾದ ಗೀತಾಬಾಲಿಗೆ ಈ ವಿಷಯ ಗೊತ್ತಾಗಿದ್ದು 2004 ರಲ್ಲಿ. ಈ ಬಗ್ಗೆ ಗೀತಾಬಾಲಿ ಕೋರ್ಟಿನಲ್ಲಿ ಕೇಸು ಹಾಕಿದ್ದಾರೆ. ಅವರ ಉದ್ದೇಶ ಇನ್ನೂ ಮಿಕ್ಕುಳಿದ ಹತ್ತೆಕರೆಯನ್ನು ಉಳಿಸಿಕೊಳ್ಳುವುದಾಗಿತ್ತು. ಈ ಹೊತ್ತಿಗಾಗಲೇ ಮಂತ್ರಿ ಅಶೋಕ್ ಗ್ಯಾಂಗ್ ಸ್ಟುಡಿಯೋದ ಹತ್ತೆಕರೆಯಲ್ಲಿ ಸೈಟು ವಿಂಗಡಿಸಿ ಮಾರಿ ಹಾಕಿತ್ತು. ದುಡ್ಡು ತಿಂದ ದೊಡ್ಡ ಮಗ ಗಣೇಶ್ ಅದನ್ನೆಲ್ಲ ಜೂಜಿನಲ್ಲಿ ಕಳೆದಿದ್ದ. ಕೊನೇ ಮಗ ಶ್ರೀನಿವಾಸ್ ಕೋಟಿ ಲೆಕ್ಕದಲ್ಲಿ ದುಡ್ಡು ಬಂದಿದ್ದೇ ತಡ ಕಟ್ಟಿಕೊಂಡ ಹೆಂಡತಿ ಮಕ್ಕಳನ್ನೂ ತೊರೆದು ಇನ್ನಾರೋ ಎಕ್ಸ್‌ಟ್ರಾ ನಟಿಯ ಜೊತೆ ಚೆನ್ನೈಗೆ ಪರಾರಿಯಾಗಿದ್ದ. ಯಾವತ್ತು ಗೀತಾಬಾಲಿ ಕೋರ್ಟಿಗೆ ಕೇಸು ಹಾಕಿದ್ದು ಗೊತ್ತಾಯಿತೋ ಸಿಎಂಸಿ ಮಾಜಿ ಅಧ್ಯಕ್ಷ ಬಾಲಕೃಷ್ಣ ಗೀತಾಬಾಲಿಗೆ ಫೋನ್ ಮಾಡಿದ್ದಾನೆ. ಮರುದಿನ ಕನಕಪುರ ರಸ್ತೆಯ ಆತನ ಮನೆಗೆ ಹೋದರೆ ಐದು ಲಕ್ಷದ ಚೆಕ್ಕು ಕೊಟ್ಟು ಹಲ್ಲು ಕಿರಿದಿದ್ದಾನೆ. ಚೆಕ್ಕನ್ನು ಆತನ ಮುಖಕ್ಕೇ ಎಸೆದು ಬಂದಿದ್ದಾರೆ ಗೀತಾಬಾಲಿ.



ಗೀತಾಬಾಲಿ

ಆದರೆ ಮರುದಿನವೇ ಬಾಲಕೃಷ್ಣನ ಬಂಟ ಹೇಮಂತ ಎಂಬಾತ ಹಣ್ಣು ಹೂವಿನ ಬುಟ್ಟಿ ಹಿಡಿದು ಗೀತಾಬಾಲಿಯ ಮನೆಗೆ ಬಂದವನು ಚೆಕ್ಕು ಮುಂದಿಟ್ಟಿದ್ದ. ಗೀತಾಬಾಲಿ ಅದಕ್ಕೂ ಜಗ್ಗದೇ ಹೋದಾಗ ತನ್ನ ವರಸೆ ತೋರಿಸಿಬಿಟ್ಟ. ಯಾರಿಗೋ ಫೋನ್ ಮಾಡಿದಂತೆ 'ಅದ್ಮುನ್ ಆಕ್ಷನ್' ಡೈಲಾಗ್ ಹೊಡೆದ ಹೇಮಂತ ಆಸಿಡ್ ಹಾಕ್ತೀನಿ ಮರ್ಡರ್ ಮಾಡಿಸ್ತೀನಿ ಎಂದು ಗೀತಾಬಾಲಿಯ ಮುಖಕ್ಕೇ ಹೊಡೆದಂತೆ ಕೂಗಾಡುತ್ತಿದ್ದ. ಅದಕ್ಕೆ ಆಕೆ ಸರಿಯಾಗಿಯೇ ದಬಾಯಿಸಿದ್ದಾರೆ. ಏನಯ್ಯಾ ಹೆದರ್ತೀನಿ ಅಂದ್ಕೊಂಡಿದೀಯಾ? ಎಂದೇ ಹೇಮಂತನನ್ನು ಹೊರದಬ್ಬಿದ ಗೀತಾಬಾಲಿ ಮರುದಿನವೇ ಪೊಲೀಸ್ ಕಮಿಷನರ್ ಕಂಡು ದೂರು ಸಲ್ಲಿಸಿದ್ದಾರೆ. ಇದಾಗಿ ಎರಡೇ ದಿನಕ್ಕೆ ಕೋರ್ಟು ಅಭಿಮಾನ್ ಸ್ಟುಡಿಯೋ ಪರವಾಗಿ ಇಂಜಕ್ಷನ್ ಆದೇಶ ಕೊಟ್ಟಿದೆ. ಕೋರ್ಟ್ ಆದೇಶವಿದ್ದ ಬೋರ್ಡನ್ನು ಸ್ಟುಡಿಯೋ ಜಮೀನಿನಲ್ಲಿ ಹೂತರೆ ಅದನ್ನು ಮರುದಿನವೇ ಅಶೋಕ್ ಗ್ಯಾಂಗ್ ಕಿತ್ತು ಹಾಕಿದೆ. ಮಂತ್ರಿ ಅಶೋಕ್ ಬಂಟರ ಅಟ್ಟಹಾಸ ಹೇಗಿದೆಯೆಂದರೆ ಕೇವಲ ಕೋರ್ಟ್ ಆದೇಶದ ಬೋರ್ಡು ಕಿತ್ತುಹಾಕಿದ್ದಷ್ಟೇ ಅಲ್ಲ; ರಾತ್ರೋರಾತ್ರಿ ಅಭಿಮಾನ್ ಸ್ಟುಡಿಯೋದ ಜಮೀನನಲ್ಲಿ ರಸ್ತೆ ನಿರ್ಮಿಸಿ, ಲೈಟುಕಂಬಗಳನ್ನು ನೆಟ್ಟು, ಸೈಟುಗಳನ್ನು ವಿಂಗಡಿಸಿ ಅದಕ್ಕೆ ನಂಬರ್ ಬೋರ್ಡುಗಳನ್ನು ನೆಟ್ಟಿದ್ದಾರೆ. ಸದ್ಯ ಇಡೀ ಅಭಿಮಾನ್ ಸ್ಟುಡಿಯೋ ನೆಲಗಳ್ಳರ ತೆಕ್ಕೆಗೆ ಬಿದ್ದಿದೆ. ನಟ ಬಾಲಕೃಷ್ಣರ ಮಗಳ ಪರವಾಗಿ ನಾಡಿನ ಪ್ರಜ್ಞಾವಂತರೆಲ್ಲರು ಧನಿಗೂಡಿಸಬೇಕಿದೆ. ತುರಹಳ್ಳಿ ಕಾಡನ್ನು ಉಳಿಸಿಕೊಳ್ಳುವದು ಎಷ್ಟು ಮುಖ್ಯವೋ ಅಭಿಮಾನ್ ಸ್ಟುಡಿಯೋ ಭೂಗಳ್ಳರ ಪಾಲಾಗದಂತೆ ನೋಡಿಕೊಳ್ಳುವುದು ಕೂಡ ಸರ್ಕಾರದ ಕರ್ತವ್ಯ. ಮಂತ್ರಿ ಅಶೋಕ್‌ಗೆ ಈಗಲಾದರೂ ನಾಚಿಕೆಯಾಗಬೇಕು. ಬಾಲಣ್ಣರಂಥ ಮೇರುನಟರ ಕನಸಿನ ಸಮಾಧಿ ಮೇಲೆ ಕೂತು ಉಣ್ಣುವ ದಾರಿದ್ರ್ಯ ಅಶೋಕ್‌ಗೆ ಖಂಡಿತಾ ಇರಲಿಕ್ಕಿಲ್ಲ, ಆದರೆ ದುರಾಶೆ? ಸರ್ಕಾರವೊಂದಕ್ಕೆ ನಟ ಬಾಲಣ್ಣನಂಥವರ ಕೊನೆಯ ಕನಸನ್ನೂ ಕಾಪಾಡಲಾಗಲಿಲ್ಲ ಎಂದರೆ ಅದೊಂದು ಸರ್ಕಾರವೇ ಅಥವಾ ಭೂಗಳ್ಳರ ಕೂಟವೇ?

-ರಾ.ಸೋ.



ನಮ್ಮ ಎಲ್ಲಾ ಬಲ್ಲ ಎಲ್ಲಪ್ಪನೆಂಬ ಎಂ.ಪಿ. ಪ್ರಕಾಶ ... ಕರ್ನಾಟಕ ಪೀಡಕ ಸರ್ಕಾರದ ಸಮನ್ವಯ ...ತಿ ಸಂಚಾಲಕರನ್ನಾಗಿ ಮಾಡಲಾಗಿದೆಯಂತಲ್ಲಾ. ...ನವ ಪೌರೋಹಿತ್ಯಗಿರಿಯನ್ನು ತಲೆಯಲ್ಲಾಡಿಸುತ್ತಾ ...ಕೊಂಡ ಪ್ರಕಾಶ್ ಖುಷಿ ಪಡುವುದಕ್ಕೆ ಮೊದಲೇ ...ಣ ಕನ್ನಡ ಜಿಲ್ಲೆಯ ಚೆಡ್ಡಿಗಳು ಜೈ ಭಜರಂಗಬಲಿ ...ದು. ಚೆಡ್ಡಿಯೊಳಕ್ಕೆ ಗಾಳಿ ...ಗ್ಗವಂತೆ ಹಾರುತ್ತ, ಲಾಟಿ ...ಸುತ್ತ ಸ್ವಾಗತಿಸಿದವಂತಲ್ಲಾ. ...ಪಿ. ಪ್ರಕಾಶ್ ಸಮನ್ವಯ ...ತಿ ಸಂಚಾಲಕನಾದರೆ ಈ ...ಗಳಿಗೇಕೆ ಇಂತಹ ರಣೋ... ?" ಎಂದು ಕೋಮು ...ಹಾರ್ದಿಗಳು ನಿಬ್ಬೆರಗಾಗಿ ...ಡುತ್ತಿರಬೇಕಾದರೆ, ಚೆಡ್ಡಿಗಳು ಇನ್ನೂ ಮುಂದು ...ದು "ನಿಜವಾಗಲೂ ಈ ಪ್ರಕಾಶ್ ನಮ್ಮ ...ವಂದಗೌಡರ ಜಾಗದಲ್ಲಿರಬೇಕಿತ್ತು ಮರಾಯ. ... ಸಾಬರ ಅಂಗಡಿಗೆ ನುಗ್ಗಿ ಲೂಟ ಮಾಡುವಾಗ, ... ಮಾಡುವಾಗ, ಅದರ ಪರಿಣಾಮವನ್ನು ನೆನೆದು ...ಟ ಹೆದರಿದ್ದೆವು. ಆದರೆ ನಮ್ಮ ಪ್ರಕಾಶರು ನಮ್ಮ ...ನನ್ನು ತೆಗೆದು ಸಿಮಿ ಎಂಬ ಸೆಮಿಕ್ರಾಕ್‌ಗಳ ತಲೆಗೆ ...ರಲ್ಲ, ನಿಜಕ್ಕೂ ಅವರು ನಮ್ಮ ಪಾರ್ಟಿಯಲ್ಲಿರಲು ...ಗ್ಯ" ಎಂದು ಪ್ರಕಾಶರನ್ನು ಕೊಂಡಾಡುತ್ತ ಕಡೆಗೆ ... ಭೋಜನವನ್ನು ಬಾರಿಸಿ ದವಂತಲ್ಲಾ, ಥೂತ್ತೇರಿ!

* * * * * * * * *

ಬಂಡಾಯವೆಂಬುದು ಒಂದು ಮನೋಧರ್ಮ. ...ಮನೋಧರ್ಮ ಮನಸ್ಸಿನ ಒಂದು ಭಾಗವಾದ ...ಕ್ಕೆ ಮನುಷ್ಯ ಅನ್ಯಾಯ ಕಂಡಲ್ಲೆಲ್ಲಾ ಪ್ರತಿ...ಸುತ್ತಲೇ ಇರುತ್ತಾನೆ. ಅದರಲ್ಲೂ ನಮ್ಮ ...ರಿಗಳನ್ನು ನಾವು ಕಡೆಯವರೆಗೂ ಪ್ರತಿಭಟಿಸುತ್ತಲೇ ...ಕಾಗುತ್ತದೆ. ಏಕೆಂದರೆ, ಈ ನಮ್ಮ ಪುರೋಹಿತರು ...ನಳನ್ನೇ ಕೇಳದಂತೆ ನಮ್ಮ ಬಾಯಿಮುಚ್ಚಿಸಿದ್ದ ...ಗಳು" ಎಂದು ಬಂಡಾಯದ ವೇದಿಕೆಯಲ್ಲಿ ...ಯದ ಕಹಳೆ ಊದುತ್ತಲೇ ಬಂದ ಚಂಪಾ, ...ಗ್ಗದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದನ್ನು ... ವಿರುದ್ಧ ನಡೆದ ... ಅವಧಿಯಲ್ಲಿ ಕೂಗಿದ್ದರಂತಲ್ಲಾ. ಆದರೆ ...ಅದನ್ನು ಮರೆತು ... ಕನ್ನಡ ದ್ರೋಹಿ ... ವಿರುದ್ಧ ಉಸಿರೆತ್ತದೆ, "ಕನ್ನಡ ದ್ರೋಹಿ ... ಅನಂತಮೂರ್ತಿ" ಎಂದು ಹೊಸ ಅನಂತ ...ರಲ್ಲ... "ಚಂಪಾ ಶಿವಮೊಗ್ಗದ ಸಾಹಿತ್ಯ ...ನಾಗಿ ಚೆಡ್ಡಿ ಮಂತ್ರಿಗಳ ಮನೆ ಬಾಗಿಲಿಗೆ ... ಅನುಭವಿಸುವಂತಾಗಿದೆ"

ಥೂತ್ತೇರಿ

ಹಾಸನದ ಜನಗಳ ಬಗ್ಗೆ ಹಗುರಾಗಿ ಮಾತಾಡಬೇಡಿ ಸಾ...

ಎಂದು ಕೋಮುಸೌಹಾರ್ದಿಗಳು ಕುಂಡಿ ಬಡಿದುಕೊಂಡು ನಗುತ್ತಿದ್ದಾರಂತಲ್ಲಾ. ಈ ಪೈಕಿ ಕೆ.ಎಲ್. ಅಶೋಕ್ ಎಂಬ ವಾಮನಮೂರ್ತಿ ಚಂಪಾ ಎದುರು ನಿಂತು ಅವರನ್ನು ಬಂಡಾಯದ ಭೂಮಿಯಲ್ಲಿ ತುಳಿಯುವ ಎಲ್ಲಾ ಏರ್ಪಾಡುಗಳನ್ನು ಮಾಡುತ್ತಿರಬೇಕಾದರೆ, ಚಂಪಾ ಈ ಸಮಯದಲ್ಲಿ ಏನು ಹೇಳಬಲ್ಲರು ಎಂದು ಚೆನ್ನಾಗಿಯೇ ಗ್ರಹಿಸಿರುವ ಡಂಬಾಯದವರು ಬಂಡಾಯದ ನಗೆ ನಗುತ್ತ ತಮಾಷೆ ನೋಡುತ್ತಿದ್ದಾರಂತರಲ್ಲಾ, ಥೂತ್ತೇರಿ!!

* * * * * * * * *

ಇದ್ದಕ್ಕಿದ್ದಂತೆ ಮುತ್ತಿಕೊಂಡ ಬೇಸರ ಮತ್ತು ಹತಾಶೆಯಿಂದ ಪಾರಾಗಲು ದೇವೇಗೌಡರ ಜೊತೆ ಆಟ ಆಡಿದರೆ ಹೇಗೆ ಅನ್ನಿಸಿತಲ್ಲಾ, ತಡಮಾಡದೆ ಫೋನ್ ಮಾಡಲಾಗಿ ಸಿಕ್ಕೇಬಿಟ್ಟರು!

"ಹಲೋ ಸಾರ್, ನಾನು ಯಾಹೂ. ನಿಮ್ಮತ್ರ ಸ್ವಲ್ಪ ಮಾತಾಡಬೇಕು."

"ಏನ್ ಯಾಹೂ, ಈ ಕಡೆ ಬರಲೇಯಿಲ್ಲ?"

"ಗೌಡರಲ್ಲವಾ ಸಾರ್?"

"ನಾನು ದತ್ತ. ಮಾತಾಡ್ತಯಿರೋದು."

"ಆಗ್ಲೆ ಅಲ್ಲಿದೀರ ಸಾರ್? ಇವತ್ತು ಬೆಳಿಗ್ಗೆ ಬೇರೆ ಯಾವೂರಲ್ಲೊ ಮಾತಾಡ್ತ ನಿಂತಿದ್ರಿ?"

"ನಾನು ಎಲ್ಲಿಗೋದ್ರೂ ಬೇಗ ಬಂದು ಗೌಡರತ್ರ ಇರಬೇಕು ಸಾರ್."

"ಓಹ್ ಹೊ, ದೃತರಾಷ್ಟ್ರನತ್ರ ಸಂಜಯ ಇದ್ದಂಗೆ ಅನ್ನಿ."

"ಹಾಗೂ ತಿಳಕೊಳಿ, ಅಥವಾ ಕುರಡನಿಗೆ ಕೋಲಿದ್ದಂಗೆ ಅಂತ್ಲೂ ತಿಳಕೊಳಿ."

"ಕೋಲೆ. ಬುದಿ ನೀವು. ಇಲ್ಲ ಅಂದ್ರೆ ದತ್ತಪೀಠದ ಕಾರ್ಯಾಚರಣೆನ ಅಷ್ಟು ಚೆನ್ನಾಗಿ ವ್ಯಾಖ್ಯಾನ ಮಾಡಕ್ಕೆ ಇನ್ಯಾವ ಚೆಡ್ಡಿಗಳ ಕೈಲೂ ಆಯ್ತಿರಲಿಲ್ಲ."

"ಗೌಡರತ್ರ ಮಾತಾಡಿ ಯಾಹೂ, ಫೋನ್ ಕೊಡ್ತಿನಿ."

"ನಮಸ್ಕಾರ ಸಾರ್, ನಾನು ಯಾಹೂ."

"ಬೇಗ ಅದೇನು ಹೇಳಿ, ಸ್ನಾನ ಮಾಡಬೇಕು."

"ಇನ್ನು ಸ್ನಾನ ಮಾಡಿಲ್ಲವ ಸಾರ್? ಉಷಾರು ಸಾರ್, ಹಿಂದೊಂದು ಸಾರಿ ಸ್ನಾನ ಮಾಡಕ್ಕೋಗಿ ಕಾಲಿಗೆ ಏಟು ಮಾಡಿಕೊಂಡಿದ್ರಿ."

"ಈಗ ಅಂತಹ ಗಡಿಬಿಡಿ ಮಾಡಿಕೊಳ್ಳಲ್ಲ."

"ಹೌದಲ್ಲವ ಸಾರ್. ಎಲ್ಲಾ ನಿಮ್ಮ ಕನಸುಗಳೂ ನನಸಾಗಿ, ಸೂಸೂತ್ರವಾಗಿ ನಡಕಂಡೋಗ್ತಯಿರದ್ರಿಂದ ಈಗ ಯಾವ ಗಡಿಬಿಡಿನೂ ಇಲ್ಲ ಅಂತ ಕಾಣ್ತದೆ?"

"ಆದ್ರು ಚಾಮುಂಡೇಶ್ವರಿ ಚುನಾವಣೆ ಬರ್ತಾಯಿದೆ."

"ಅದಕ್ಕೇನು ತಯಾರಿ ನೆಡೆಸಿದ್ದಿರಿ ಸಾರ್?

"ಅದನ್ನೆಲ್ಲಾ ಮುಖ್ಯಮಂತ್ರಿಗಳು, ಲೋಕೋಪಯೋಗಿ ಮಂತ್ರಿಗಳ ಜವಾಬ್ದಾರಿಗೆ ಬಿಟ್ಟದ್ದಿನಿ. ನಾನೇನಿದ್ರು ಕೆಲವು ಸಲಹೆಗಳನ್ನು ಕೊಡ್ತಿನಿ ಅಷ್ಟೆ."

"ಇನ್ನೊಂದು ವಿಷಯ ಸಾರ್, ಜಾರ್ಜ್ ಫೆರ್ನಾಂಡಿಸ್ ಮೇಲೆ ತೆಹಲ್ಕಾ ಮಾಡಿದ್ದ ಭ್ರಷ್ಟಾಚಾರದ ದೂರು ಬಿಗಡಾಯಿಸಿಕಳ್ತಾ ಅದೆ?"

"ನಾನು ಯಾರ ವಿರುದ್ಧವೂ ಭ್ರಷ್ಟಾಚಾರದ ಆರೋಪ ಮಾಡಕ್ಕೊಗದಿಲ್ಲ. ತನಿಖೆಗೂ ಒತ್ತಾಯಸಲ್ಲ. ಅದರಲ್ಲೂ ಸಿಬಿಐ ತನಿಖೆಗಂತ್ಲು ಎಂದೂ ಒಪ್ಪಲ್ಲ!"


"ನಮ್ಮ ಪ್ರಧಾನಿ ಲಂಡನ್ನಿಗೋಗಿ ಟೋನಿ ಬ್ಲೇರ್ ಭೇಟಿಯಾಗಿ ಬಂದ್ರು ಸಾರ್!"

"ಅಂತಹ ಭೇಟಿಗಳನ್ನು ನಾನೂ ಮಾಡಿದ್ದಿನಿ. ಅದರಿಂದ ಏನು ಪ್ರಯೋಜನ?"

"ಬಾಂಬೆ ಸ್ಫೋಟದಲ್ಲಿ ಪಾಕಿಸ್ತಾನದ ಕೈವಾಡ ಅದೆ ಅಂತ ನಮ್ಮ ಪ್ರಧಾನಿ ಹೇಳಿಬುಟ್ಟವುರೆ ಸಾರ್."

"ನೋಡೀ ಹಾಸನದ ಹಾ.ರಾ. ನಾಗರಾಜನ ಕೊಲೆಲಿ ಲೋಕೋಪಯೋಗಿ ಸಚಿವರ ಕೈವಾಡ ಇದೆ ಅಂತ ಆರೋಪ ಮಾಡಿದ್ರು. ಈಗ ನೋಡಿ, ಗಾರೆ ... [illegible]"

"... ಸಾರ್. ಹಾಸನ ಅಂಗಾಗ್ಯದೆ? ... ದೇವಣ್ಣ ಗೆದ್ದೇಟಿಗೆ ಊರಿಗ... ದಿನ ಕೊಲೆ ಆಗ್ತಾಯಿವೆ."



"ಅದಕ್ಕೆಲ್ಲಾ ಕಾರಣರಾದವರು ಏನಾದ್ರು ಅಂತ ನಿಮಗೆ ಗೊತ್ತಾಗಿರಬೇಕಿತ್ತಲ್ಲಾ?"

"ಪುಟ್ಟಸ್ವಾಮಿಗೌಡ್ರು ಅಂಥೋರಲ್ಲಾ ಸಾರ್."

"ನಾನು ಹಾಗೇಳಿದ್ನೆ? ಈ ದೇವೇಗೌಡನ ಕುಟುಂಬವನ್ನ ವಿರೋಧಿಸತಕ್ಕಂತಹ ಜನಗಳ ಪಾಡೇನಾಯ್ತು ಅಂತ ನೀವೇ ತಿಳಕೊಳ್ಳಬೇಕಾದಂತಹ ಪರಿಸ್ಥಿತಿ ನಿಮ್ಮ ಕಣ್ಣೆದುರಿಗೆ ಜರುಗುತ್ತೆ."

"ದೇವರುಗಳು, ದೆವ್ವಗಳು, ಜನಗಳೆಲ್ಲಾ ನಿಮ್ಮ ತರನೆ ಇರಂಗೆ ಕಾಣ್ತದಲ್ಲ, ಇದರ ಗುಟ್ಟೇನು ಸಾರ್?"

"ಗುಟ್ಟೇನು ಇಲ್ಲ. ಜನಬಲ, ದೈವಬಲ ಎಲ್ಲಾ ಕೂಡಿ ಬಂದಿದೆ. ಎಲ್ಲಾ ಗ್ರಹಗತಿಯೂ ಒಳ್ಳೆ ಸ್ಥಾನದಲ್ಲಿಯೇ ಇವೆ. ಶನಿ ಬಹಳ ದೂರ ಇರೋದ್ರಿಂದ ಸದ್ಯಕ್ಕೆ ಯಾವ ತೊಂದ್ರೆನೂ ಇಲ್ಲ."

"ಹಾಸನದಲ್ಲಿ ಕಾಂಗ್ರೆಸ್ ಅಧ್ಯಕ್ಷರಾಗಿ ಎ. ಮಂಜು ಆಯ್ಕೆಯಾಗಿದಾರೆ ಸಾರ್."

"ಎ. ಮಂಜು ಅಲ್ಲ, ಬಿಯಿಂದ ಹಿಡದು ಜೆಡ್‌ವರಿಗೂ ಇರೊ ಮಂಜುನಾಥಗಳು ಸೇರಿಕೊಂಡ್ರೂ ಹಾಸನದಲ್ಲಿ ನಮ್ಮನ್ನ ಯಾರೇನೂ ಮಾಡಕ್ಕಾಗಲ್ಲ."

"ಹಾಸನದ ಜನಗಳನ್ನು ಅಂಗೆ ಹಗುರವಾಗಿ ತಿಳಕೊಬೇಡಿ ಸಾರ್."

"ನನ್ನ ಜನ ... ಅವರೇನು ಅಂತ ನನಗೊತ್ತು."

"ಹೌದು ಸಾರ್. ನಿಜವಾಗ್ಲು ಒಳ್ಳೆ ಜನ. ಮಾಜಿ ಪ್ರಧಾನಿ ಅಂತ ಕೈ ಮುಗುದ್ರೂ ಕೇರ್ ಮಾಡದೆ ... ಕೋಲಿಸಿ. ಹಾಸನ ಜಿಲ್ಲೆಗೆ ಕಾಲಿಡದಂಗೆ ಮಾಡಿದ್ರು. ಅಷ್ಟು ಒಳ್ಳೆ ಜನ ... [illegible]"

-ಯಾಹೂ

ಕೋಳಿಗೇರಿ ಮಕ್ಕಳ ಶರೀರದ ಮೇಲೆ ... ಹಲವು ... ಗಳನ್ನು ಕಾಣಬಹುದು -ವೀಣಾ ದಾಸ್

ಜೋಡಿ ರುಂಡ ಕಡಿದ ಬಿಜೆಪಿ ಮುಖಂಡ

ರಾಜ್ಯದ ಜನರ ಅಭಿವೃದ್ಧಿಗಾಗಿ ಹಗಲು ರಾತ್ರಿ ...ದುಡಿಯುತ್ತಾ ದಲಿತರು, ಲಿಂಗಾಯತರು, ಒಕ್ಕಲಿಗರು, ಮುಸ್ಲಿಮರು, ಬಡವರು ಬಗ್ಗರ ಮನೆಯಲ್ಲಿ ರಾತ್ರಿ ಕಳೆಯುತ್ತಾ ಸ್ವಂತ ಮನೆಯನ್ನೇ ಮರೆತಿರುವ ರಾಜ್ಯದ ಮುಖ್ಯಮಂತ್ರಿಗಳಾದ ಕುಮಾರಸ್ವಾಮಿಗಳೇ, ತಾವು ಈ ಕೂಡಲೆ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ ಹುಲಿಕುಂಟೆ ಗ್ರಾಮದ ಗೊಲ್ಲರ ಮನೆಯಲ್ಲೂ ಒಂದು ರಾತ್ರಿ ಮಲಗಿ ಬರಬೇಕೆಂದು ನಿವೇದಿಸುತ್ತಿದ್ದೇವೆ.

ಕಾರಣ, ನಿಮ್ಮ ಸಮ್ಮಿಶ್ರ ಸರ್ಕಾರದ ಪಾಲುದಾರ ಪಕ್ಷವಾದ ಭಾರತೀಯ ಜನತಾ ಪಕ್ಷದ ಸ್ಥಳೀಯ ಮುಖಂಡ ವಕೀಲ ಸೀತಾರಾಮಗೌಡ ಅಕ್ಟೋಬರ್ 11 ರ ಮಟ-ಮಟ ಮಧ್ಯಾಹ್ನ ಇಬ್ಬರು ಅಮಾಯಕ ಗೊಲ್ಲರನ್ನು ಅಟ್ಟಾಡಿಸಿಕೊಂಡು ಕತ್ತರಿಸಿ ಕೊಲೆ ಮಾಡಿದ್ದಾನೆ. ಕಳೆದ ಮೂರು ದಶಕಗಳಿಂದ ಹುಲಿಕುಂಟೆಯ ಗ್ರಾಮಸ್ಥರಿಗೆ ಕಂಟಕವಾಗಿ ಪಾಳೇಗಾರನಂತೆ ಮೆರೆಯುತ್ತಿದ್ದಾನೆ. ಇಲ್ಲಿ ಒಂದು ರಾತ್ರಿ ತಾವು ಮಲಗಿ ಇಲ್ಲಿನ ಜನರ ಬಾಯಿಯಿಂದಲೇ ಅವನ ಅಕ್ರಮಗಳನ್ನು ಕೇಳಿದರೆ ಇಲ್ಲಿರುವುದು ನಿಮ್ಮ ಸರ್ಕಾರವಲ್ಲ ಸೀತಾರಾಮಗೌಡನ ಪಾಳೆಯಪಟ್ಟು ಎಂಬುದು ಅರ್ಥವಾಗುತ್ತದೆ.



ಎಂ.ಪಿ.ಪ್ರಕಾಶ್

ಹೆಸರಿಗಷ್ಟೇ ವಕೀಲನಾದ ಸೀತಾರಾಮಗೌಡ ಕೂಡ್ಲಿಗಿ ತಾಲ್ಲೂಕಿಗೆ ಕುಖ್ಯಾತನಾದ ಭಾರಿ ಭೂಮಾಲೀಕ. ಇವನ ಹಿಡಿತದಲ್ಲಿ 900 ಎಕರೆ ಜಮೀನಿದೆ. ಆಸ್ತಿಗೆ ತಕ್ಕಂತೆ ಅಟ್ಟಹಾಸ, ದೌರ್ಜನ್ಯ ನಡೆಸುತ್ತಾನೆ. ಲಾಗಾಯ್ತಿನಿಂದ ಇಲ್ಲಿರುವ ಬಹುಸಂಖ್ಯಾತ ಗೊಲ್ಲರು, ನಾಯಕರು ಮತ್ತು ದಲಿತರು ಸೀತಾರಾಮನ ಅಡಿಯಾಳುಗಳೆ. ವಿಪರ್ಯಾಸವೆಂದರೆ ಖಳನಾಯಕ ಸೀತಾರಾಮ ಸಹ ಅದೇ ಗೊಲ್ಲರ ಜಾತಿಗೆ ಸೇರಿದವನು. ಎಷ್ಟೋ ವರ್ಷಗಳಿಂದ ಇವನ ದಬ್ಬಾಳಿಕೆಯನ್ನು ಸಹಿಸಿಕೊಂಡು ಬಂದಿದ್ದ ಗೊಲ್ಲರು ಮತ್ತಿತರ ಜನಾಂಗದವರು ಇತ್ತೀಚಿಗೆ ಎಚ್ಚೆತ್ತುಕೊಂಡು ಸೀತಾರಾಮನ ವಿರುದ್ಧ ಸಂಘಟಿತರಾಗುತ್ತಿದ್ದರು.

ಸೀತಾರಾಮ ಸುಮಾರು 450 ಎಕರೆ ಸರ್ಕಾರಿ ಜಮೀನನ್ನು ಕಬಳಿಸಿದ್ದಾನೆ. ಅದನ್ನು ಬಡ ದಲಿತರ ಹೆಸರಿಗೆ ಬರೆಸಿ ಅವರೇ ಮಾಲೀಕರೆಂದು ದಾಖಲೆಗಳನ್ನು ಮಾಡಿಸಿದ್ದಾನದಾರೂ, ಫಸಲನ್ನು ತಿನ್ನುವುದು ಮಾತ್ರ ಸೀತಾರಾಮ. ದಲಿತರೇನಿದ್ದರೂ ಕೂಲಿ ಮತ್ತು ಹೊಟ್ಟೆಗೊಂದಿಷ್ಟು ಜೋಳ-ಕಡ್ಡಿ ಕಾಳು ಭಿಕ್ಷೆ ಪಡೆಯಬೇಕು. ಅವರು ಯಾವತ್ತಿದ್ದರೂ ಜೀತದಾಳುಗಳು, ಆದರೆ ಗೊಲ್ಲರು ಯಾವಾಗ ತಿರುಗಿಬಿದ್ದರೊ, ಸೀತಾರಾಮ ದಲಿತರನ್ನು ಅವರ ವಿರುದ್ಧ ಎತ್ತಿ ಕಟ್ಟಿ ಅವರಿಗೆ ಜಮೀನು ನಿಮ್ಮದೇ, ನೀವೇ ಒಡೆಯರು ಎಂದು ಜ್ಞಾಪಿಸಿ ಪಂಪು ಹೊಡೆದು ಭೂ ಬಿಡುತ್ತಿದ್ದ. ದಲಿತರು-ಗೊಲ್ಲರು ಹೊಡೆದಾಡುವುದರ ಮಧ್ಯೆ ಬೇಳೆ ಬೇಯಿಸಿಕೊಳ್ಳುತ್ತಿದ್ದ.

ಆದರೆ ಹುಲಿಕುಂಟೆಯಲ್ಲಿ ಎರಡು ವರ್ಷಗಳ ಹಿಂದೆ ಅಖಿಲ ಭಾರತ ಕಿಸಾನ್ ಸಭಾ ಸಂಘಟನೆಯ ಶಾಖೆ ಆರಂಭವಾಗಿ ಗ್ರಾಮಸ್ಥರೆಲ್ಲಾ ಒಗ್ಗಟ್ಟಾಗಿ, ಸೀತಾರಾಮನ ವಿರುದ್ಧ ಹೋರಾಟ ಆರಂಭವಾಯ್ತು. ಗ್ರಾಮದ ಕಿರುನೀರು ಯೋಜನೆ ಅನ್ವಯ ಹಾಯಿಸಿದ್ದ ಪೈಪನ್ನು ಸೀತಾರಾಮ ತನ್ನ ಹೊಲಕ್ಕೆ ತಿರುಗಿಸಿಕೊಂಡಿದ್ದ. ಹೋರಾಟದ ಮೊದಲ ಹಂತವಾಗಿ ಗ್ರಾಮಸ್ಥರು ಈ ಸಂಪರ್ಕವನ್ನು ಕಡಿದು ಹಾಕಿದರು. ಆದರೆ ದುರುಳ ಸೀತಾರಾಮ ಗ್ರಾಮಸ್ಥರು ನನ್ನ ಹೊಲದ ಪಂಪ್ ಸೆಟ್ ಕದ್ದರು ಎಂದು ಸುಳ್ಳು ದೂರು ನೀಡಿ ಒಂದಷ್ಟು ಜನರನ್ನು ಜೈಲಿಗಟ್ಟಿದ. ಅಷ್ಟಕ್ಕೆ ಸೀತಾರಾಮನ ವಿಕೃತ ಮನಸ್ಸು ತೃಪ್ತವಾಗಲಿಲ್ಲ. ಕಿಸಾನ್ ಸಭಾದ ಕಾರ್ಯಕರ್ತರ ಮನೆಗೆ ಜುಲೈ 7 ರಂದು ನುಗ್ಗಿದ ಸೀತಾರಾಮನ ಗೂಂಡಾ ಪಡೆ, ಚನ್ನಮ್ಮ, ತಿಮ್ಮಣ್ಣ ಹೊನ್ನೂರಪ್ಪ ಮತ್ತು ಶ್ರೀಧರ ಎಂಬುವರ ಮನೆಗಳ ವಸ್ತುಗಳನ್ನು ನಾಶಪಡಿಸಿ, ಅವರ ಮೇಲೆ ಮಚ್ಚು, ದೊಣ್ಣೆಗಳಿಂದ ಹಲ್ಲೆ ನಡೆಸಿತು. ತೀವ್ರವಾಗಿ ಗಾಯಗೊಂಡ ಈ ಗ್ರಾಮಸ್ಥರು ಐದು ತಿಂಗಳ ಕಾಲ ಆಸ್ಪತ್ರೆಯಲ್ಲಿ ನರಳಬೇಕಾಯ್ತು. ಈ ಪ್ರಕರಣ ಪೊಲೀಸ್ ಠಾಣೆಯಲ್ಲಿ ದಾಖಲಾಯಿತು. ಆದರೆ ಕೂಡ್ಲಿಗಿ ಠಾಣೆಯಲ್ಲಿ ಕೂತಿದ್ದ ಭಯಂಕರ ಹಸಿವಿನ ಡಿಎಸ್ಪಿ ಗಿರಿಜಾಪತಿ ಎಂಬ ಲಂಚಾಧಿ ಪತಿಯ ಕೃಪೆಯಿಂದ ಸೀತಾರಾಮ ನಿರೀಕ್ಷಣಾ ಜಾಮೀನು ಪಡೆದು ಮತ್ತೆ ಗ್ರಾಮಕ್ಕೆ ಕಾಲಿಟ್ಟ.

ಬಳ್ಳಾರಿ



ಜನಾರ್ಧನ ರೆಡ್ಡಿ


ನಂತರವಂತೂ ಅವನ ಅಟ್ಟಹಾಸ ಎಲ್ಲೆ ಮೀರಿತು. ಕಿಸಾನ್ ಸಭಾ ಶಾಖೆಯ ಬೋರ್ಡನ್ನು ಕಿತ್ತು ಹಾಕಿಸಿ ಬಾವಿಗೆಸೆದ ಸೀತಾರಾಮ, ದಿನನಿತ್ಯ ಗ್ರಾಮಸ್ಥರಿಗೆ ಒಂದಿಲ್ಲ ಒಂದು ಕಿರುಕುಳ ನೀಡಲಾರಂಭಿಸಿದ. ಊರಿಗಿದ್ದ ಏಕೈಕ ಸ್ಮಶಾನದ ಹಾದಿಯನ್ನೇ ಬಂದ್ ಮಾಡಿಸಿಬಿಟ್ಟ, ಗ್ರಾಮದೊಳಗಿದ್ದ ಬೀದಿ ದೀಪಗಳನ್ನೆಲ್ಲ ಒಡೆಸಿ ಹಾಕಿಬಿಟ್ಟ. ಇದಕ್ಕೂ ಮೇಲಾಗಿ ಅವನ ಪುತ್ರ ಗೌಡರ ತಿಪ್ಪೇಶಿ ಎಂಬ ಲಂಪಟ ಗ್ರಾಮದ ಪ್ರಾಯಸ್ಥ ಹೆಣ್ಣುಮಕ್ಕಳನ್ನೆಲ್ಲಾ ಆಟ ಕಾಯಿಸಿಕೊಂಡು ಮೈಮೇಲೆ ಕೈಹಾಕು ವಷ್ಟರ ಮಟ್ಟಿಗೆ ಪರಿಸ್ಥಿತಿ ಹದಗೆಟ್ಟಿತು. ಹೀಗೆ ಹದೆಗೆಟ್ಟ ಪರಿಸ್ಥಿತಿ ಕಿಸಾನ್ ಸಭಾದ ಕಾರ್ಯಕರ್ತರಾದ ಓಬಳೇಶ ಮತ್ತು ಪಾಂಡುರಂಗಪ್ಪ ಎಂಬ ಸೋದರರು ಕೊಲೆಯಾಗುವ ಹಂತಕ್ಕೆ ತಲುಪಿದೆ.



ಅಕ್ಟೋಬರ್ 11 ರ ಬೆಳಿಗ್ಗೆ 11 ಕ್ಕೆ ತಮ್ಮ ಮನೆಯಲ್ಲಿದ್ದ ಓಬಳೇಶ ಮತ್ತು ಪಾಂಡುರಂಗ ಎಂಬುವರ ಮೇಲೆ ಖುದ್ದು ಸೀತಾರಾಮಗೌಡ, ಅವನ ಮಗ ತಿಪ್ಪೇಶ ನೇತೃತ್ವದ ಆರು ಜನರ ತಂಡ ಮಾರಕಾಸ್ತ್ರಗಳನ್ನು ಹಿಡಿದು ಹಲ್ಲೆ ನಡೆಸಿದ್ದಾರೆ. ಹಲ್ಲೆಕೋರರಿಂದ ತಪ್ಪಿಸಿಕೊಂಡ ಸೋದರರು, ಸುಮಾರು ಐನೂರು ಅಡಿ ದೂರ ಓಡಿದ್ದಾರೆ. ಆದರೆ ಬೆಂಬಿಡದ ಹಂತಕರ ತಂಡ ಇವರನ್ನು ಮಧ್ಯ ದಲ್ಲೇ ಅಡ್ಡಗಟ್ಟಿ, ಕಡಿದು ಕತ್ತರಿಸಿ ಕೊಂದಿದೆ.

ಪೊಲೀಸರೇನೊ ಈ ಬಗ್ಗೆ ದೂರು ದಾಖಲಿಸಿಕೊಂಡಿದ್ದಾರೆ. ಆದರೆ ಇಲ್ಲೂ ಎಂತಾ ಎಂಜಲು ತಿನ್ನೊ ಕೆಲಸ ಮಾಡಿದ್ದಾರೆ ನೋಡಿ; ದೂರು ಹೇಳದಿದ್ದರೂ ವಿನಾಕಾರಣ ಎಫ್‌ಐಆರ್‌ಗೆ 38 ಜನರ ಹೆಸರನ್ನು ಸೇರಿಸಿ, ಪಕ್ಕಾ ಕೊಲೆ ಪ್ರಕರಣವನ್ನು ದೊಂಬಿ ಪ್ರಕರಣದಂತೆ ತಿರುಚಿಬಿಟ್ಟಿದ್ದಾರೆ. ಎಫ್.ಐ.ಆರ್.ನಲ್ಲಿ ಸೆಕ್ಷನ್ 143, 147, 427, 448, 395 ರೆಡ್‌ವಿತ್ (149) ಎಂದು ನಮೂದಿಸಲಾಗಿದೆ. ಇವೆಲ್ಲಾ ಅಕ್ರಮ ಕೂಟ, ದೊಂಬಿ, ಹಲ್ಲೆ, ಸಂಚು ಮುಂತಾ ದವುಗಳಿಗೆ ಸಂಬಂಧ... ಸೆಕ್ಷನ್‌ಗಳು. ಕೊಲೆಗೆ ಸಂಬಂಧಿ... 302 ಸೆಕ್ಷನ್ ಎಫ್‌ಐಆರ್‌ನಲ್ಲಿ ... ಯಾಗಿದೆ.

ಕೇಡಿ ಸೀತಾರಾಮಗೌಡ ... ಸೀಡಿ ಖ್ಯಾತಿಯ ಜನಾರ್ಧನ ರೆ... ಬೆನ್ನ ಹಿಂದೆ ಅಡಗಿದ್ದಾನಂತೆ. ... ರೆಡ್ಡಿಗಾರು ಈ ಸೀತಾರಾಮನದ್ದೊ... ಸೀಡಿ ಮಾಡಿ ಮುಖ್ಯಮ... ಕುಮಾರಸ್ವಾಮಿಗೆ ನೀಡಲಿ. ಬಳ್ಳಾ... ದಕ್ಷ ಅಧಿಕಾರಿ ಎಂದು ಈಪ...


57/2006 11-10-2006
143 147 427 448 395 ... 149
Complainant/Informant
Name
Father's/Husband's Name
Age
Occupation

ದೊಂಬಿ ಮೊಕದ್ದಮೆ ದಾಖಲಿಸಿರುವ ಎಫ್‌ಐಆರ್


ಪರಿಗಣಿಸಲಾಗಿರುವ ಮಹಿಳೆ ಅಮೃತಪಾಲ್ ಎಸ್ಪಿ... ಗಿದ್ದಾರೆ. ಕೂಡ್ಲಿಗಿಯ ಇನ್ಸ್‌ಪೆಕ್ಟರ್ ವಿನ್ಸೆಂಟ್ ಪ್ರಸಾ... ಕೂಡ ಮಾನವೀಯತೆ ಬಲ್ಲವನಂತೆ ಕಾಣುತ್ತಾರೆ. ' ಹತ್ತೊ ಹದಿನೈದು ದಿನಕ್ಕೊ ನಿವೃತ್ತನಾಗುವ ಡಿ... ಗಿರಿಜಾಪತಿಯನ್ನು ಇವರಿಬ್ಬರು ನಿವಾರಿಸಿ ಬದಿಗಿ... ಹುಲಿಕುಂಟೆ ಗ್ರಾಮದಲ್ಲಿ ನೆಮ್ಮದಿ ನೆಲೆಸುತ್ತದೆ.

-ವರದಿಗಾ...


ಕಾಂಗ್ರೆಸ್: ಲಲಿತಾರಾಣಿಗೆ ಪಟ್ಟಾಭಿಷೇಕ!

ಕೊಪ್ಪಳ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರ ಕುರ್ಚಿ ಈಗ ಗಂಗಾವತಿಯ ವೈಟ್‌ಹೌಸ್‌ನಿಂದ ಮಾಜಿ ಶಾಸಕ ಶ್ರೀರಂಗದೇವರಾಯಲು ಮನೆಗೆ ಶಿಫ್ಟಾಗಿದೆ. ರಾಯಲು ಪತ್ನಿ, ಆನೆಗೊಂದಿ ರಾಜಮನೆತದ ಸೊಸೆ ಲಲಿತಾರಾಣಿಗೆ ಅಧ್ಯಕ್ಷ ಸ್ಥಾನವೆಂಬುದು ದೀಪಾವಳಿಯ ಬಂಪರ್ ಬಹುಮಾನದಂತೆ ಅವರ ಬರ್ತಡೇ (ಅಕ್ಟೋಬರ್ 13) ಗಿಫ್ಟಾಗಿ ಬಂದಿದೆ. ತಿಂಗಳ ಹಿಂದೆ ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷ ಸ್ಥಾನ ಪಡೆದಿದ್ದ ರಾಣಿ ಈಗ ಡಿಸಿಸಿಗೆ ಬಂದು ಡಬಲ್ ಲಾಟರಿ ಹೊಡೆದಿದ್ದಾರೆ.


ಕೊಪ್ಪಳ ಜಿಲ್ಲೆಯಾದ 9 ವರ್ಷಗಳ 3 ಅವಧಿಯನ್ನು ಗಂಗಾವತಿಯ ಎಂಎಲ್‌ಸಿ ಶ್ರೀನಾಥರೇ ಅನುಭವಿಸಿದರೆ ಈಗ ನಾಲ್ಕನೆ ಅವಧಿಯೂ ಗಂಗಾವತಿಯ ವೈಟ್‌ಹೌಸ್ ವಿರೋಧಿಗಳೇ ಥಂಡಾ ಹೊಡೆಯುವಂತೆ ಮಾಡಿದೆ. ಕೊಪ್ಪಳ ಕಾಂಗ್ರೆಸ್ ನಾಯಕರಲ್ಲಿ ಈ ಸೀಟು ಪಡೆಯುವ ಯೋಗ್ಯತೆ ಮತ್ತು ತಾಕತ್ತು ಎರಡೂ ಇಲ್ಲವಾ? ಎಂಬ ಪ್ರಶ್ನೆ ಕಾರ್ಯಕರ್ತರನ್ನು ಕಾಡುತ್ತಿದೆ. ಓಲ್ಡ್ ಕಾಂಗ್ರೆಸ್ ಮತ್ತು ನ್ಯೂ ಕಾಂಗ್ರೆಸ್ (ಸಿದ್ದು ಬಣ)ಗೂ ಇದು ಶಾಕಿಂಗ್ ನ್ಯೂಸ್. ಸಿದ್ದು ಕೋಟಾದಲ್ಲಿ ಅಧ್ಯಕ್ಷನಾಗುವ ಆಸೆ ಹೊಂದಿದ್ದ ಹನುಮಂತನಿಗೆ ನಿರಾಶೆಯಾಗಿದೆ.



ವಿರೂಪಾಕ್ಷಪ್ಪ



ಶ್ರೀರಂಗದೇವರಾಯಲು



ಲಲಿತಾರಾಣಿ

ಅಕ್ಟೋಬರ್ 9 ರ ರಾತ್ರಿ ಲಲಿತಾರಾಣಿ ಆಯ್ಕೆ ಆದೇಶ ಹೊರಬಿದ್ದಾಗಿನಿಂದ ಕಾಂಗ್ರೆಸ್ಸಿನ ಪುರುಷರಲ್ಲಿ ಭೂಕಂಪ, ಚಂಡಮಾರುತ, ಸುನಾಮಿ ಏಕಕಾಲಕ್ಕೆ ಅಪ್ಪಳಿಸಿದಂತಹ ಅನುಭವ. ಸೋನಿಯಾ ಗಾಂಧಿಯಂತಹ ಮಹಿಳೆ ಅಧ್ಯಕ್ಷೆ ಆಗಿರುವ ಪಾರ್ಟಿಯ ಈ ಜನಕ್ಕೆ ಲಲಿತಾರಾಣಿಯ ಆಯ್ಕೆಯನ್ನು ಆಕೆ ಮಹಿಳೆ ಎಂದೇ ಸಹಿಸಲಾಗುತ್ತಿಲ್ಲ, ಅಂದರೆ ಆ ಮಟ್ಟಿಗೆ ಇವರ ಸೋನಿಯಾ ಗುಣಗಾನ ನೆಪಮಾತ್ರಕ್ಕೆ ಎಂಬುದು ಬಯಲಾಗಿದೆ. ಅನಾದಿ ಕಾಲದಿಂದಲೂ ಕರ್ನಾಟಕದ ಕಾಂಗ್ರೆಸ್‌ನ ಭದ್ರಕೋಟೆಗಳಲ್ಲೊಂದು ಎನಿಸಿದ್ದ ಕೊಪ್ಪಳದಲ್ಲಿ ಇವತ್ತು ಆಂತರಿಕ ಒಡಕಿನಿಂದ ಬರೀ ಎರಡು ಸೀಟು ಗೆದ್ದು ಅಸ್ತಿತ್ವಕ್ಕೆ ಹರಸಾಹಸ ಮಾಡುತ್ತಿರುವ ಸಂದರ್ಭದಲ್ಲಿ ಅಧ್ಯಕ್ಷ ಪೀಠ ಬಂದಿರುವುದು ರಾಣಿಗೆ ಚಾಲೆಂಜಿಂಗ್! ಇಂತಹ ಒಂದು ಬದಲಾವಣೆಗೆ ಮೂರು ವರ್ಷಗಳಿಂದ ಮಾಜಿ ಮಂತ್ರಿ ಮಲ್ಲಿ, ಬಸವರಾಜ ರಾಯರೆಡ್ಡಿ, ವಿರೂಪಾಕ್ಷಪ್ಪ ಒಳಗೊಳಗೆ ಕೈಹಾಕಿದ್ದರು. ಡಿಸಿಸಿ ಅಧ್ಯಕ್ಷ ಮತ್ತು ಎಂಎಲ್‌ಸಿಯಾಗಿರುವ ವೈಟ್‌ಹೌಸ್‌ನ ಶ್ರೀನಾಥನನ್ನು ಇಳಿಸಲು ಇವರು ತಮ್ಮ ಕೆಪಾಸಿಟಿಗಿಂತ ಹೆಚ್ಚಾಗಿ ಒಬ್ಬರಿಗೆ ಒಂದೇ ಹುದ್ದೆ ಎಂಬ ನಿಯಮದ ಮೊರೆ ಹೋಗಿದ್ದರು. ಯಾವಾಗ ಮಲ್ಲಿಕಾರ್ಜುನ ಖರ್ಗೆ ಕೆಪಿಸಿಸಿ ಅಧ್ಯಕ್ಷರಾದರೋ ಅಂದಿನಿಂದ ಶ್ರೀನಾಥನ ಕುರ್ಚಿಯ ಕಾಲು ಮುರಿಯಲು ರೆಡಿಯಾಗಿದ್ದರು. ಇತ್ತೀಚಿಗೆ ಅಧ್ಯಕ್ಷ ಸ್ಥಾನ ಕೈ ತಪ್ಪುವ ಸಿಗ್ನಲ್ ಗೊತ್ತಾಗಿಯೇ ಶ್ರೀನಾಥ ತಮ್ಮ ಉತ್ತರಾಧಿಕಾರಿಯಾಗಿ ಮಾಜಿ ಎಂಎಲ್‌ಸಿ ಕರಿಯಣ್ಣನನ್ನು ಬ್ಯಾಕ್‌ವರ್ಡ್ ಕೋಟಾದಲ್ಲಿ, ಆಸೀಫ್ ಅಲಿಯನ್ನು ಮೈನಾರಿಟಿ ಕೋಟಾದಲ್ಲಿ ರೇಸ್‌ಗೆ ಬಿಟ್ಟಿದ್ದರು. ಶಾಸಕರುಗಳಾದ ರಾಯರೆಡ್ಡಿ, ಹಿಟ್ನಾಳ, ಎಂಪಿ ವಿರುಪಾಕ್ಷಪ್ಪ ಇವರು ಮುದುಗಲ್ ಶಾಂತಣ್ಣನನ್ನು ಬಿಟ್ಟಿದ್ದರು. ಅತ್ತ ಅದೇ ಗಂಗಾವತಿಯ ಮಾಜಿ ಮಂತ್ರಿ ಮಲ್ಲಿ ತಾನೂ ಅಧ್ಯಕ್ಷನಾಗಲು ಓಡಾಡಿ ದಣಿದನೆ ಹೊರತು ಲಾಭವಾಗಲಿಲ್ಲ. ಈ ಎಲ್ಲರೂ ಎಸೆದ ಮದ್ದು-ಗುಂಡುಗಳೆಲ್ಲ ಠುಸ್ ಆದಾಗ ಮಹಿಳಾ ಕೋಟಾದಲ್ಲಿ ಲಲಿತಾ ರಾಣಿ ಪೀಠಕ್ಕೆ ಬಂದದ್ದು ಕಾಂಗ್ರೆಸ್‌ನ ಗಂಡಸರಿಗಲ್ಲ, ಕೊಪ್ಪಳದ ಕೆಲ ಮಹಿಳಾ ಘಟವಾಣಿಗಳಿಗೂ ಹೆಂಗೆಂಗೋ ಆಗುತ್ತಿದೆ. ಒಟ್ಟನಲ್ಲಿ ವೈಟ್‌ಹೌಸ್‌ನ ಅಂಗಳದಲ್ಲಿ ಮಿಂಚು.

ಹಾಗಂತ ಲಲಿತಾರಾಣಿ ನಾಲ್ಕು ಗೋಡೆ ಮಧ್ಯೆ ಕುಳಿತವರಲ್ಲ. ಪತಿ ಶಾಸಕರಾಗಿದ್ದರೂ 1987 ರಲ್ಲಿ ಜಿಲ್ಲಾ ಪರಿಷತ್ ಮೆಂಬರ್, 1992 ರಲ್ಲಿ ಗಂಗಾವತಿ ತಾಲ್ಲೂಕು ಪಂಚಾಯ್ತಿ ಮೆಂಬರ್, ಕೆಪಿಸಿಸಿ ಮೆಂಬರ್ ಆಗಿದ್ದವರು. ಹಾಗೇ ನೂರಾರು ಸ್ವ-ಸಹಾಯ ಗುಂಪುಗಳ ರಚಿಸಿದವರು. ಇವರ ಪತಿ ಶ್ರೀರಂಗದೇವರಾಯಲು ಸತತ ಐದು ಬಾರಿ ಶಾಸಕರಾದವರು. ಇವರನ್ನು ಸೋಲಿಸಿದ್ದು ಅವರ ಪಾರ್ಟಿ ಬಿಟ್ಟು ಬಂದ ಹುಡುಗ, ಇವತ್ತಿನ ಸಚಿವ ಇಕ್ಬಾಲ್ ಅನ್ಸಾರಿ.

ಕೊಪ್ಪಳ

ಗಂಗಾವತಿಯಲ್ಲಿ ಕಾಂಗ್ರೆಸ್ ಸೋಲು ಒಂದೆಡೆ, ವೈಟ್‌ಹೌಸ್‌ನ ಧಣಿ ರಾಮುಲು ರಾಜಕಾರಣಕ್ಕೆ ನಿವೃತ್ತಿ ಹೇಳಿದ್ದರಿಂದ ಜಿಲ್ಲೆಯಲ್ಲಿ ಎರಡು ಕಡೆ ಮಾತ್ರ ಕಾಂಗ್ರೆಸ್ ಗೆದ್ದಿತು. ಆಗ ಹುಟ್ಟಿದ್ದೇ ಮಲ್ಲಿ, ರಾಯರೆಡ್ಡಿ, ವಿರುಪಾಕ್ಷಪ್ಪ ಗ್ಯಾಂಗ್. ಇವರ ಸರ್ಕಸ್ ಮಧ್ಯೆ ಲಲಿತಾರಾಣಿ ಅಧ್ಯಕ್ಷರಾಗಿದ್ದು ಗರಬಡಿದ ವಾತಾವರಣ ಉಂಟಾಗಿದೆ.

ಕೊಪ್ಪಳ ಕಾಂಗ್ರೆಸ್‌ನಲ್ಲಂತೂ ಸ್ಮಶಾನ ಮೌನ! ... ನಕ್ಕರೆಂದು, ಧರಂಸಿಂಗ್ ಸಿಟ್ಟಿಗೆದ್ದರೆಂದು ಅಭಿನಂ... ಹೇಳಿಕೆ ನೀಡಬೇಕು ಎನ್ನುವ ಲೀಡರ್‌ಗಳು ಇಲ್ಲಿ... ಸರಳ, ಸೌಜನ್ಯದ ಗಂಡನ ಯಶಸ್ಸಿಗೆ ಕಾರಣವಾ... ಲಲಿತಾರಾಣಿಗೆ ಇಂದು ಒಂದೂ ಅಭಿನಂದನೆ ... ಆದರೆ ಕಾಂಗ್ರೆಸ್‌ನ ಸಾಮಾನ್ಯ ಕಾರ್ಯಕರ್ತ ... ರಾಣಿ ಆಯ್ಕೆಯನ್ನು ಸಮರ್ಥಿಸಿಕೊಳ್ಳಲು ಹೋ... ಆತನ ಧ್ವನಿ ಕೇಳಲು ಕಾಂಗ್ರೆಸ್‌ನವರಿಗೆ ಕಿವಿ... ಇಲ್ಲ "ನಾವು ಬೇರೆ ಯಾವ ಲೀಡರ್ ಮನೆಗೆ ಹೋ... ಒಂದು ಗ್ಲಾಸ್ ನೀರು ಸಿಗೋಲ್ಲ. ಆದರೆ ಲಲಿತಾ... ಮನೆಯಲ್ಲಿ ಜ್ಯೂಸ್ ಸಿಗುತ್ತಿತ್ತು, ನಮ್ಮ ಕಷ್ಟ ಕೇಳು... ಇಷ್ಟು ಸಾಕು ನಮಗೆ" ಅನ್ನುವ ಕಾರ್ಯಕರ್ತರು ಇ... ಸಮ್ಮಿಶ್ರ ಸರ್ಕಾರದಲ್ಲಿ ಬಿಜೆಪಿ-ಜೆಡಿಎಸ್ ಕಾರ್ಯಕ... ಗುತ್ತಿಗೆ ಕೆಲಸಗಳಿಂದ ದುಂಡಾಗುತ್ತಿರುವುದು ನೋ... ಇಂತಹ ಅವಕಾಶ ನಮಗೆ ಯಾಕೆ ಕೊಡೋಲ್ಲ ... ನಾಯಕರು ಅಂತ ಹಳಹಳಿಸುತ್ತಿದ್ದಾರೆ.


ಪೇಷೆಂಟ್‌ನಂತಾಗಿರುವ ಜಿಲ್ಲಾ ಕಾಂಗ್ರೆಸ್‌ಗೆ ಜ್ಯೂಸ್ ಕೊಟ್ಟು ಚೈತನ್ಯ ತುಂಬುವ ಸವಾಲಿನ ... ಲಲಿತಾರಾಣಿಯವರದು. 'ಹಸ್ತ'ದ ಐದು ಬೆರಳುಗ... ಪ್ರತ್ಯೇಕ ಐದು ಗುಂಪಾಗಿರುವ ಲೀಡರ್‌ಗಳನ್ನು ... ಸುವ, ಕೊಪ್ಪಳದಲ್ಲಿ ಒಂದು ಆಫೀಸ್ ಮಾಡ... ಸತ್ತು ಹೋಗಿರುವ ವಿವಿಧ ಘಟಕಗಳಿಗೆ ಮರುಜ... ನೀಡುವ ಕೆಲಸವಾಗಬೇಕದೆ. ಬೇಡಿಕೆಗಳ ಪಟ್ಟಿ ಹಿ... ಕಾರ್ಯಕರ್ತರು ಕಾಯುತ್ತಿದ್ದಾರೆ. ಯಾವುದೇ ಕ್ಷಣ... ವಿಧಾನಸಭೆ ತಪ್ಪಿದರೆ ಮುನ್ಸಿಪಲ್ ಚುನಾವಣೆ ಬ... ವಾತಾವರಣದಲ್ಲಿ ಒಬ್ಬ ಮಹಿಳೆ ಜಿಲ್ಲಾ ಕಾಂ... ಅಧ್ಯಕ್ಷ ಸ್ಥಾನಕ್ಕೆ ಬಂದಿದ್ದಾರೆ. ಮುಂದಿರುವುದು ... ಹೂವಿನ ಹಾದಿಯಲ್ಲ, ಕಾಂಗ್ರೆಸ್‌ನ ಎಲ್ಲ ಗುಂ... ಬೋರಲು ಬಿದ್ದರೆ, ಒಬ್ಬ ಮಹಿಳೆ ಅಧ್ಯಕ್ಷಳಾದ... ಈಕೆಯನ್ನು ಹಗುರವಾಗಿ ನೋಡುವಂತಿಲ್ಲ ... ಜೆಡಿಎಸ್-ಬಿಜೆಪಿಗಳೂ ಪಿಳಿಪಿಳಿ ಕಣ್ಣು ಬಿಡುತ್ತ ... ಕುಳಿತಿವೆ. ಒಟ್ಟನಲ್ಲಿ ಇನ್ಮುಂದೆ ಲಲಿತಾರಾಣಿಗೆ ಆ... ವಾಗಲಿದೆ ಚಾಲೆಂಜಿಂಗ್ ಸಮಯ.

-ವ...


ಪುರುಷ ಹಿಂಸೆಯ ಬಲಿಪಶು ಎಂದಾದರೆ, ಮಹಿಳೆ ಅದಕ್ಕಿಂತಲೂ ಮಿಗಿಲಾದ ಹಿಂಸೆಯನ್ನು ಅನುಭವಿಸುತ್ತಿದ್ದಾಳೆ -ಗಿಸೆಲೆ ಹಾಲಿಮಿ

ಈ ಮಠದಲ್ಲಿ ಖೋಟಾನೋಟೇ ಪ್ರಸಾದ

ಧರ್ಮಸಿಂಗ್ ಭಕ್ತಿ!



ಧರ್ಮಸಿಂಗ್



ಅಲ್ಲಮಪ್ರಭು ಪಾಟೀಲ

ಗುಲ್ಬರ್ಗಾ ಜಿಲ್ಲೆಯಾದ್ಯಂತ ಖೋಟಾನೋಟಿನ ವಾಸನೆ ...ವಾಗಿ ಹಬ್ಬಿದೆ. ಈ ವಾಸನೆಯು ಮಾಜೀ ...ಖ್ಯಮಂತ್ರಿ ಧರ್ಮಸಿಂಗ್‌ರವರು ಬಹುವಾಗಿ ನಂಬಿರುವ ...ತ್ತು ನಡೆದುಕೊಳ್ಳುವ ಯಲಗೋಡದ ಶಿವಯೋಗ ...ಭುಸ್ವಾಮಿ ಮಠದ ನಡುಮನೆಯಿಂದಲೇ ಬರುತ್ತಿರು...ದು ನಾನಾ ಸಂಶಯ ಮತ್ತು ಕಥೆಗಳು ಹಬ್ಬಲು ...ಣವಾಗಿದೆ.

...ಇದೆಲ್ಲಾ ಆರಂಭವಾಗಿದ್ದು ಜೇವರ್ಗಿ ತಾಲ್ಲೂಕಿನ ...ಮನಾಥನಹಳ್ಳಿಯ ಗುರು ಎಂಬ ಗೊಬ್ಬರ ಮತ್ತು ...ಜದ ವ್ಯಾಪಾರಿ ಒಂದು ಸಾವಿರ ರೂಪಾಯಿ ಖೋಟಾ ...ಟು ಚಲಾಯಿಸಲು ಹೋಗಿ ಸಿಕ್ಕಿಬಿದ್ದಾಗ. ಹೀಗೆ ...ಬಿದ್ದ ಗುರುವನ್ನು ಪೊಲೀಸರು ಹಿಡಿದು 'ಲೈಟಾಗಿ' ...ಚಾರಿಸಿದಾಗ "ಈ ನೋಟನ್ನು ನನಗೆ ಯಲಗೋಡದ ...ಯೋಗ ಪ್ರಭುಸ್ವಾಮಿ ಮಠದ ಗುರುಲಿಂಗ ದೇವರು ...ಟಿದರು" ಎಂದು ಆತ ಬಾಯಿಬಿಟ್ಟ.

ಈ ಪ್ರಕರಣ ಆ ಕ್ಷಣಕ್ಕೇನೊ ಅವರಿವರ ಮಧ್ಯಸ್ತಿಕೆ...ಂದ ಮುಚ್ಚಿಹೋಯಿತು. ಆದರೆ ಈ ಖೋಟಾ ...ಟಿನ ಹಿಂದೆ ಇದ್ದನೆನ್ನಲಾದ ಗುರುಲಿಂಗದೇವ ...ಮಿಯ ಹಿನ್ನೆಲೆ, ಅವನ ಲಿಂಕ್‌ಗಳು ಮತ್ತವನ ಜಾಲದ ... ಇಡೀ ಜಿಲ್ಲೆಯಲ್ಲಿ ಗುಸು ಗುಸು ಆರಂಭವಾಗಿ ...ಗ ಮುಖ್ಯಮಂತ್ರಿ ಧರ್ಮಸಿಂಗ್ ಮತ್ತು ಅವರ ...ಗೈ ಬಂಟ, ಜಿಲ್ಲಾ ಪಂಚಾಯತಿಯ ಮಾಜಿ ಅಧ್ಯಕ್ಷ ...ಗೂ ಹಾಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಅಲ್ಲಮಪ್ರಭು ...ಟೀಲರ ಮನೆ ಹೊಸ್ತಿಲಿಗೆ ಬಂದು ನಿಂತಿದೆ.

ಸುಮಾರು 15 ವರ್ಷದ ಹಿಂದೆ ಇದೇ ಜೇವರ್ಗಿಯ ...ಮೀಪದ ಕಾಕಂಡಕಿ ಮಠಕ್ಕೆ ಆಗಮಿಸಿ ಮೌನವ್ರತ ...ಷ್ಠಾನ ಕೈಗೊಳ್ಳುತ್ತೇನೆ ಎಂದು ವೇಷ ಧರಿಸಿ ಕೂತವನು ...ರುಲಿಂಗ. ಅಲ್ಲಿಂದ ಯಲಗೋಡು ಸಮೀಪದ ...ಮಾನಂದ ಗುಡಿಯ ಪಕ್ಕದಲ್ಲಿನ ಎರಡು ಎಕರೆ ...ಗವನ್ನು ಕಬಳಿಸಿ ಅಲ್ಲಿ ಅದ್ವೇಗೆ ಶಿವಯೋಗ ಮಠ ...ದ ಎಂಬುದು ಇಂದಿಗೂ ನಿಗೂಢ.

ಆದರೆ ಎರಡು ವರುಷದಿಂದೀಚೆಗೆ, ಅದರಲ್ಲೂ ಧರ್ಮಸಿಂಗ್ ಮುಖ್ಯಮಂತ್ರಿಯಾದ ನಂತರ, ಈತ ಮತ್ತು ಮಠ ಅಪಾರವಾಗಿ ಬೆಳೆದಿರುವುದಂತೂ ನಿಜ. ಹಿಂದೆ ಕೇವಲ ಎರಡು ಎಕರೆ ಪ್ರದೇಶದಲ್ಲಿದ್ದ ಸದರಿ ಮಠ, ಈಗ ಪಕ್ಕದಲ್ಲಿ ಮತ್ತೊಂದು ಎಂಟು ಎಕರೆ, ಮಂಗಳೂರಿನಲ್ಲಿ ಎರಡು ಎಕರೆ, ಬೆಂಗಳೂರಿನಲ್ಲಿ 40X60ರ ಎರಡು ನಿವೇಶನ ಮತ್ತು ನಾಗರಹಳ್ಳಿಯಲ್ಲಿ ಪ್ರೈಮರಿ ಶಾಲೆ ಸ್ಥಾಪಿಸಿರುವುದೇ ಇದಕ್ಕೆ ಸಾಕ್ಷಿ.

ಇಂತಾ ಗುರುಲಿಂಗ ಮಠದ ಸ್ವಾಮೀಜಿಯಾಗಲು ಆತನಿಗಿರುವ ಹಿನ್ನೆಲೆಯಾದರೂ ಏನು? ಜಾತಿಯಲ್ಲಿ ಈತ ಗಾಣಿಗ ಲಿಂಗಾಯತ ಎಂದು ಹೇಳಿಕೊಳ್ಳುತ್ತಾನೆ. ಆದರೆ ಇವನ ಪೂರ್ವಾಪರ ಬಲ್ಲವರ ಪ್ರಕಾರ ಗುರುಲಿಂಗ ಮೂಲತಃ ಮಹಾರಾಷ್ಟ್ರದ ಅರಲಕೋಟೆಯ ಎಡಗಿಲ್ ಸಮೀಪದ ನಾಗಸೂರಿನವನು. ಮೊದಲು ಲಾರಿ ಕ್ಲೀನರ್ ಆಗಿದ್ದ, ನಂತರ ಡ್ರೈವರ್ ಆಗಿ ಬಡ್ತಿ ಪಡೆದಿದ್ದ. ಆ ನಂತರ ಕೆಲವರ್ಷ ನಾಪತ್ತೆಯಾಗಿದ್ದವನು ನಂತರ ಕಾಣಿಸಿಕೊಂಡಿದ್ದೇ ಮೌನವ್ರತಧಾರಿಯಾಗಿ ಕಾಕಂಡಕಿ ಮಠದಲ್ಲಿ.



ಗುರುಲಿಂಗ

ಹೋಗಲಿ ಇವನಿಗಿರುವ ವಿದ್ವತ್ತು, ಶಕ್ತಿಯಾದರೂ ಏನು? ಎಂದರೆ "ನಾನೊಬ್ಬ ಆಧುನಿಕ ವಚನಕಾರ" ಎಂದು ಹೇಳಿಕೊಳ್ಳುವ ಗುರುಲಿಂಗ "ಪರಂಜ್ಯೋತಿ" ಸೇರಿದಂತೆ ಸುಮಾರು 9 ಕೃತಿಗಳನ್ನು ರಚಿಸಿದ್ದಾನಂತೆ. ಅಸಲಿ ವಿಚಾರವೆಂದರೆ ಇದನ್ನು ಬರೆಯಲು ಸಹ ದುಡ್ಡು ಕೊಟ್ಟು ಮತ್ತೊಬ್ಬನನ್ನು ಇಟ್ಟುಕೊಂಡಿದ್ದಾನೆ. ಇವನ ಮಠಕ್ಕೆ ಸ್ಥಳೀಯ ಭಕ್ತಾದಿಗಳೂ ಇಲ್ಲ, ಯಲಗೋಡಿನ ಒಬ್ಬನೇ ಒಬ್ಬ ಗ್ರಾಮಸ್ಥನೂ ಇವನ ಮಠಕ್ಕೆ ಕಾಲಿಡುವುದಿಲ್ಲ. ಯಲಗೋಡಿಗೆ ಬಹುದೂರದ ಚ್ಯಾಮನಾಳ, ಕೊಡತಿ ಮತ್ತು ಹಾರ್‍ಯಾಳ ಗ್ರಾಮದ ಸ್ವಜಾತಿಯ ಗಾಣಿಗ ಲಿಂಗಾಯತ ಕೆಲವು ಭಕ್ತರಷ್ಟೆ ಇವನ ಮಠಕ್ಕೆ ಸಂದರ್ಶಕರು.

ಆದರೇನು; ಖುದ್ದು ಕಾಂಗ್ರೆಸ್ ನಾಯಕ ಧರ್ಮಸಿಂಗ್ ಈ ಮಠಕ್ಕೆ ಬರುತ್ತಿದ್ದರು. ಈಗಲೂ ಮಾಜಿ ಮುಖ್ಯಮಂತ್ರಿಯಾಗಿಯೂ ಬರುತ್ತಿದ್ದಾರೆ. ಅವರ ಬಲಗೈ ಅಲ್ಲಮಪ್ರಭು ಪಾಟೀಲ್, ಎಡಗೈಗಳು ಎಲ್ಲರೂ ಬರುತ್ತಾರೆ. ಅಂದಮೇಲೆ ಬೇರೆಯವರು ಬಂದರೆಷ್ಟು, ಬಿಟ್ಟರೆಷ್ಟು. ಗುಲ್ಬರ್ಗಾ ಜಿಲ್ಲೆಯಲ್ಲಿ ನೆಲೋಗಿ, ಜೇವರ್ಗಿ, ಸೊನ್ನ, ಕುಕುನೂರು, ಹಿಪ್ಪರಗಿ, ಖಾಕಾಪುರ ಮತ್ತು ಯಲಗೋಡು ಸೇರಿದಂತೆ ಸುಮಾರು 13 ಪ್ರತಿಷ್ಠಿತ ಮಠಗಳಿವೆ. ಈ ಮಠದವರು ಸದರಿ ಗುರುಲಿಂಗನ ಹೆಸರು ಕೇಳಿದರೆ ಸಾಕು ಮೈಮೇಲೆ ಹಾವು ಬಿದ್ದವರಂತೆ ಜಿಗಿಯುತ್ತಾರೆ. ಅಂತ ಕುಖ್ಯಾತಿ ಇವನದು.

ಧರ್ಮಸಿಂಗ್ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಗುರುಲಿಂಗನ ಹೆಸರು ಕೆಲವು ವಲಯಗಳಲ್ಲಿ ಖ್ಯಾತಿ ಮತ್ತು ಕುಖ್ಯಾತಿಯನ್ನು ಗಳಿಸಿತು. ಆಗ ಗುರುಲಿಂಗ ಸದ್ದಿಲ್ಲದೆ ಡಬ್ಲಿಂಗ್ ದಂಧೆಗೆ ಕೈ ಇಟ್ಟಿದ್ದ. ಈ ದಂಧೆ ಅದ್ಯಾವ ಕಾಲದಿಂದ ನಡೆಯುತ್ತಿತ್ತೋ? ಅಂತೂ ಈಗ ಒಂದು ಸಣ್ಣ ಎಡವಟ್ಟಿನಿಂದ ಬಹಿರಂಗವಾಗಿದೆ. ಆದರೆ ಇದು ಒಂದು ರೀತಿಯಲ್ಲಿ ಗುರುಲಿಂಗನಿಗೆ ವರವಾಗಿ ಪರಿಣಮಿಸಿತು ಎನ್ನಿ.

ಪದೇ ಪದೇ ಮಹಾರಾಷ್ಟ್ರ ಪ್ರವಾಸ ಮಾಡಿ ಬರುತ್ತಿದ್ದ ಗುರುಲಿಂಗ ಒಮ್ಮೆ ಜೇವರ್ಗಿಯ ಶ್ರೀಮಂತರೊಬ್ಬರಿಂದ 2 ಲಕ್ಷ ರೂಪಾಯಿಗೆ 4 ಲಕ್ಷ ರೂಪಾಯಿ ಕೊಡುತ್ತೇನೆಂದು ಹಣ ಪಡೆದು ಮಹಾರಾಷ್ಟ್ರಕ್ಕೆ ಹೋದ. ವಾರ ಕಳೆದ ನಂತರ ಹ್ಯಾಪು ಮೋರೆ ಹಾಕಿಕೊಂಡು ಬಂದ ಗುರುಲಿಂಗ, "ಯಾರೋ ದುರಾತ್ಮರು ನೀವು ಕೊಟ್ಟಿದ್ದ ಎರಡು ಲಕ್ಷ ರೂಪಾಯಿಯನ್ನು ಕಸಿದುಕೊಂಡು ವಂಚಿಸಿದರು" ಎಂದು ಗೋಳಾಡಿದ.

ಇದು ನಿಜವೋ, ಸುಳ್ಳೋ ದುಡ್ಡು ಕೊಟ್ಟ ಶ್ರೀಮಂತರು ಒಪ್ಪಬೇಕಲ್ಲ, ಆದರೆ ಗುರುಲಿಂಗನ ಹಿಂದೆ ಖುದ್ದು ಮುಖ್ಯಮಂತ್ರಿಗಳೇ ಇದ್ದಾಗ ಅವನಿಂದ ವಸೂಲಿ ಮಾಡುವುದು ಹೇಗೆ? ಆದರೆ ಇಂತಾ ವ್ಯವಹಾರಕ್ಕೆ ಹೇಳಿಮಾಡಿಸಿದಂತೆ ಜೇವರ್ಗಿ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಹುಲ್ಲೂರ್ ಸಾಹೇಬರು ಇದ್ದರಲ್ಲ, 15 ವರ್ಷದಿಂದ ಧರ್ಮು ಆಶೀರ್ವಾದದಿಂದ ಅಲ್ಲೇ ಗೂಟಕ್ಕೆ ನೇತಾಡುತ್ತಿದ್ದ ಹುಲ್ಲೂರು ಸಾಹೇಬರು, ಈ ಡೀಲ್ ವಹಿಸಿಕೊಂಡರು.

ಶ್ರೀಮಂತರ ಅದೃಷ್ಟವೋ, ಗುರುಲಿಂಗನ ತಪಸ್ಸಿನ ಫಲವೋ ಹುಲ್ಲೂರು ಸಾಹೇಬರು 4 ಲಕ್ಷ ವಸೂಲಿ ಮಾಡೇಬಿಟ್ಟರು. ಅದರೊಂದಿಗೆ, "ಇದರಲ್ಲಿ ಗುರುಲಿಂಗನ ತಪ್ಪೇನಿಲ್ಲ, ಖೋಟಾನೋಟಿನ ಖದೀಮರೇ ಗುರುಲಿಂಗನಿಗೆ ಟೋಪಿ ಇಟ್ಟಿದ್ದರು. ಇನ್ನುಮುಂದೆ ಈ ರೀತಿ ಮಾಡುವುದಿಲ್ಲವೆಂದು ಮಾತು ನೀಡಿದ್ದಾರೆ" ಎಂದು ಶುಭ ಸಂದೇಶವನ್ನು ತಂದಿದ್ದರು. ಅಲ್ಲಿಂದ ಆರಂಭವಾಯ್ತು ನೋಡಿ ಗುರುಲಿಂಗ ಮತ್ತು ಇನ್ಸ್‌ಪೆಕ್ಟರ್ ಹುಲ್ಲೂರರ ಜಂಟಿ ಕಾರ್ಯಾಚರಣೆ.

ಅದು ಈಗ ಎಲ್ಲಿಗೆ ಬಂದು ಮುಟ್ಟಿದೆಯೆಂದರೆ ಮಹಾರಾಷ್ಟ್ರದವರೊಂದಿಗೆ ಅನೇಕ ವರ್ಷಗಳಿಂದ ಡೀಲ್ ಮಾಡಿ ಪಳಗಿರುವ ಗುರುಲಿಂಗ ಈಗ ತಾನೇ ಸ್ವಂತ ಮಿಷನ್ ತಂದು ಮಠದಲ್ಲಿ ಸ್ಥಾಪಿಸಿದ್ದಾನೆ ಎಂದು ಸುದ್ದಿ ಹಬ್ಬಿದೆ. ಗೊಬ್ಬರದ ವ್ಯಾಪಾರಿ ಗುರುವಿನ ಬಳಿ ಸಿಕ್ಕಿದ ಒಂದು ಸಾವಿರ ರೂಪಾಯಿ ನೋಟು ಅದೇ ಹೊಸಾ ಯಂತ್ರದಲ್ಲಿ ಮುದ್ರಣವಾದುದು ಎಂದು ಜನ ಹೇಳುತ್ತಿದ್ದಾರೆ.

ಇವೆಲ್ಲದರ ಮಧ್ಯೆ ಶಿವಯೋಗ ಪ್ರಭುಸ್ವಾಮಿ ಮಠದ ಪ್ರಮುಖ ಭಕ್ತ ಧರ್ಮಸಿಂಗ್‌ರವರು ಈಗ ಅಧಿಕಾರದಲ್ಲಿಲ್ಲ. ರಾಜ್ಯದಲ್ಲಿ ಅಧಿಕಾರದಲ್ಲಿರುವುದು ಬಿಜೆಪಿ ಮತ್ತು ಜೆಡಿಎಸ್ ಸಮ್ಮಿಶ್ರ ಸರ್ಕಾರ. ಹೀಗಾಗಿ ಗುರುಲಿಂಗನ ಮಠದ ವೈರಿ ಆದ ಬಿಜೆಪಿಯ ಜೇವರ್ಗಿ ತಾಲ್ಲೂಕು ಅಧ್ಯಕ್ಷ ಮಲ್ಲಿನಾಥಗೌಡ, ಸಮಯ ಕಾಯುತ್ತಿದ್ದಾರಂತೆ. ಗುರುಲಿಂಗ ಮಾಲು ಸಹಿತ ಸಿಕ್ಕಿಬೀಳಲಿ ಎಂಬುದು ಅವರ ಆಸೆ. ಇದು ಈಡೇರುತ್ತದೋ ಇಲ್ಲವೋ ನಾಗರಿಕರು ಕಾತುರದಿಂದ ಕಾಯುತ್ತಿದ್ದಾರೆ.

-ವರದಿಗಾರ

ದಾವಣಗೆರೆ : ಕಮ್ಯುನಿಸ್ಟರು ಮತ್ತು ಕಿರೀಟ

...ಅಿರಸೊತ್ತಿಗೆ ಮತ್ತು ಊಳಿಗಮಾನ್ಯ ಸಂಸ್ಕೃತಿಗೆ ...ಕವಾಗಿರುವ ಕಿರೀಟಕ್ಕೂ, ಕಮ್ಯುನಿಸ್ಟರಿಗೂ ...ಮ ಸಂಬಂಧ? ಕೆಲವು ಅವಕಾಶಗಳಿಗಾಗಿ ...ತಹ ಸಂಬಂಧ ಬೇಕು ಎಂದು ಹಾತೊರೆ...ತ್ತಿದೆ ಭಾರತೀಯ ಕಮ್ಯುನಿಸ್ಟ್ ಪಕ್ಷ! ವರ್ಗ ...ಸುರಸ್ಕ ಸಿದ್ಧಾಂತವನ್ನು ಯಾವತ್ತೋ ...ವದಿಸಿಕೊಂಡು ಅಡ್ಡದಾರಿ ಹಿಡಿದಿದ್ದ ಈ ... ಈಗ ಕೆಂಬಾವುಟವನ್ನು ಗಟಾರದಲ್ಲಿ ಅದ್ದಿ...ದು ಅದರ ದುರ್ವಾಸನೆಯನ್ನೇ ...ವಾಸನೆಯೆಂದು ಹೀರಲು ಪ್ರಾರಂಭಿಸಿದೆ! ತತ್ವ ...ಸಿದ್ಧಾಂತಗಳೊಂದು ಕಡೆ ಇರಲಿ, ದುಡಿಯುವ ...ವದ ಸಂಸ್ಕೃತಿಯ ಅರಿವೂ ಇಲ್ಲದೆ ಶೋಷಕ ...ಸ್ಕೃತಿಯನ್ನು ಪ್ರತಿಪಾದಿಸುವ 'ಎಳೆಡೆ ಸರ್ಪದ ... ಕಿರೀಟ'ವನ್ನು ಮಾಡಿಸಿ, ಅದರ ಬುಡಕ್ಕೆ ...ಮಹ ಜೀವಿ ಬಸವಣ್ಣನವರ 'ಕಾಯಕವೇ ಕೈಲಾಸ' ...ಬ ವಾಕ್ಯವನ್ನು ಬರೆಸಿ ದುಡಿಯುವ ವರ್ಗದ ...ಸಂಘಟನೆಯಿಂದ ಮಾಲೀಕನೊಬ್ಬನಿಗೆ ಕಾಣಿಕೆಯಾಗಿ ...ರ್ಪಿಸುವುದಿದೆಯಲ್ಲ! ಇದಕೇನೆನ್ನಬೇಕು?

ಹೆಂಡ ಬೇರೆ ಬಾಟಲಿ ಒಂದೇ!

19-10-2006ರಂದು ಸಿಪಿಐ ಪಕ್ಷದ ಅಂಗ ...ಯಾದ ಎಐಟಿಯುಸಿ ಪತಿಯಿಂದ 'ದಾವಣಗೆರೆ ...ರ್ ಕಂಪನಿ ಎಂಪ್ಲಾಯಿಸ್ ಅಸೋಸಿಯೇಷನ್'ನ ... ರಜತ ಮಹೋತ್ಸವದ ಅಭಿನಂದನಾ ಸನ್ಮಾನ ...ಸಮಾರಂಭವನ್ನು ದಾವಣಗೆರೆಯ ಪಕ್ಕದಲ್ಲಿರುವ ...ಭವನದಲ್ಲಿ ಹಮ್ಮಿಕೊಳ್ಳಲಾಗಿತ್ತು. ಶಾಮನೂರು ...ಶಿವಶಂಕರಪ್ಪ (ಎಸ್.ಎಸ್.) ಮಾಲೀಕತ್ವದ ಸಕ್ಕರೆ ಕಾರ್ಖಾನೆ ... ಇರುವುದರಿಂದ ಕಾರ್ಖಾನೆಯ ಪಕ್ಕದಲ್ಲೇ ... ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ... ಈ ಸನ್ಮಾನ ಸಮಾರಂಭದ 'ಪ್ರಮುಖ' ಸನ್ಮಾನಿತರು ... ಹಾಗೂ ಅವರ ಮಕ್ಕಳೇ ಆಗಿದ್ದರು! ... ಮಾಲೀಕರಿಗೆ ಸನ್ಮಾನ ಮಾಡುತ್ತಿರುವ



ಕಾರ್ಮಿಕಗಳಿಂದ ಮಾಲೀಕರಿಗೆ ಗೌರವ

ಬಗ್ಗೆ ದಾವಣಗೆರೆ ಪತ್ರಿಕಾಗೋಷ್ಠಿಗಳಲ್ಲಿ ಪತ್ರಕರ್ತರು ಸಾಕಷ್ಟು ಪ್ರಶ್ನೆಗಳನ್ನೆತ್ತಿದ್ದರೂ ಅವುಗಳನ್ನೆಲ್ಲಾ ಒರೆಸಿಕೊಂಡು, 'ಇದು ಎಐಟಿಯುಸಿ ಕಾರ್ಯಕ್ರಮ, ಸಿಪಿಐ ಪಕ್ಷಕ್ಕೂ ಇದಕ್ಕೂ ಸಂಬಂಧ ಇಲ್ಲ' ಎಂಬ ಹಾರಿಕೆಯ ಉತ್ತರಗಳನ್ನು ನೀಡಿ, ಯಾವುದೇ ಎಗ್ಗಿಲ್ಲದೆ ಸಿಪಿಐ ಪಕ್ಷದ ಉನ್ನತ ಸ್ಥಾನಗಳಲ್ಲಿರುವ ಎಐಟಿಯುಸಿ ನಾಯಕರು ಸಮಾರಂಭಕ್ಕೆ ಸಜ್ಜಾಗಿದ್ದರು. ಕಾರ್ಯಕ್ರಮದ ಆಯ್ಕೆಯು "ಹೆಂಡ ಒಂದೇ, ಬಾಟಲಿ ಮಾತ್ರ ಬೇರೆ" ಎಂಬಂತಾಗಿತ್ತು.

ಶಿವಶಂಕರಪ್ಪ ಗೈರು ಸಮಾರಂಭದಲ್ಲಿ ಗಣೇಶ್ ಹಟ್ಟಿದ್ದು!


ಮಧ್ಯಾಹ್ನ 2.30 ಗಂಟೆಗೆ ಪ್ರಾರಂಭವಾಗಬೇಕಿದ್ದ ಕಾರ್ಯಕ್ರಮ ಆರಂಭವಾಗಿದ್ದು 4.30ಗಂಟೆಗೆ. ಯಾವುದೇ ಪುಢಾರಿಗಳಿಗೂ ಕಡಿಮೆ ಇಲ್ಲದಂತೆ ತೆರೆದ ವಾಹನದಲ್ಲಿ ಸಿಪಿಐ ನಾಯಕರಾದ ಅನಂತ ಸುಬ್ಬರಾವ್, ಆನಂದತೀರ್ಥ, ಹೆಚ್.ಕೆ. ರಾಮಚಂದ್ರಪ್ಪ, ಜಿ.ಎಂ. ಹನುಮಂ... ಮುಂತಾದವರು ಎಸ್. ಎಸ್. ಗಣೇಶ್‌ರೊಂದಿಗೆ ಮೆರವಣಿಗೆಯಲ್ಲಿ ಬಂದು ಕಾರ್ಯಕ್ರಮವನ್ನು ಪ್ರಾರಂಭಿಸಿದರು. ಆದರೆ ಅನಾರೋಗ್ಯದಿಂದಾಗಿ ಶಿವಶಂಕರಪ್ಪ ಈ ಕಾರ್ಯಕ್ರಮಕ್ಕೆ ಹಾಜರಾಗಿರಲಿಲ್ಲ. ಎಸ್.ಎಸ್.ರವರ ಮಕ್ಕಳಲ್ಲಿ ಗಣೇಶ್ ಹೊರತು ಪಡಿಸಿ ಬಕ್ಕೇಶ್ ಹಾಗೂ ಮಲ್ಲಿಕಾರ್ಜುನ್ ಕೂಡ ಬಂದಿರಲಿಲ್ಲ. ಶಿವಶಂಕರಪ್ಪನಿಗೆಂದೇ ಮಾಡಿಸಿದ್ದ 'ಬೆಳ್ಳಿ ಕಿರೀಟ' ಅನಾಥವಾಗಿತ್ತು! ಸ್ವಾಗತ ಭಾಷಣ ಮಾಡಿದ ಕಾರ್ಮಿಕ ಸಂಘದ ಕಾರ್ಯದರ್ಶಿ ಶಾಮನೂರು ಶಿವಾನಂದ ಎಸ್.ಎಸ್. ಮತ್ತು ಅವರ ಮಕ್ಕಳನ್ನು ಅಮೋಘವಾಗಿ ಹೊಗಳಿದ್ದು, ನೇತಾರ ಅನಂತಸುಬ್ಬರಾವ್‌ರವರ 'ಕಾರ್ಮಿಕ ಸಂಘಟನೆ ಮಾಲೀಕರನ್ನು ಯಾಕೆ ಸನ್ಮಾನಿಸಬಾರದು? ನನಗರ್ಥವಾಗುತ್ತಿಲ್ಲ!' ಎಂಬಂತಹ ನುಣುಚಿಕೊಳ್ಳುವ ಮಾತುಗಳು ನಡೆದ ಮೇಲೆ ಎಸ್.ಎಸ್.ಗಾಗಿ ತಯಾರಿಸಲಾಗಿದ್ದ 'ಭಿನ್ನವತ್ತಳೆ' ಓದಿ ಹೇಳಿ ಕಿರೀಟವನ್ನು ಗಣೇಶ್ ಪಕ್ಕದಲ್ಲಿ ಇಟ್ಟು ಇವರಿಗೂ ಒಂದು ಕಾಣಿಕೆಯನ್ನು ನೀಡಿದ್ದೇ ತಡ ಕಾರ್ಯಕ್ರಮವೇ ಮುಗಿಯಿತೆಂಬಂತೆ ಜನರು ಚದುರಲಾರಂಭಿಸಿದರು! ಕೊನೆಗೆ ಗಣೇಶ್ 'ಈ ಸಮಾರಂಭಾನೇ ಬ್ಯಾಡ ಅಂದ್ರೂ ಕೇಳ್ದೆ ಇವ್ರು ಹಠನೂ ತೀರಿಸ್ಕಂಡ್ರು-ಚಟಾನು ತೀರಿಸ್ಕಂಡ್ರು' ಎಂದು ಸಿಪಿಐನವರಿಗೆ ಹೆಟ್ಟಿದಾಗ ಪಕ್ಷದ ನಾಯಕರ ಮುಖಗಳೇನೂ ಬಾಡಲಿಲ್ಲ-ಬತ್ತಲೂ ಇಲ್ಲ!

ಹಾವಿನೊಡನೆ ಸಂಗ ಬೇಡ!

ದಾವಣಗೆರೆಯು ದಕ್ಷಿಣ ಭಾರತ ಮ್ಯಾಂಚೆಸ್ಟರ್ ಎಂದು ಕರೆಸಿಕೊಳ್ಳುತ್ತಿದ್ದ ಸಮಯದಲ್ಲಿ ಶಿವಶಂಕರಪ್ಪನಂತಹ ಅನೇಕ ಮಾಲೀಕರ ವಿರುದ್ಧ ಕಾಂ. ಪಂಪಾಪತಿಯವರ ನೇತೃತ್ವದಲ್ಲಿ ಸೆಡ್ಡು ಹೊಡೆದು ನಿಂತಿದ್ದ ಸಿಪಿಐ ಪಕ್ಷವು ಈಗ ಶಿವಶಂಕರಪ್ಪನಾದಿಯಾಗಿ, ಅವರ ಮಕ್ಕಳೆಲ್ಲಾ ಬೇಡವೆಂದರೂ ಬೆಳ್ಳಿಯ ಕಿರೀಟವನ್ನು ತೊಡಿಸಲು ಮುಂದಾಗುತ್ತಿದೆ. ಏಕೆಂದರೆ ಪ್ರಚಲಿತ ಸಮಸ್ಯೆಗಳನ್ನು ಸರಿಯಾಗಿ ಅವಲೋಕಿಸಿ ಹೋರಾಟದ ವೇದಿಕೆಯನ್ನು ನಿರ್ಮಿಸುವ, ವೈಚಾರಿಕವಾಗಿ ಕಾರ್ಯಕರ್ತರನ್ನು ಬೆಳೆಸಿ ಉಳಿಸಿಕೊಳ್ಳುವ ಬದ್ಧತೆ ಹಾಗೂ ನಿಷ್ಠೆ ಪಕ್ಷದ ನಾಯಕತ್ವದಲ್ಲಿ ಕಾಣೆಯಾಗಿರುವುದರಿಂದ ಕಳ್ಳದಾರಿಯಲ್ಲಾದರೂ ಸರಿ, ಕೀಳು ಅವಕಾಶಗಳನ್ನು ಸೃಷ್ಟಿಸಿಕೊಂಡು ಅವುಗಳ ತಾತ್ಕಾಲಿಕ ಫಲ ಉಣ್ಣುವುದನ್ನು ಕರಗತ ಮಾಡಿಕೊಳ್ಳುತ್ತಿದ್ದಾರೆ; ಹಾಗಾಗಿಯೇ ದುಡಿಯುವ ವರ್ಗದ ವಿರೋಧಿ ಸಂಸ್ಕೃತಿಯನ್ನು ತಮ್ಮದಾಗಿಸಿಕೊಳ್ಳುತ್ತಿದ್ದಾರೆ. ಮತ್ತು ಮಾಲೀಕರ ಹೆಗಲ ಮೇಲೆ ಕೈ ಹಾಕಿ ಕಾರ್ಮಿಕರ ಎದೆಯಲ್ಲಿ ನಡುಕವನ್ನು ಹುಟ್ಟಿಸುತ್ತಿದ್ದಾರೆ. ಹಾವಿನೊಂದಿಗೆ ಸರಸವಾಡುತ್ತಿರುವ ನಾಯಕರಿಗೆ ದುಡಿಯುವ ಕಾರ್ಯಕರ್ತರಾದರೂ ಬುದ್ಧಿ ಹೇಳಬಹುದಲ್ಲವೇ?


-ವರದಿಗಾರ

ಶಾಮನೂರು 'ಸಮಾಜ ವಿಜ್ಞಾನಿ' ಆದದ್ದು!



ಶಿವಶಂಕರಪ್ಪನಿಂದ ಕಾರ್ಯಕ್ರಮಗಳಿಗಾಗಿ ಹಣ ಪಡೆದುಕೊಂಡವರು, ಪಡೆದುಕೊಳ್ಳಬೇಕಾದವರು ಅವರನ್ನು "ಕೊಡುಗೈದಾನಿ, ದಾನಚಿಂತಾಮಣಿ" ಮುಂತಾಗಿ ಹೊಗಳಿ ... ಕರಪತ್ರ ಮುಂತಾದವುಗಳನ್ನು ಮುದ್ರಿಸುತ್ತಾರೆ. ಆದರೆ ಕಮ್ಯುನಿಸ್ಟರು ತಮ್ಮ ಪತ್ರಿಕಾ ಹೇಳಿಕೆಗಳಲ್ಲಿ, ಕರಪತ್ರದಲ್ಲಿ ಹಾಗೂ ಬಹಿರಂಗ ಸಭೆಯಲ್ಲೂ ಕೂಡ ಶಾಮನೂರು ಶಿವಶಂಕರಪ್ಪನಿಗೆ 'ಸಮಾಜ ವಿಜ್ಞಾನಿ' ಎಂಬ ಬಿರುದನ್ನೇ ಕೊಟ್ಟುಬಿಟ್ಟಿದ್ದಾರೆ! ಈ ಬಿರುದನ್ನು ನೋಡಿ ಎಸ್.ಎಸ್. ನಾಚಿ ನೀರಾಗಿದ್ದಾರೋ ಅಥವಾ ... ಬಿದ್ದಿದ್ದಾರೋ ಗೊತ್ತಿಲ್ಲ, ಆದರೆ ಕಮ್ಯುನಿಸ್ಟರು ಯಾವ [illegible] ಬಿರುದನ್ನು ನೀಡಿದಾರೆ [illegible]

ಪ್ರೀತಿ ಮತ್ತು ಹಿಂಸೆಯ ಮೂಲಶಕ್ತಿ ಒಂದೇ - ಜೆ. ಕೃಷ್ಣಮೂರ್ತಿ



ಟಿಪ್ಪು ಹೆಸರೇ ಸ್ವಾತಂತ್ರ್ಯ

ವಿಶೇಷ ಲೇಖನ

ಕೆ.ಆರ್.ವಿದ್ಯಾಧರ

ನಾನು ಈ ಪತ್ರವನ್ನು ಮಡಿಕೇರಿಯಿಂದ ಬರೆಯುತ್ತಿದ್ದೇನೆ. ಟಿಪ್ಪು ಸಂಬಂಧದ ವಿವಾದದಲ್ಲಿ ಕೊಡಗಿಗೂ ಕೊಂಚ ಪಾಲಿದೆ. ಟಿಪ್ಪು ಸುಲ್ತಾನನ ವಿರುದ್ಧ ಈಗ ವ್ಯಾಘ್ರವೆತ್ತಿರುವ ಜನರ ಪೂರ್ವಿಕರು ಟಿಪ್ಪುವನ್ನು ಮತ್ತು ಆತನ ನಂತರದ ಕೊಡಗಿನ ಇತಿಹಾಸವನ್ನು ಬ್ರಿಟಿಷ್ ಚರಿತ್ರಕಾರರ ತಕ್ಕಡಿಗೆ ಆತುಕೊಂಡೇ ನೋಡಿದ್ದಾರೆ. ಅದು ಕೇವಲ ಆಕಸ್ಮಿಕವೂ ಅಲ್ಲ, ಗ್ರಹಿಕೆಯಲ್ಲಿನ ದೋಷವೂ ಅಲ್ಲ; ಬದಲಿಗೆ ಅದು ಈ ಚರಿತ್ರೆ ರಚನಾಕಾರರ ಸೈದ್ಧಾಂತಿಕತೆಗೆ ಗಾಢವಾಗಿ ಒಗ್ಗಿಕೊಂಡಿದೆ.

ಹಾಲೇರಿ ಸಂಸ್ಥಾನದ ಕೊನೆಯ ಅರಸ ಚಿಕ್ಕವೀರರಾಜೇಂದ್ರ ಒಡೆಯ ಕೊಡಗಿನ ಜನಜನಿತ ಇತಿಹಾಸದಲ್ಲಿ ಒಬ್ಬ ವಿಕೃತ ಕಾಮಿ, ವಿಷಯ ಲಂಪಟ ಮತ್ತು ಬೇಜವಾಬ್ದಾರಿಯ ವ್ಯಕ್ತಿ. 'ಕನ್ನಡದ ಆಸ್ತಿ ಮಾಸ್ತಿ' ಸಹ ಇದೇ ತಳಹದಿಯ ಮೇಲೆ 'ಚಿಕ್ಕವೀರರಾಜ' ಎಂಬ ತಮ್ಮ ಪ್ರಸಿದ್ಧ ಕಾದಂಬರಿಯನ್ನು ಬರೆದಿದ್ದಾರೆ. ಈ ಚಿಕ್ಕವೀರ ರಾಜೇಂದ್ರ ಒಡೆಯ ಎಷ್ಟು ಸ್ವಾತಂತ್ರ್ಯ ಪ್ರೇಮಿ ಮತ್ತು ವಸಾಹತುಶಾಹಿಗಳ ವಿರೋಧಿ ಎಂದರೆ 1826ರಲ್ಲಿ ಮೈಸೂರಿನಲ್ಲಿ ನಡೆಸಲಾದ ವಿಫಲ ದಂಗೆಯೊಂದರ ಸೂತ್ರದಾರ ಗುಲಾಂ ಮಹಮ್ಮದ್ ಖಾನ್, 1830ರ ನಗರ ದಂಗೆಯ ನಾಯಕರಲ್ಲೊಬ್ಬನಾದ ತರೀಕೆರೆಯ ಪಾಳೆಯಗಾರ ಕುಟುಂಬದ ಸರ್ಜಪ್ಪ ನಾಯಕ, 1832ರ ಬೆಂಗಳೂರು ಕಂಟೋನ್ಮೆಂಟ್ ಪಿತೂರಿಯ ಮುಖ್ಯಸ್ಥರಲ್ಲೊಬ್ಬನಾದ ಅಬ್ಬಾಸ್ ಸಾಹೇಬ ಮುಂತಾದ ಹಲವು ಬ್ರಿಟಿಷ್ ವಿರೋಧಿಗಳಿಗೆ ಕೊಡಗಿನಲ್ಲಿ ಆಶ್ರಯ ಕೊಟ್ಟಿದ್ದ (ಸೀಕ್ರೆಟ್ ಕನ್ಸಲ್ಟೇಶನ್ ವಾಲ್ಯೂಮ್ ನಂ.117 ಪುಟ 1100; ತಮಿಳ್ನಾಡು ಪತ್ರಾಗಾರ). ಮೈಸೂರಿನಿಂದ ಕೇರಳದ ಮಲಬಾರ್ ಪ್ರಾಂತ್ಯಕ್ಕೆ ಕೊಡಗಿನ ಮುಖಾಂತರ ಹಾದುಹೋಗುವ ಹೆದ್ದಾರಿಯನ್ನು ನಿರ್ಮಿಸುವ ಬ್ರಿಟಿಷರ ಯೋಜನೆಯನ್ನು ಈತ ಸಾರಾಸಗಟಾಗಿ ತಳ್ಳಿಹಾಕಿದ್ದ. ಬ್ರಿಟಿಷರ ಊಳಿಗದಲ್ಲಿದ್ದ ಮಾಸ್ತಿ ವೆಂಕಟೇಶ ಅಯ್ಯಂಗಾರರಿಗೆ ಇಂತಹ ಚಿಕ್ಕವೀರರಾಜೇಂದ್ರ ಒಡೆಯ ಒಬ್ಬ ವಿಷಯಲಂಪಟನಾಗಿ ಕಂಡದ್ದರಲ್ಲಿ ಆಶ್ಚರ್ಯವಿಲ್ಲ, ಮಾಸ್ತಿ ಪರಂಪರೆ ಮುಂದುವರೆದಿರಲಾರದು ಎಂಬುದು ಸಹ ಒಂದು ಹುಂಬ ನಂಬಿಕೆ!

ಟಿಪ್ಪು ಬಗ್ಗೆ ಇಂದು ಚರ್ಚೆ ಒಳಗೊಂಡಿರುವ ರಾಜಕೀಯವೇ ಆಸಕ್ತಿಪೂರ್ಣ. 'ಗತಕಾಲದ ಘಟನೆಗಳು ಸಮಕಾಲೀನ ರಾಜಕೀಯದ **myth making** ಗೆ ಬಳಸಲ್ಪಡುತ್ತವೆ' ಎಂದು ರೊಮಿಲಾ ಥಾಪರ್ ಬರೆಯುತ್ತಾರೆ. ಸಮಗ್ರ ಕರ್ನಾಟಕದ ರಾಷ್ಟ್ರೀಯತೆಯ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಟಿಪ್ಪುವನ್ನು ಒಬ್ಬ ಆದರ್ಶದ ಸಂಕೇತವಾದ ನಾಯಕನನ್ನಾಗಿಸುವ ಪ್ರಯತ್ನ ಒಂದೆಡೆ ಇದೆ. ಈ ಮಾದರಿ ವ್ಯಕ್ತಿತ್ವದ ಹತ್ತಿರದಲ್ಲಿ ಟಿಪ್ಪು ಇದ್ದಾನೆ ಸಹ. ಇತಿಹಾಸದಲ್ಲಿನ ಸರಿತಪ್ಪುಗಳಿಗಿಂತಲೂ ಮುಖ್ಯವಾಗಿ ಭಾರತದ ಸಂವಿಧಾನಕ್ಕೆ ಬದ್ಧವಾದ ಪ್ರಜಾಪ್ರಭುತ್ವವಾದಿ ಜಾತ್ಯತೀತ ಸಮಾಜ ನಿರ್ಮಾಣದ ಮಾನವೀಯ ಆಶಯ ಈ ವಾದದಲ್ಲಿದೆ. ಆದರೆ ವೈದಿಕ ಧರ್ಮದ ಪುನರುತ್ಥಾನದ ಕನಸುಗಳಿಗೆ ಇದು ಅಡ್ಡಿಯಾಗಿದೆ. ಎಂದೋ ಒಮ್ಮೆ ಮುಸ್ಲಿಂ ಅರಸರು ಮಾಡಿದ ಕೃತ್ಯಗಳನ್ನು ಕೆದಕಿ ಬೆದಕಿ ಅವುಗಳನ್ನು ಈಗಿನ ಮಾನದಂಡದಿಂದ ಅಳೆಯುವ ಪ್ರಯತ್ನ ಮಾಡಿ, ಅವರುಗಳಿಗೆ ಹಿಂದೂ ವಿರೋಧಿ ಪಟ್ಟಕಟ್ಟಿ ಇಂದಿನ ತಲೆಮಾರಿನ ಜನರ ಮನಸ್ಸುಗಳನ್ನು ಕೆಡಿಸಿ ಸಮಾಜವನ್ನು ವಿಘಟಿಸುವ ಪ್ರಕ್ರಿಯೆ ಇನ್ನೊಂದೆಡೆ ನಡೆಯುತ್ತಿದೆ. ಅಂತಹವರಿಗೆ ಟಿಪ್ಪು ಅಳವಡಿಸಿದ ಶಿಸ್ತುಬದ್ಧ ಒಳಾಡಳಿತ ವ್ಯವಸ್ಥೆ ಮತ್ತು ಅದಕ್ಕೆ ಒಗ್ಗುವಂತೆ ಹಾಗೂ ಸಮಗ್ರವಾಗಿ ಅನ್ವಯವಾಗುವಂತೆ ಬಳಸಿದ ಭಾಷೆ ಕನ್ನಡ ವಿರೋಧಿಯಾಗಿ ಕಾಣುತ್ತದೆ. ಕೇವಲ ಮುಸ್ಲಿಂ ರಾಜರುಗಳ ತಪ್ಪುಗಳನ್ನೇ ಕಣ್ಣಲ್ಲಿ ಎಣ್ಣೆ ಹಾಕಿ ಹುಡುಕುವ ಈ ವಿದ್ವಾಂಸ ಗಣಕ್ಕೆ ಮರಾಠರ ಶಿವಾಜಿ ನಮ್ಮ ಬಸರೂರಿನ ನಖರೇಶ್ವರ ದೇವಸ್ಥಾನಕ್ಕೆ ನುಗ್ಗಿ ಲೂಟಿ ಹೊಡೆದ ತರಹದ ಇತಿಹಾಸಗಳು ಗೋಚರಿಸುವುದೇ ಇಲ್ಲ, ಅದಕ್ಕೇ ಶಿವಾಜಿ ಇವರಿಗೆಲ್ಲ ಪರಮ ಆಪ್ತನಾಗುತ್ತಾನೆ, ಹಿಂದೂತ್ವದ ಐಕಾನ್ ಆಗುತ್ತಾನೆ! ಇದೇ ಬಸರೂರಿನ ಹಲವು ಹಿಂದೂ ದೇಗುಲಗಳಲ್ಲಿ ಟಿಪ್ಪು ದೇಣಿಗೆಯಿಂದ ನಡೆಸಲಾಗುತ್ತಿದ್ದ 'ಸಲಾಮ್ ಪೂಜೆ' ಇಂದೂ ರೂಢಿಯಲ್ಲಿ ಇರುವುದು ಅವರುಗಳಿಗೆ ಮಹತ್ವದ್ದಾಗುವುದಿಲ್ಲ!

ಟಿಪ್ಪುವಿನ ವ್ಯಕ್ತಿತ್ವದ ಪ್ರಭಾವ ಆತನ ಮರಣದ ನಂತರವೂ ಎಷ್ಟೊಂದು ದಟ್ಟವಾಗಿತ್ತು ಎನ್ನುವುದು ಅತ್ಯಂತ ಕುತೂಹಲಕಾರಿ. ಟಿಪ್ಪು ಸತ್ತ ಸೂತಕ ಕಳೆಯುವುದರೊಳಗಾಗಿ ಹಿಂದೆ ಅವನ ಸೈನಿಕನಾಗಿದ್ದ ಧೋಂಡಿಯಾ ವಾಘ್ ಬ್ರಿಟಿಷರ ವಿರುದ್ಧ ರಣಕಹಳೆ ಮೊಳಗಿಸುತ್ತಾನೆ. ಈತ ಎಂತಹ ಪ್ರಚಂಡ ಸಂಘಟಕನೆಂದರೆ ಟಿಪ್ಪು ಸಾವಿನ ನಂತರ ಚದುರಿ ಚೆಲ್ಲಾಡಿ ಹೋಗಿದ್ದ ಟಿಪ್ಪುವಿನ ಸೈನಿಕರನ್ನೆಲ್ಲ ಮತ್ತೆ ಒಟ್ಟು ಸೇರಿಸುತ್ತಾನೆ. ತಿಂಗಳುಗಳೊಳಗೆ ತೊಂಬತ್ತು ಸಾವಿರದಷ್ಟು ದೊಡ್ಡ ಸಂಖ್ಯೆಯ ಅಶ್ವದಳ ಮತ್ತು ಬಹು ವಿಶಾಲವಾದ ಪದಾತಿದಳವನ್ನು ರೂಪಿಸುತ್ತಾನೆ. ಶಿವಮೊಗ್ಗ, ಬಿದನೂರು, ಹೊನ್ನಾಳಿ, ಚಿತ್ರದುರ್ಗ, ಹಾಸನ, ವೂಲಾಲ್, ಗೂಟಿ, ಕಿತ್ತೂರು ಹೀಗೆ ಒಂದಾದ ಮೇಲೊಂದು ಕೋಟೆಗಳನ್ನು ವಶಪಡಿಸುತ್ತಾ, ಭದ್ರಪಡಿಸುತ್ತಾ ಒಂದೆಡೆಯಿಂದ ಇನ್ನೊಂದೆಡೆ ಮಿಂಚಿನಂತೆ ಸಂಚರಿಸುತ್ತಾನೆ. ಸೇಲಂ, ತಂಜಾವೂರು ಕಡೆಯ ರೈತರು ಧೋಂಡಿಯಾ ವಾಘ್ ಜತೆ ಕೈಜೋಡಿಸುತ್ತಾರೆ. ಟಿಪ್ಪುವಿನ ಮಗ ಫತೇ ಹೈದರ್ ಸಹ ಈತನಿಗೆ ಬೆಂಬಲ ಕೊಡುತ್ತಾನೆ (ಡಾ.ಮೀರಾ ಸೆಬಾಸ್ಟಿನ್-ಕರ್ನಾಟಕ ಚರಿತ್ರೆ ಸಂಪುಟ 6; ಕನ್ನಡ ವಿಶ್ವವಿದ್ಯಾಲಯ, ಹಂಪಿ). 1800ರ ಸೆಪ್ಟೆಂಬರ್ ತಿಂಗಳಲ್ಲಿ ಬ್ರಿಟಿಷರೊಂದಿಗೆ ಕಾದಾಡುತ್ತಾ ಈತ ರಣರಂಗದಲ್ಲಿ ಮಡಿಯುತ್ತಾನೆ. ಎಸ್.ಎಲ್.ಬೈರಪ್ಪ ರೀತಿಯ ಮಂದಿಗೆ ಧೋಂಡಿಯಾ ವಾಘ್ ಸಹ ಆದರ್ಶಪ್ರಾಯನಾಗುವುದರಲ್ಲಿ ಸೋಲುತ್ತಾನೆ. ಯಾಕೆಂದರೆ ಅವರ ಪರಂಪರೆಯ ಹಿರಿಯ ದಿವಾನ್ ಪೂರ್ಣಯ್ಯ ಆದಾಗಲೇ ಬ್ರಿಟಿಷರ ದಾಸ್ಯಕ್ಕೆ ಒಗ್ಗಿಯಾಗಿತ್ತು, ಜತೆಗೆ ಅವರ ಮನೋಲ್ಲಾಸಗೊಳಿಸಲು ಇಲ್ಲಿಯ ಬ್ರಿಟಿಷ್ ವಿರೋಧಿ ಹೋರಾಟಗಾರರನ್ನು ಬಗ್ಗು ಬಡಿಯಲು ಪ್ರಾರಂಭಿಸಿಯಾಗಿತ್ತು.

ಧೋಂಡಿಯಾ ವಾಘ್ ಹೋರಾಟವನ್ನು ಆಯೋಜಿಸುವ ಸರಿಹೊತ್ತಲ್ಲೇ ವಿಟ್ಲದ ಪಾಳೆಯಗಾರ ದೊಂಬ ಹೆಗ್ಗಡೆ ಬ್ರಿಟಿಷರ ವಿರುದ್ಧ ಖಡ್ಗ ಹಿರಿಯುತ್ತಾನೆ. ಅವನಿಗೆ ಟಿಪ್ಪುವಿನ ಆಳ್ವಿಕೆಯಲ್ಲಿ ಶಿರಸ್ತೇದಾರನಾಗಿದ್ದ ಸುಬ್ಬರಾವ್ ಸಹಕಾರ ನೀಡುತ್ತಾನೆ. ಆದರೆ ಇವರುಗಳಿಗೆ ಜನರನ್ನು ಸಂಘಟಿಸಲು ತಮ್ಮ ಹೆಸರುಗಳು ಸಾಲದೆಂದು ಕಂಡಿರಬೇಕು. ಅಂತೆಯೇ ಇಂದಿನ ಕಾಸರಗೋಡು ಜಿಲ್ಲೆಯ ಆಡೂರಿನ ಮೆಹ್ತಾಬ್ ಖಾನ್ ಎಂಬಾತ ತಾನು ಫತೇ ಹೈದರ್, ಟಿಪ್ಪುವಿನ ಮಗ, ಎಂದು ಜನರ ಮಧ್ಯೆ ಪ್ರತ್ಯಕ್ಷನಾಗುತ್ತಾನೆ. ಜಮಲಾಬಾದ್ ಕೋಟೆ ಮತ್ತು ಖಜಾನೆಗಳು ಹೋರಾಟಗಾರರ ವಶವಾಗುತ್ತವೆ. ಆದರೆ ಈ ನಕಲಿ ಫತೇ ಹೈದರ್ ಬ್ರಿಟಿಷರಿಗೆ ಸೆರೆಸಿಕ್ಕು 18.07.1800ರಲ್ಲಿ ಮರಣ ದಂಡನೆಗೆ ಒಳಪಡುತ್ತಾನೆ. ಇತರ ಹಲವು ನಾಯಕರುಗಳನ್ನು ಸಹ ಗಲ್ಲಿಗೇರಿಸಲಾಗುತ್ತದೆ. ಆದರೆ ಈ ಆಂದೋಲನಕ್ಕೆ ಪೂರಕವಾಗಿ ಸಕಲೇಶಪುರ, ಬಿಸಿಲೆ ಪ್ರಾಂತಗಳನ್ನು ವಶಪಡಿಸಿಕೊಂಡ ಐಗೂರಿನ ಪಾಳೆಯಗಾರ ವೆಂಕಟಾದ್ರಿ ನಾಯಕ ಹೋರಾಟದ ಕಿಚ್ಚು ಆರದಂತೆ ನೋಡಿಕೊಳ್ಳುತ್ತಾನೆ. ಈತನ ಗೆರಿಲ್ಲಾ ಮಾದರಿಯ ಯುದ್ಧತಂತ್ರಕ್ಕೆ ಬೇಸತ್ತ ಬ್ರಿಟಿಷರು ಈತನನ್ನು ಗೂಳಿ (**Bull**) ಎಂದು ಕರೆಯುತ್ತಿದ್ದರು. ಕೊನೆಗೂ ದಿವಾನ್ ಪೂರ್ಣಯ್ಯನ ಸೈನ್ಯಕ್ಕೆ ಈತ ಸೋತು ಸೆರೆಸಿಕ್ಕುತ್ತಾನೆ. (ಎನ್.ಎಸ್. ದೇವಿಪ್ರಸಾದ್; ಅಮರಸುಳ್ಯದ ಸ್ವಾತಂತ್ರ್ಯ ಸಂಗ್ರಾಮ- ಐಗೂರು ವೆಂಕಟಾದ್ರಿ ನಾಯಕನ ಲಾವಣಿಯ ಸಂಗ್ರಹ). 1802 ಫೆಬ್ರವರಿ ತಿಂಗಳಲ್ಲಿ ಈತನನ್ನು ಗಲ್ಲಿಗೆ ಹಾಕಲಾಗುತ್ತದೆ.

1826ರಲ್ಲಿ ಟಿಪ್ಪು ಸಂಬಂಧಿಕರು ಮತ್ತು ಅಧಿ... ಗಳ ಬೆಂಬಲದಿಂದ ದಂಗೆಯೊಂದನ್ನು ನಡೆಸುವ ಪ್ರ... ವನ್ನು ಗುಲಾಂ ಮಹಮ್ಮದ್ ಖಾನ್ ಎಂಬಾತ ಪ... ತ್ತಾನೆ. ಆದರೆ ಅದು ಕಾರ್ಯಗತವಾಗುವ ಮೊದ... ಸವರಿ ಹಾಕಲ್ಪಡುತ್ತದೆ. ಈ ಗುಲಾಂ ಮಹಮ್... ಖಾನ್ ಒಬ್ಬ ಮತಾಂತರಿ. ಮುಂದೆ 1830ರಲ್ಲಿ ... ನಗರ ರೈತದಂಗೆಯ ಮುಖ್ಯ ಸೂತ್ರಧಾರರಲ್ಲೊಬ್ಬ... ನಾರಾಯಣ ರಾವ್ ಈ ಗುಲಾಂ ಮಹಮ್ಮದ್ ... ಸೋದರಮಾವ.

"ನೀವು ಬ್ರಿಟಿಷರ ವಿರುದ್ಧ ಆಯುಧಗಳ... ಎತ್ತಿಕೊಳ್ಳದಿದ್ದಲ್ಲಿ ನಾನು ರಂಜಾನ್ ಕೊನೆಯ ... ಈದ್ಗಾದಲ್ಲಿ ಸತ್ತ ಹಂದಿಯನ್ನು ಇಡುತ್ತೇನೆ" ಎಂ... ವ್ಯಕ್ತಿಯೊಬ್ಬ ತುಂಬ ಜನ ಸೇರಿದ್ದಲ್ಲಿ ಪ್ರಚೋದನಾತ್ಮಕ... ಮಾತನಾಡುತ್ತಾನೆ. ಹೀಗೆಂದವ ಭೈರಪ್ಪ ಶಂಕರಮೂ... ಪೂರ್ವಜನೂ ಅಲ್ಲ, ಮತ್ಯಾವ ಹಿಂದೂ ಮತಾ... ವೀರಾಗ್ರಣಿಯೂ ಅಲ್ಲ. ಆತನ ಹೆಸರು ಉಸ್ಮಾ... ಬೇಗ್, ಬೆಂಗಳೂರಿನ ಬ್ರಿಟಿಷ್ ದಂಡಿನಲ್ಲಿದ್ದ ... ಸೈನಿಕ. ಸಾರ್ವಜನಿಕ 'ತಲೀಂ ಖಾನಾದಲ್ಲಿ 2.3.18... ರಂದು ಬ್ರಿಟಿಷ್ ವಿರೋಧಿ ಹೋರಾಟಕ್ಕೆ ಉ... ಸೈನಿಕರಿಗೆ ಪ್ರೇರಣೆ ಕೊಟ್ಟ ಉಸ್ಮಾನ್ ಬೇಗ್ ... ಉದ್ದೇಶಕ್ಕೆ ಸೂಕ್ತ ಸ್ಪಂದನ ಸಿಗದಿದ್ದುದರಿಂದ 4.3.18... ರಂದು ಈದ್ಗಾದಲ್ಲಿ ಸತ್ತ ಹಂದಿಯನ್ನು ತಂದೆಸೆಯುತ್ತಾ... ನಂತರ 8.3.1832ರಂದು ತನ್ನ ರೆಜಿಮೆಂಟಿನಿಂ... ತಲೆತಪ್ಪಿಸಿಕೊಳ್ಳುತ್ತಾನೆ. 'ಕಂಟೋನ್ಮೆಂಟ್ ಕಾನ್ಸ್ಪಿರ... ಎಂದು ಪ್ರಖ್ಯಾತವಾಗಿರುವ ಈ ಪಿತೂರಿಯ ನಾಯ... ಕೊನೆಗೂ 21.7.1832 ರಂದು ಸೆರೆಸಿಕ್ಕಿ ಮರ... ದಂಡನೆಗೆ ಗುರಿಯಾದರೆ, ಮತ್ತೊಬ್ಬ ಪಿತೂರಿಗಾ... ಅಬ್ಬಾಸ್ ಸಾಹೇಬ ಕೊಡಗಿನ ಚಿಕ್ಕವೀರರಾಜೇಂ... ಒಡೆಯನ ಆಶ್ರಯ ಪಡೆದುಕೊಳ್ಳುತ್ತಾನೆ.

ಎಲ್ಲಿಂದ ಬಂದ ಅ-ಪರಂಪರ


1834ರಲ್ಲಿ ಚಿಕ್ಕವೀರರಾಜೇಂದ್ರ ಒಡೆಯನನ್ನು ಪದಚ್ಯುತಿಗೊಳಿಸಿ ಕಾಶಿಗೆ ಕಳುಹಿಸಲಾಗುತ್ತದೆ. ಬ್ರಿಟಿ... ಸೈನಿಕರ ಕಣ್ಗಾವಲಿನಲ್ಲಿ ರಾಜನ ಪರಿವಾರ ದಾರಿ ಮ... ಕೆಲ ದಿನ ವೆಲ್ಲೂರಿನಲ್ಲಿ ನಿಂತು ಮುಂದಕ್ಕೆ ಹೋಗುತ್ತ... ಆ ಸಂದರ್ಭ ಬ್ರಿಟಿಷ್ ಬಂಧಿಯಾಗಿ ವೆಲ್ಲೂರ... ಕಾರಾಗೃಹದಲ್ಲಿದ್ದ ಸ್ವಾಮಿ ಅಪರಂಪರನನ್ನು ಭದ್ರತೆ... ಕಾರಣಕ್ಕಾಗಿ ತಿರುಚನಾಪಳ್ಳಿಯ ಸೆರೆಮನೆಗೆ ಕಳುಹಿ... ತ್ತಾರೆ. ಅಪರಂಪರನ ಪಿತೂರಿಯ ಪಾರಮ್ಯಕ್ಕೆ ಬ್ರಿಟಿಷ... ಭಯಭೀತರಾಗಿರುತ್ತಾರೆ. ಯಾರೀತ!? (ಪೊಲಿಟಿಕ... ಕನ್ಸಲ್ಟೇಶನ್ ವಾಲ್ಯೂಮ್ ನಂ.243, ಪುಟ 25... ತಮಿಳ್ನಾಡು ಪತ್ರಾಗಾರ).

ಸ್ವಾಮಿ ಅಪರಂಪರ; ಹೆಸರು ಮತ್ತು ವ್ಯ... ಎರಡೂ ಆಕರ್ಷಕ. ನಿಜದ ಹೆಸರು ಕತ್ರಪ್ಪ ಬಾ... ಊರು ಚಿತ್ರದುರ್ಗ. ಮನೆ ಮಾತು ಮರಾ... ಚಿಕ್ಕವೀರರಾಜೇಂದ್ರ ಒಡೆಯನ ನಿರ್ಗಮನದ ನಂ... ಜನರ ಮಧ್ಯೆ ಗುರುತಿಸಿಕೊಂಡದ್ದು ಮಾತ್ರ ಆ... ದಾಯಾದಿಯಾಗಿ, ಕೊಡಗಿನ ಹಾಲೇರಿ ರಾಜಮನೆತ... ಅಪ್ಪಾಜಿ ಅರಸನ ಮಗ ವೀರಪ್ಪಾಜಿ ಅರಸನೆಂ... ಕತ್ರಪ್ಪ ಬಾವುವಿನ ತಂದೆ ಟಿಪ್ಪುವಿನ ಸೈನಿಕ. ಮೈಸೂ... ಯುದ್ಧದಲ್ಲಿ ಆತ ಸತ್ತು ಹೋದಾಗ ಕತ್ರಪ್ಪ ಬಾ... ಇನ್ನೂ ಸಣ್ಣವ. ಅಲ್ಲಿಂದೀಚೆ ಬ್ರಿಟಿಷರ ವಿರುದ್ಧ ಆ... ದ್ವೇಷ. ಅವರ ಪ್ರತಿಯೊಂದು ನಡೆಯ ಸೂ... ಅವಲೋಕನ. ಕಟ್ಟಿಕೊಂಡ ಹೆಂಡತಿ, ಸಂಸಾರವ... ತ್ಯಜಿಸಿ ಸನ್ಯಾಸ ಸ್ವೀಕಾರ. ಸಮಾಜಮುಖಿ ಪರಿವ್ರಾ... ಸ್ವಾಮಿ ಅಪರಂಪರ.


ಅರಳವ್ವ
ಸತ್ವಯುತವಾದ ಕಥನ

ನೆರೆಕೆರೆ ಹಳ್ಳಿಯವರು 'ಆರಳಿ' ಎಂದು ಕೂಗುವ ಹೆಣ್ಣುಮಗಳು ಅರಳವ್ವನ ಬದುಕಿನ ಏಳು-ಬೀಳುಗಳನ್ನು ಚಿತ್ರಿಸುವ ಕಾದಂಬರಿ 'ಅರಳವ್ವ'. ಆದರೆ ಈ ಕಾದಂಬರಿ ಬರೀ ಅರಳವ್ವ ಎಂಬ ಹೆಣ್ಣುಮಗಳ ಸುದೀರ್ಘ ಕತೆಯಲ್ಲ, ಇಡೀ ಊರಿನ ವಿದ್ಯಮಾನ ಮತ್ತು ಭವಿಷ್ಯದಲ್ಲಿ ನಡೆಯಬೇಕಾದುದರ ಕತೆ ಇದರಲ್ಲಿ ಅಡಕವಾಗುತ್ತದೆ. ಕಾದಂಬರಿಕಾರ ಡಾ. ಹೆಬ್ಬಾಳೆ ಕೆ.ನಾಗೇಶ್ ತನ್ನ ಊರು ಹೆಬ್ಬಾಳೆಯ ಜೀವನಾಡಿಯನ್ನು ಹಿಡಿದು "ಅನಕ್ಷರ ಕಣ್ಣುಗಳ ಗುದಾಣ"ವಾದ ಈ ಊರಿಗೆ ಧ್ವನಿಯನ್ನು ತುಂಬಲು ಯತ್ನಿಸುತ್ತಾರೆ. ಊರಿನಲ್ಲಿ "ಅಜ್ಞಾನಕ್ಕೆ ಒಳಗಾದ, ತುಳಿತಕ್ಕೆ ತುಂಬಿಹೋಗಿರುವ ಹೊಲೆಯರು, ಮಾದಿಗರು, ಬುಂಡೆಬೆಸ್ತರು, ಅಗಸರು, ಸುಣ್ಣಮಾರುವವರು, ಬಡಗಿಗಳು, ಹಕ್ಕಿ-ಪಿಕ್ಕಿಗಳು ಇನ್ನೂ ಅನೇಕ ಪಂಗಡಗಳಿವೆ. ಅವರೆಲ್ಲಾ... ಮುಗ್ಧ ಜನ. ದೇಶದ ಪರಿಯನ್ನು ತಿಳಿಯದ ಮರುಳಿನ ಜನ. ಒಂದು ರೀತಿಯಲ್ಲಿ ಅಧೋಗತಿಯನ್ನರಿಯದವರು. ಅವರಿಗೆ ಕುಟುಂಬವೇ ಮಠ, ಶ್ರಮವೇ ದೇವರು, ಅವರ ಅನುಭವವೇ ಜ್ಞಾನದ ದೀವಿಗೆ, ಅದೇ ದೇಶ, ಅದೇ ಓದು, ಅದೇ ಬಾಳು. ಅವರ ಬದುಕೇ ಪುಸ್ತಕ ಭಂಡಾರ. ಪರಿಸರವೇ ಅವರಿಗೆ ಕಣಜ." ಅರಳವ್ವ ಇಂಥ ಒಂದು ದಲಿತ ಕುಟುಂಬಕ್ಕೆ ಸೊಸೆಯಾಗಿ ಬಂದವಳು. ಮುಗ್ಧನಾದ ಅವಳ ಗಂಡ ಚಂಗ ಹುಂಬತನದಲ್ಲಿ ದುಸ್ಸಾಹಸಕ್ಕೆ ಹೊರಟು ಪ್ರಾಣ ಕಳೆದುಕೊಳ್ಳುತ್ತಾನೆ. ಅವಳ ಬಾಳು ಕಗ್ಗತ್ತಲೆಯಲ್ಲಿ ಮುಳುಗುತ್ತದೆ.

ಇಂತಹ ಅರಳವ್ವನ ಬಾಳಿನಲ್ಲಿಯೂ ಬದಲಾವಣೆ ಕಾಣಿಸುತ್ತದೆ. ಅವಳ ತೀರಿಕೊಂಡ ಗಂಡ ಚಂಗನ ತಮ್ಮ ಮರಿದಂಡನ ಜೊತೆಗೆ ಅವಳಿಗೆ ಮತ್ತೆ ಮದುವೆಯಾಗುತ್ತದೆ. ಅವಳ ಕುಟುಂಬ ಬೆಳೆಯುತ್ತದೆ. ಜೊತೆಗೆ ಅವಳ ಬಡತನ-ಸಂಕಟಗಳೂ ವೃದ್ಧಿಸುತ್ತವೆ. ಮೈಮುರಿದು ದುಡಿದರೂ ಕೂಡ ಅರೆಹೊಟ್ಟೆಗೆ ಮಾತ್ರ ಸಾಕಾಗುವ ಸ್ಥಿತಿ ಆ ಕುಟುಂಬದ್ದು. ಇದು ಇಡೀ ಹಳ್ಳಿಗೇ ಒದಗಿದ್ದ ದುರ್ಗತಿ. ಊರಿನ ಮೇಲು ಜಾತಿ, ಮೇಲು ವರ್ಗಗಳವರ ಹಟ್ಟಿಗಳಲ್ಲಿ ದನ-ಕರುಗಳು ಸತ್ತರೆ ಅವುಗಳನ್ನು ಸಾಗಿಸಲು ಊರಿಗೆ ಈ ಜನರು ಬೇಕು. ಅನೇಕ ಬಾರಿ ಸತ್ತ ದನ-ಕರುಗಳೇ ಇವರ ಆಹಾರ. ಹೆಬ್ಬಾಳೆಯವರು ಹೇಳುವಂತೆ ಈ ಜನರ ಬದುಕು "ಹೃದಯ ವಿದ್ರಾವಕ"ವಾದದ್ದು.



ಆ ಜನಕ್ಕೆ ಬದುಕುವ ಈ ವಿಧಾನ ತಲೆಮಾರುಗಳಿಂದ ಬಂದಿದೆ. ಆದರೆ ಅದರಿಂದ ಅರಳವ್ವನ ಬಡತನ ಕರಗುವುದಿಲ್ಲ, ಆಕೆ ಊರೂರು ಸುತ್ತತೊಡಗುತ್ತಾಳೆ. ಹೆಣ್ಣುಮಕ್ಕಳಿಗೆ ಬೇಕಾಗುವ ವಸ್ತುಗಳನ್ನೂ, ಮೀನು, ಸಾಂಬಾರು ವಸ್ತುಗಳನ್ನೂ ತಲೆಯ ಮೇಲೆ ಹೊತ್ತು ಮಾರುವ ಕಾಯ... ತೊಡಗುತ್ತಾಳೆ. ಆದರೆ ಯಾವ ದಿಕ್ಕಿ... ಹೊರಟರೂ ಬದುಕಿನ ದಾರಿ ನೇರ... ರುವುದಿಲ್ಲ. ದಾಯಾದಿಗಳ ಸಂಚಿನಿಂ... ಆಕೆಯ ಇಬ್ಬರೂ ಗಂಡು ಮಕ್ಕಳು ದ... ಪಾದ ಸೇರುತ್ತಾರೆ. ಇದರಿಂದ ಅರ... ಗರಬಡಿದವಳಂತೆ ಒಂದೆಡೆ ಕೂತು, ... ಗಂಡ ಮರಿದಂಡ "ಹಲ್ಲು ... ಹಾವಿನಂತಾಗಿದ್ದಾಗ" ಅವಳಿಗೆ "ಇದ್ದಕ್ ಇದ್ದಂತೆ ... ಗಕ್ಕನೆ ಗುದ್ದದಂಗೆ ಆಯ್ತು... ಯಾನೋ ಮ... ಜಮ್ಮಂದಂಗಾಯ್ತು". "ತನಗೆ ವಯಸ್ಸು ಆಗಿರ... ಮರ್ತು" ಮತ್ತೆ ಮೊದಲಿನಂತೆ ದುಡಿಯಲು ... ಅರಳವ್ವ ಅಪ್ಪಟ ದುಡಿಮೆ ಸಂಸ್ಕೃತಿಯ ರ... ವಾಗುತ್ತಾಳೆ. ಕೌಟುಂಬಿಕ ಚೌಕಟ್ಟು ಶಿಥಿಲವಾದಾ... ಆ ಮನೆಯ ಹೆಣ್ಣುಮಗಳಾಗಿ ... ಅದನ್ನು ಮತ್ತೆ ಕಟ್ಟಿ ನಿಲ್ಲಿಸುವ... ಈ ಕಾದಂಬರಿಯ ಸೃಜನಶೀ... ಯಾಗಿದೆ.



ಕನ್ನಡದ ದಲಿತ ಕಥನ ಪ... ಯಲ್ಲಿ 'ಅರಳವ್ವ' ಒಂದು ಸತ್ವ... ವಾದ ದೀರ್ಘ ಕಥನ. ಅ... ತನ್ನ ಕಾಲದ ಸಾಂಸ್ಕೃತಿಕ ಪ್ರಶ್ನೆಗ...

ಹಿಂಸೆ, ಪಾಪಗಳನ್ನು ಹಿಂಸೆಯಿಂದಲೇ ಹತ್ತಿಕ್ಕಬೇಕಾದ್ದು ದೊಡ್ಡ ವ್ಯಂಗ್ಯ-ಕೆ.ವಿ. ಸುಬ್ಬಣ್ಣ

1835ರಲ್ಲಿ ಅಪರಂಪರ ಮೈಸೂರಿನಲ್ಲಿ ದಂಗೆ ...ಂದಕ್ಕೆ ಪ್ರಯತ್ನಿಸುತ್ತಾನೆ. ಅದು ಫಲಿಸುವ ಮೊದಲೇ ...ಟಿಷರಿಗೆ ಸೆರೆ ಸಿಕ್ಕುತ್ತಾನೆ. ಆದರೂ ಮುಂದೆ ಈತನ ...ಯಿಂತೆ ಕಲ್ಯಾಣ ಸ್ವಾಮಿ ಎಂಬಾತನ ನಾಯಕತ್ವದಲ್ಲಿ ...ದ ದಂಗೆಯ ಪಿತೂರಿಯಲ್ಲಿ ಮೈಸೂರಿನ ...ಹಾರಾಜರ ಸಂಬಂಧಿ ಅರಮನೆ ಬಸಪ್ಪಾಜಿ ಅರಸ ...ತ್ತು ಕೊಡಗಿನ ದಿವಾನ ಚೆಪ್ಪುದೀರ ಪೊನ್ನಪ್ಪ ಭಾಗಿ ...ಗಿದ್ದ ಬಗ್ಗೆ 'ಅಷ್ಟಗ್ರಾಮ ಪಿತೂರಿ'ಯ ವಿಚಾರಣಾ ...ತದಲ್ಲಿ ದಾಖಲೆಗಳಿವೆ. ಅರಮನೆ ಬಸಪ್ಪಾಜಿ ಮತ್ತು ...ಪ್ಪುದೀರ ಪೊನ್ನಪ್ಪ ಶಿಕ್ಷೆಯಿಂದ ತಪ್ಪಿಸಿಕೊಂಡರೂ ...ಣಸ್ವಾಮಿಯನ್ನು ಮರಣದಂಡನೆಗೆ ಒಳಪಡಿಸಲಾಗು... ನಂತರ 1837ರಲ್ಲಿ ಅಪರಂಪರ ತಿರುಚಿನಾಪಳ್ಳಿಯ ...ಮನೆಯೊಳಗಿದ್ದೇ ಕೊಡಗು–ಕೆನರಾ ಹೋರಾಟವನ್ನು ...ರೋಜಿಸುತ್ತಾನೆ. ಪುಟ್ಟ ಬಸಪ್ಪ ಎಂಬಾತನ ...ತೃತ್ವದಲ್ಲಿ ನಡೆದ ಹೋರಾಟದಲ್ಲಿ ಘಟ್ಟದ ಕೆಳಗಿನ ...ಡಗು, ಕಾಸರಗೋಡು, ಮಂಗಳೂರು ಪ್ರದೇಶಗಳು ...ೋರಾಟಗಾರರ ವಶವಾಗುತ್ತವೆ. ನಗರ ಸಿಂಹಾಸನವನ್ನು ...ಪಡಿಸಿಕೊಳ್ಳುವುದು ಮತ್ತು ಬ್ರಿಟಿಷರನ್ನು ಹೊಡೆ...ದೋಡಿಸುವುದು ಈ ಹೋರಾಟದ ಗುರಿಯಾಗಿತ್ತು ...ಬುದು ಅದರ ಬಗ್ಗೆ ತನಿಖೆ ನಡೆಸಿದ ಕಾಟನ್ ...ಭಿಪ್ರಾಯ ಪಡುತ್ತಾನೆ (ಕಾಟನ್ಸ್ ರಿಪೋರ್ಟ್; ...ೊಲಿಟಿಕಲ್ ಕನ್ಸಲ್ಟೇಶನ್ ವಾಲ್ಯೂಮ್ ನಂ.288, ...ಟ 117; ತಮಿಳ್ನಾಡು ಪತ್ರಾಗಾರ). ಸ್ವಾಮಿ ...ಪರಂಪರ ಮತ್ತು ಆತನ ಅನುಯಾಯಿ ಹುಲಿಕಡದ ...ಜಯ್ಯ ಈ ಹೋರಾಟಗಳಿಗೆ ಮೊದಲು ಧಾರವಾಡ, ...ರ, ಊಟಿ, ಬಳ್ಳಾರಿ, ಹೈದರಾಬಾದ್, ಪೂನಾ, ...ರ, ಕೊಲ್ಲಾಪುರ, ಗ್ವಾಲಿಯರ್, ಲಾಹೋರ್, ...ಶಾವರ ಮುಂತಾದೆಡೆಗಳಲ್ಲಿ ಸಂಚರಿಸಿರುತ್ತಾರೆ ...ಟನ್ಸ್ ರಿಪೋರ್ಟ್, ಪೊಲಿಟಿಕಲ್ ಕನ್ಸಲ್ಟೇಶನ್ ...ಲ್ಯೂಮ್ ನಂ.288, ಹಾಗೂ ಪೊಲಿಟಿಕಲ್ ...ಲ್ಟೇಶನ್ ವಾಲ್ಯೂಮ್ ನಂ.248, ಪುಟ 1315 ...ತ್ತು 1551; ತಮಿಳ್ನಾಡು ಪತ್ರಾಗಾರ). ಮೈಸೂರಿನ ...ಸನೊಂದಿಗೆ ಸ್ವಾಮಿ ಅಪರಂಪರನಿಗೆ ನಿಕಟ ಸಂಪರ್ಕ ...ಸಿತ್ತದೆ (ಪೊಲಿಟಿಕಲ್ ಕನ್ಸಲ್ಟೇಶನ್ ವಾಲ್ಯೂಮ್ ...273, ಪುಟ 6660; ತಮಿಳ್ನಾಡು ಪತ್ರಾಗಾರ). ...ರೆ ಎಲ್ಲೆಡೆಯಲ್ಲೂ ಏಕಕಾಲಕ್ಕೆ ದಂಗೆಯನ್ನು ಹುಟ್ಟು...ಕುವುದು ಆತನಿಗೆ ಸಾಧ್ಯವಾಗುವುದಿಲ್ಲ. 1835ರಲ್ಲಿ ... ಹಿಡಿದ ಈತನನ್ನು ಬ್ರಿಟಿಷರು ಸುದೀರ್ಘಕಾಲ ...ಧಿಸಿಟ್ಟು ಕೊನೆಗೆ 1869ರಲ್ಲಿ ಬಿಡುಗಡೆ ...ಳಿಸುತ್ತಾರೆ (ಡಿ.ಎನ್.ಕೃಷ್ಣಯ್ಯ; ಕೊಡಗಿನ ಇತಿಹಾಸ). ...ಂಡಿಯಾವಾಘ್ ಒಂದೆಡೆ ರಣರಂಗದಲ್ಲಿ ...ೋರಾಡುತ್ತಲೇ ಇನ್ನೊಂದೆಡೆ ಫ್ರೆಂಚರನ್ನು, ...ೋರ್ಚುಗೀಸರನ್ನು, ಸಿಂಧಿಯಾಗಳನ್ನು, ರೈತರುಗಳನ್ನು ...ದೆಡೆ ಸೇರಿಸಿದ ಐಕ್ಯರಂಗವೊಂದನ್ನು ರಚಿಸುವ ...ಯತ್ನ ನಡೆಸಿದರೆ, ಸ್ವಾಮಿ ಅಪರಂಪರ ಶಿಸ್ತುಬದ್ಧ ...ಕೂಟದ ರಚನೆಯ ನಂತರ ಒಂದು ಅಸ್ಫೋಟಕ ...ೋರಾಟ ನಡೆಸುವ ಕನಸು ಕಂಡಾತ. ಈ ಎಲ್ಲ ...ರೋಧಗಳ ಹಿನ್ನಲೆಯಲ್ಲಿ ಟಿಪ್ಪುವಿನ ಆಲೋಚನೆಯ ...ತ್ತು ಕಾರ್ಯವಿಧಾನದ ಎಳೆಗಳು ಗಾಢ ಪ್ರಭಾವ ...ರಿವೆ.

1837ರ ಕೊಡಗು ಕೆನರಾ ಹೋರಾಟವನ್ನು ...ಟಿಷರು ನಿಗ್ರಹಿಸುತ್ತಿದ್ದಂತೆ ಅದರ ಮುಂದುವರಿದ ...ಗವಾಗಿ ಸಿರ್ಸಿಯಲ್ಲಿ ಚಿಕ್ಕದೊಂದು ದಂಗೆ ...ಯುತ್ತದೆ. ಈ ಹೋರಾಟದ ನಾಯಕ ಫಕೀರ್ ...ನಾಪ್ ಶಾ ಎಂಬಾತನನ್ನು ಸಹ ಟಿಪ್ಪುವಿನ ಮುಗನೆಂದೇ ಪ್ರತಿಬಿಂಬಿಸಲಾಗಿರುತ್ತದೆ. (ಪೊಲಿಟಿಕಲ್ ಕನ್ಸಲ್ಟೇಶನ್ ವಾಲ್ಯೂಮ್ ನಂ.283, ಪುಟ 3672; ತಮಿಳ್ನಾಡು ಪತ್ರಾಗಾರ).

ಹೀಗೆ ಟಿಪ್ಪುವಿನ ಮರಣದ ನಂತರ ಮೂರು ನಾಲ್ಕು ದಶಕಗಳವರೆಗೂ ವಿವಿಧ ಹೋರಾಟಗಾರರಿಗೆ, ಧೀರ ಯೋಧರಿಗೆ ಆತ ಸ್ವಾತಂತ್ರ್ಯಾಭೀಪ್ಸೆಯ ಸಂಕೇತವಾದದ್ದನ್ನು ಕನ್ನಡನಾಡು ಮರೆಯಲಾರದು.

ಟಿಪ್ಪುವಿನ ಮರಣಾನಂತರದ ದಿನಗಳಲ್ಲಿ ಮೈಸೂರಿನ ಮೀರ್ ಅಬ್ಬಾಸ್ ಆಲಿ ಎಂಬಾತ 'ವಿಲ್' ತರಹದ ದಾಖಲೆ ಪತ್ರವೊಂದನ್ನು ಬರೆದಿಡುತ್ತಾನೆ. ಇದು 11.5.1833ರಲ್ಲಿ ಬ್ರಿಟಿಷರ ಕೈಗೆ ಸಿಕ್ಕುತ್ತದೆ. "ಹಿಂದೂಗಳು ಮತ್ತು ಮುಸಲ್ಮಾನರು ಒಟ್ಟಾಗಿ ಬ್ರಿಟಿಷರನ್ನು ಹೊಡೆದೋಡಿಸುವ ಮಹತ್ತರ ಕಾರ್ಯಕ್ಕೆ ತೊಡಗಿಸಿಕೊಳ್ಳಬೇಕು" ಎಂಬುದಾಗಿ ತನ್ನ ಈ ಮರಣ ಪತ್ರದಲ್ಲಿ ಬರೆದಿಟ್ಟ ಮೀರ್ ಅಬ್ಬಾಸ್ ಆಲಿ ಹಿಂದೂಗಳನ್ನು ತಮಗಿಂತ ಬೇರೆಯೆಂದು ನೋಡಬಾರದೆಂದು ತನ್ನ ಸಮುದಾಯದ ಜನರಿಗೆ ಅಂತಿಮ ಸಂದೇಶವನ್ನು ನೀಡುತ್ತಾನೆ.

ಟಿಪ್ಪು ಸುಲ್ತಾನನ ಕುರಿತಾಗಿ ಸಂಘ ಪರಿವಾರದ ಮಿದುಳುಗಳು ಇಂದಿನ ಅಸಂಗತ ಸಂದರ್ಭದಲ್ಲಿ ವಿವಾದವನ್ನು ಹುಟ್ಟುಹಾಕಿವೆ. ಕರಾವಳಿಯನ್ನು ಸುಟ್ಟು ಹಾಕುತ್ತಿರುವ ಕೋಮು ದಳ್ಳುರಿಗೂ ಡಿ.ಹೆಚ್. ಶಂಕರಮೂರ್ತಿ ಎಂಬ ಮಂತ್ರಿ ಟಿಪ್ಪು ಬಗ್ಗೆ ಮಾಡಿರುವ ಟೀಕಾತ್ಮಕ ಅಭಿಪ್ರಾಯಕ್ಕೂ ಬೇರ್ಪಡಿಸಲಾಗದ ಸಂಬಂಧವಿದೆ. ಉರಿಯುವ ಬೆಂಕಿಗೆ ತುಪ್ಪ ಸುರಿಯುವ ಮನಸ್ಸಿನಿಂದ ಎಸ್.ಎಲ್.ಭೈರಪ್ಪ ಟಿಪ್ಪು ಬಗ್ಗೆ ಬರೆದಿದ್ದಾರೆ ಹೊರತು ಇತಿಹಾಸವನ್ನು ಸ್ವಸ್ಥ ಮನಸ್ಸಿನಿಂದ ನೋಡುವ ಉದ್ದೇಶದಿಂದ ಮಾತ್ರ ಅಲ್ಲ. ಈ ಎಲ್ಲ ಹುನ್ನಾರಕ್ಕೆ 'ವಿಜಯ ಕರ್ನಾಟಕ' ಎಂಬ ಅಗ್ಗದ ಪತ್ರಿಕೆ ವೇದಿಕೆಯಾಗಿದೆ. ಕರಾವಳಿ ಉದ್ದಕ್ಕೆ ನಡೆಯುತ್ತಿರುವ ಹಿಂಸಾಚಾರಕ್ಕೆ ಶಂಕರಮೂರ್ತಿ–ವಿಜಯ ಕರ್ನಾಟಕ–ಭೈರಪ್ಪ ಅಬೆಟರ್‌ಗಳಾಗಿದ್ದಾರೆ. ಅದರಲ್ಲೂ ಒಡೆದ ಮನಸ್ಸುಗಳನ್ನು ಬೆಸೆಯಬೇಕಾದ, ನೊಂದ ಜೀವಗಳಿಗೆ ಸಾಂತ್ವನ ನೀಡಬೇಕಾದ ಸಾಹಿತಿಗಳು ನೆತ್ತರಲ್ಲಿ ಕೈಗಳನ್ನದ್ದುತ್ತಿದ್ದಾರೆ!

ಈ ವಿಚಾರದಲ್ಲಿ ನನಗೆ ವೈಯಕ್ತಿಕವಾಗಿ ಇನ್ನಷ್ಟು ನೋವನ್ನು ನೀಡಿರುವುದು ಆತ್ಮೀಯರಾದ ಚಿದಾನಂದ ಮೂರ್ತಿಯವರ ಪಾಲುದಾರಿಕೆ. ಶಾಸನಶಾಸ್ತ್ರಕ್ಕೆ ಅಪೂರ್ವ ಕೊಡುಗೆಯನ್ನು ನೀಡಿರುವ, ನಾಡಿನ ಪರಂಪರೆ ಬಗ್ಗೆ ಅಪಾರ ಪ್ರೀತಿ ಇರುವ ಚಿ.ಮೂ.ಗೆ ಯಾಕೆ ವೈಚಾರಿಕ ಮಂಪರು ಕವಿದಿದೆಯೋ ತಿಳಿಯುತ್ತಿಲ್ಲ. ನಮ್ಮ ನಾಡಿನ ಸಂಸ್ಕೃತಿಯನ್ನು, ಪರಂಪರೆಯನ್ನು ಕಟ್ಟಿದವರು ನಮ್ಮ ಗ್ರಾಮೀಣ ಮತ್ತು ಹಿಂದುಳಿದ ಜನ. ನಮ್ಮ ಚೌಡಿಕೆಯವರು, ನೀಲಗಾರರು, ಹೆಳವರು, ಗೊರವರು, ಮೊಗವೀರರು, ಬಿಲ್ಲವರು, ಘಣಿಯರು, ಬ್ಯಾರಿಗಳು, ಗುಡಿಗಾರರು, ಎರವರು, ಮುಗೇರರು ಹೀಗೆ ಅನೇಕ ಜನಸಮುದಾಯ ಸೇರಿ ಈ ಮಣ್ಣಿನ ಮಹತ್ವದ ಮಹಾಕಾವ್ಯಗಳನ್ನು ಕಟ್ಟಿಕೊಟ್ಟಿದ್ದಾರೆ. ಸಂಸ್ಕೃತದ ಸಂತೆಸರಕನ್ನು ತಂದು ಸುರಿದವರು ಈ ನೆಲದ ಸಾಹಿತ್ಯವನ್ನು, ಸಂಸ್ಕೃತಿಯನ್ನು ಎರಡನೆಯ ದರ್ಜೆಗೆ ಇಳಿಸಿ ಇಲ್ಲಿ ತಾವೇ ಮೇಲ್ವರ್ಗ ಅನ್ನಿಸಿಕೊಂಡು ತನ್ಮೂಲಕ ಏಕ ಸಂಸ್ಕೃತಿಯ ಪ್ರತಿಪಾದನೆಯಲ್ಲಿ ತೊಡಗಿದ್ದಾರೆ. ನಮ್ಮ ಪರಂಪರೆ ಬಗ್ಗೆ ಚಿ.ಮೂ.ಗೆ ನಿಜಕ್ಕೂ ತಿಳುವಳಿಕೆ ಇಲ್ಲ ಎಂದು ಅನ್ನಿಸಿದರೆ ಅದು ಅವರದ್ದೇ ತಪ್ಪು. ಅದೇ ಗಾಢವಾದ ದುಃಖದ ವಿಚಾರ.

...ಟುಂಬಿಕ ವಿಘಟನೆಗಳಿಗೂ ಸಾಕ್ಷಿಯಾಗುತ್ತ ...ಟ್ಟಗೊಳ್ಳುವ ಈ ಕಥನದ ವಿಶಿಷ್ಟತೆ ಇರುವುದು ...ದರಲ್ಲಿರುವ ದಲಿತ ಸಮುದಾಯದ ಭಾಷೆಯ ...ಗಸಿನಲ್ಲಿ. ಕಾದಂಬರಿಕಾರ ಕೆ. ನಾಗೇಶ್ ದಲಿತ ...ಮುದಾಯ ಎದುರಿಸುತ್ತಿರುವ ಸಾಮಾಜಿಕ ...ತಂಕಗಳಿಂದ ದೂರ ಸರಿದಿರುವುದು ಇಲ್ಲಿ ಹೊಸ ...ಪಕ್ರಿಯಾಗಿದೆ. ಆದರೆ ಈ ದೇಶದಲ್ಲಿ ದಲಿತರನ್ನು ...ಡುತ್ತಿರುವ ಸಮಸ್ಯೆ ಕಡುಬಡತನವೊಂದೇ ಅಲ್ಲ. ...ಮಾಜಿಕವಾದ ಕಟ್ಟು–ಕಟ್ಟಳೆಗಳು, ಅನಕ್ಷರತೆ, ...ಜಕೀಯ ಶೋಷಣೆಗಳು ಕ್ಷಣಕ್ಷಣಕ್ಕೂ ಅವರನ್ನು ...ಗೆಡಿಸುತ್ತವೆ. ಇತ್ತೀಚಿನ ದಶಕಗಳಲ್ಲಿ ಅಕ್ಷರ ಜ್ಞಾನಕ್ಕೆ ...ನ್ನು ತೆರೆದುಕೊಳ್ಳುತ್ತಿರುವ ದಲಿತ ಸಮುದಾಯಕ್ಕೆ ತಮ್ಮ ಇತಿಹಾಸ ಮತ್ತು ವರ್ತಮಾನಗಳು ತಮ್ಮ ಸಂವೇದನೆಯಲ್ಲಿ ತರುತ್ತಿರುವ ಬದಲಾವಣೆ ಅರ್ಥವಾಗತೊಡಗಿದೆ. ಹೀಗಿರುತ್ತ, ಇಂದಿನ ಯಾವುದೇ ದಲಿತ ಬದುಕಿನ ಕಥಾನಕವು ಸಾಮಾಜಿಕ ಆತಂಕಗಳನ್ನು ಪರಿಗಣಿಸದೆಯೂ ಪ್ರಾಮಾಣಿಕವೆನಿಸಲು ಸಾಧ್ಯವೆ? ಅದರಿಂದ ಒಂದು ಅಧಿಕೃತ ಚಿಂತನೆ ರೂಪ ತಾಳಲು ಸಾಧ್ಯವೆ? ಎಂಬುದನ್ನು 'ಅರಳವ್ವ' ಓದಿದ ಮೇಲೆ ಮತ್ತೆ ಯೋಚಿಸಬೇಕಾಗಿದೆ.

ಆದರೆ ಕಾದಂಬರಿ ತನ್ನ ಆಶಯಗಳನ್ನು ಯಶಸ್ವಿಯಾಗಿ ನಿರೂಪಿಸುತ್ತದೆ. ಈ ನಾಲ್ಕು ದಶಕಗಳಲ್ಲಿ ಕನ್ನಡ ಸಾಹಿತ್ಯದಲ್ಲಿ ಕಥನಕಲೆಯ ಸಂದರ್ಭಗಳು ಗಮನಾರ್ಹವಾದ ಬದಲಾವಣೆಗೆ ಒಳಗಾಗುತ್ತ ಬಂದಿವೆ. ದಮನಿತ ಸಮೂಹಗಳು ಅಕ್ಷರಲೋಕಕ್ಕೆ ತೆರೆದುಕೊಂಡದ್ದರಿಂದ ಈಗ ಅವುಗಳ ಹೊರಹರಿವು ಕೂಡ ಜೋರಾಗಿದೆ. ಇದರ ಒಂದು ರೂಪವಾಗಿ ದಲಿತ ಕಥನ ಪರಂಪರೆಯನ್ನು ಕನ್ನಡ ಸಾಹಿತ್ಯದ ಮುಖ್ಯವಾಹಿನಿಗೆ ತರುವ ಕೆಲಸ ಸಾಗಿದ್ದು 'ಅರಳವ್ವ' ಆ ಪರಂಪರೆಯನ್ನು ಮುಂದುವರಿಸುವ ಯಶಸ್ವಿ ಪ್ರಯತ್ನವಾಗಿದೆ.

ಲೇಖಕರು :
ಡಾ. ಹೆಬ್ಬಾಳೆ ಕೆ. ನಾಗೇಶ್
ಪ್ರಕಾಶನ: ರುಚಿರ ಪ್ರಕಾಶನ
ಪುಟ : 128
ಬೆಲೆ : ರೂ. 90/-



–ಆಲ್ಮನೆ ರಘುಪತಿ

ತನನಂ ತನನಂ



ತೇಲಿ ಬಂದ ದಾರಿ ⑫ ಕವಿತಾ ಲಂಕೇಶ್

ಸಿನಿಮಾ ಮಾಡುವಾಗಿನ irony ಹೇಗಿರುತ್ತೆ ನೋಡಿ? ಸಿನಿಮಾ ಮಾಡುವಾಗ ಬೇರೆ ಸಿನಿಮಾನ ನೋಡೋದೇ ಕಷ್ಟ. 'ಲಗೆ ರಹೊ ಮುನ್ನಾಭಾಯಿ' ಬಗ್ಗೆ ಬರೆದವರೆಲ್ಲ ಹೊಗಳಿದ್ದಾರೆ. ಅಂತೂ ಇಂತೂ ಟೈಮ್ ಮಾಡಿಕೊಂಡು 'ಲಗೆ ರಹೊ' ನೋಡಿ ಬಂದೆ.

'ಲಗೆ ರಹೊ ಮುನ್ನಾಭಾಯಿ' ನೋಡಿ ನಕ್ಕು ನಕ್ಕು ಸಾಕಾಯ್ತು. ಹಾಸ್ಯದ ಮೂಲಕವೇ ಗಾಂಧಿತತ್ವವನ್ನು ಹೇಳಲು ಯತ್ನಿಸಿದ್ದಾರೆ. ಇಂದಿಗೂ ಗಾಂಧಿ ಹೇಗೆ ಪ್ರಸ್ತುತ ಎಂಬುದನ್ನು ಪಡ್ಡೆಗಳಿಗೂ ಅರ್ಥವಾಗುವಂತೆ, 'ಗಾಂಧಿಗಿರಿ' ಎಂಬ ಹೊಸ ಶಬ್ದ ಹುಟ್ಟುಹಾಕಿ ಸುಲಲಿತವಾಗಿ ನಿರೂಪಿಸಲಾಗಿದೆ. ಅರ್ಥರಹಿತ ಹಾಸ್ಯಗಳ ಚಿತ್ರಗಳ ಮಧ್ಯೆ 'ಲಗೆ ರಹೊ' ವಿಭಿನ್ನವಾಗಿ ಮೂಡಿ ಇದ್ದಿದ್ದೇ ಒಂದು ತರಹ. ಚಿತ್ರೀಕರಣವಾಗಿದ್ದೂ ಹಾಗೆಯೇ. ಆದರೆ 'ಅಲಗ್ಯೆ'ನಲ್ಲಿ ಪ್ರತ್ಯೇಕ ಕಾಮಿಡಿ ಟ್ರ್ಯಾಕ್ ತುರುಕಿದ್ದರು. ಚಿತ್ರಕತೆಗೂ ಅದಕ್ಕೂ ಸಂಬಂಧವೇ ಇಲ್ಲ... ಮೇನ್ ಕ್ಯಾರೆಕ್ಟರೂ, ಕಾಮಿಡಿ ಕ್ಯಾರೆಕ್ಟರೂ ಮೀಟ್ ಮಾಡೋದೇ ಇಲ್ಲ. ಹುಂಬಾಗೋಳಿನ ಸೀನ್ ನಂತರ ಒಂದು ಕಾಮಿಡಿ ಬಂದು ಹೋಗುತ್ತೆ. ಆಡಿಯನ್ಸ್‌ಗೆ ರಿಲೀಫ್ ಕೊಡೋಕೆ ಹೀಗೆ ಮಾಡ್ತಾರೇನೋ? 'ಒಡಹುಟ್ಟಿದವಳು' ಚಿತ್ರದಲ್ಲಿ ರವಿಚಂದ್ರನ್ ಮತ್ತು ತಂಗಿಯ ಕಣ್ಣೀರು, ರಾಧಿಕಾಳ ಕಾಮ, ರಕ್ಷಿತಾಳ ಪ್ರೇಮದ ಮಧ್ಯೆ ಇದ್ದಕ್ಕಿದ್ದಂತೆ ಸಾಧು ಕೋಕಿಲ ಎತ್ತೆತ್ತಲೋ ಕೂದಲು ಬಿಟ್ಟು 'ಜೋಗಿ ಜೋಗಿ' ಅಂತಾ ಬಂದು ಬಿಡೋದೆ?

ಹಾಸ್ಯ: ಕತೆಯ ಜೊತೆಜೊತೆಯಲಿ...

ಬಂದಿದೆ. ರಿಚರ್ಡ್ ಅಟೇನ್‌ಬರೋರ 'ಗಾಂಧಿ' ಚಿತ್ರ ಸೀರಿಯಸ್ ಮೂವಿ, ಅರ್ಥಪೂರ್ಣ ಸಿನಿಮಾ. ಆ ಸಿನಿಮಾ ನೋಡುವಾಗ ನನ್ನ ಕಣ್ಣಲ್ಲಿ ನೀರು ಬಂದಿತ್ತು. ಗಾಂಧಿ ಎಂಬ ಸಬ್ಜೆಕ್ಟ್ ಇಟ್ಟುಕೊಂಡೇ ಅದೆಷ್ಟು ನಮೂನೆಯ ಚಿತ್ರ ಮಾಡಬಹುದು ನೋಡಿ. ಎರಡೂ ಸಿನಿಮಾ ಇಂಪಾರ್ಟೆಂಟೇ. ಒಂದು ವಿಶ್ವದಾದ್ಯಂತ ಪಸರಿಸಿದರೆ, 'ಮುನ್ನಾಭಾಯಿ' ಭಾರತೀಯರಿಗೆ ಮಾತ್ರ ಸೀಮಿತ.

ನಮ್ಮ 'ತನನಂ ತನನಂ'ನ ಕಾಮಿಡಿ ಕುರಿತು ಒಂದಿಷ್ಟು ಕುತೂಹಲದ ವಿಷಯ ಹೇಳ್ತೀನಿ ಕೇಳಿ. ಅದಕ್ಕೂ ಮೊದಲು 'ಪ್ರೀತಿ ಪ್ರೇಮ ಪ್ರಣಯ' ಚಿತ್ರದ ಕೆಲವು ಬಿಟ್ಸ್‌ಗಳನ್ನು ಟಿವಿ ಚಾನೆಲ್ಲೊಂದಕ್ಕೆ ನೀಡಿದಾಗ, "ಕಾಮಿಡಿ ಟ್ರ್ಯಾಕ್ ಯಾವುದು ಹೇಳಿ ಮೇಡಂ" ಎಂದು ಕೇಳಿದ್ದರು! ಅವರು ಹಾಗೆ ಕೇಳಿದ್ದೇ ಒಂದು ಕಾಮಿಡಿ ಎನ್ನಿಸಿಬಿಟ್ಟಿತ್ತು. ಏಕೆಂದರೆ ನನ್ನ ಯಾವ ಚಿತ್ರದಲ್ಲೂ ಪ್ರತ್ಯೇಕವಾಗಿ ಕಾಮಿಡಿ ಟ್ರ್ಯಾಕ್ ಎಂಬುದೇ ಇಲ್ಲ... ಚಿತ್ರದ ಓಟದೊಂದಿಗೆ ಸಹಜವಾಗಿ ಉಕ್ಕುವ ಕಾಮಿಡಿ ಸೀನ್‌ಗಳನ್ನು ನಾನು ಚಿತ್ರೀಕರಿಸುತ್ತೇನೆ...



'ಪ್ರೀತಿ, ಪ್ರೇಮ ಪ್ರಣಯ'ದಲ್ಲಿ 'ಹೀರೋ' ಅನಂತ್‌ನಾಗ್ ಮತ್ತು 'ಚೋಟು' ಸುನೀಲ ನಡುವಿನ ಮಾತುಕತೆ, ಹಾವಭಾವಗಳೇ ನಗೆ ಉಕ್ಕಿಸುವಂತಿವೆ. ಥಿಯೇಟರ್‌ನಲ್ಲಿ ಮಕ್ಕಳಿಂದ ವೃದ್ಧರವರೆಗೆ ಎಲ್ಲರೂ ಬಿದ್ದುಬಿದ್ದು ನಕ್ಕಿದ್ದೇ ನಕ್ಕಿದ್ದು... ಒಂದು ವಾರದ ನಂತರ ಮತ್ತೆ ಥಿಯೇಟರ್‌ನಲ್ಲಿ ಆ ಚಿತ್ರ ನೋಡಲು ಹೋದಾಗ, ಹಲಪ್ರೇಕ್ಷಕರು ಹಾಸ್ಯ ಸನ್ನಿವೇಶದ ಡೈಲಾಗ್‌ಗಳನ್ನು ಮೊದಲೇ ಹೇಳಿಬಿಡುತ್ತಿದ್ದರು. ಅವರು ರಿಪೀಟ್ ಆಡಿಯನ್ಸ್. ಅದರಲ್ಲಿ ಸಹಜ ಘಟನೆಗಳ ಮಧ್ಯೆ ಹಾಸ್ಯ ಅಷ್ಟೇ natural ಆಗಿ ಮೂಡಿಬಂದಿತ್ತು.

'ತನನಂ ತನನಂ' ಕೆಲಸ ಸ್ಟುಡಿಯೋದಲ್ಲಿ ನಡೆಯುತ್ತಿದ್ದಾಗ ಆಗಾಗ ಬರುತ್ತಿದ್ದ ಪ್ರೊಡ್ಯುಸರ್ ಸುರೇಶ್ 'ಮೇಡಮ್, ಒಂದು ಕಾಮಿಡಿ ಸೀನ್ ಹಾಕಿ... ಇಲ್ಲಾ ಒಂದು ಸೆಂಟಿಮೆಂಟ್ ಸೀನ್ ಹಾಕಿ' ಎನ್ನುತ್ತಿದ್ದರು. 'ಹಾಗೆಲ್ಲ ಹಾಕೋಕಾಗಲ್ಲ. ಏನು ನಡೀತಾ ಇದೆ ಅದನ್ನೇ ನೋಡಿ. ಒಟ್ಟಾರೆ ಸಿನಿಮಾ ನೋಡ್ಬೇಕು... ಆಗಲೇ ತೃಪ್ತಿ ಆಗೋದು' ಎಂದು ಹೇಳಿಬಿಡುತ್ತಿದ್ದೆ.

'ತನನಂ ತನನಂ'ನಲ್ಲಿ ಪ್ರತ್ಯೇಕ ಕಾಮಿಡಿ ಟ್ರ್ಯಾಕ್ ಇಲ್ಲ. ಕತೆಯ ಸುತ್ತಮುತ್ತ ತಾನಾಗೇ ಅರಳುವ ಹಾಸ್ಯ ದೃಶ್ಯಗಳಿವೆ. ಎಲ್ಲೂ ಯಾವುದೂ ತುರುಕಿದಂತೆ ಕಾಣುವುದೇ ಇಲ್ಲ. 'ಅಲಗ್ಯೆ' ಎನ್ನುವ ತಮಿಳು ಚಿತ್ರದಲ್ಲಿ ನಂದಿತಾದಾಸ್ ನಟಿಸಿ ಹೋಗಿದ್ದಳು. ಆಕೆ ಮೊದಲ ಬಾರಿ ಚಿತ್ರ ನೋಡಿದಾಗ ಕಕ್ಕಾಬಿಕ್ಕಿ! ಏಕೆಂದರೆ ಸ್ಕ್ರಿಪ್ಟ್‌ನಲ್ಲಿ ಈ ಚಿತ್ರ ನೋಡಲು ನಾನು ಕರೆದುಕೊಂಡು ಹೋಗಿದ್ದ ಫಾರಿನ್ ಸ್ಟುಡೆಂಟ್ಸ್ ಕಕ್ಕಾಬಿಕ್ಕಿ! ಅವರಿಗೆ ತಲೆಬುಡ ಒಂದೂ ಗೊತ್ತಾಗಲಿಲ್ಲ. ಕಣ್ಣೀರು, ಪ್ರೇಮ, ಕಾಮದ ಮಧ್ಯೆ ಧುತ್ತೆಂದು ಹಾಸ್ಯವೆ? ಭಾರತದ ಸಿನಿಮಾ ಪ್ರೇಕ್ಷಕರಿಗೆ ಈ ಚೌ–ಚೌ ಶೈಲಿ ರೂಢಿ ಆಗಿಬಿಟ್ಟಿದೆ.

'ತನನಂ ತನನಂ'ನಲ್ಲಿ ಶರಣ್ ತೆರೆ ಮೇಲೆ ಬರುವುದಷ್ಟೇ ತಡ, ನಗೆ ಸ್ಫೋಟವಾಗಲಿದೆ. ಶರಣ್ ಹಾವಭಾವ, ಟೈಮಿಂಗ್ಸ್ ಅದ್ಭುತವಾಗಿವೆ. ಶರಣ್ ಜೊತೆ ನಟಿಸಿರುವ ಸೌಂದರ್ಯಗೆ ಟೈಮಿಂಗ್ಸ್ ಇಲ್ಲ. ಆದರೂ ಕಷ್ಟಪಟ್ಟು ನಟಿಸಿ ಹಾಸ್ಯಭಾವ ಮೂಡಿಸಿದ್ದಾಳೆ.

ನಿಜಕ್ಕೂ ಉತ್ತಮ ನಟನಾಗಿರುವ ಶರಣ್‌ನನ್ನು ನಮ್ಮ ಚಿತ್ರರಂಗ ಕಾಮಿಡಿ ಟ್ರ್ಯಾಕ್‌ನಲ್ಲೇ ಕಟ್ಟಿ ಹಾಕಿಬಿಟ್ಟಿದೆ. ಡಬ್ಬಿಂಗ್ ವೇಳೆಯಲ್ಲಿ ಶರಣ್ ಇದೇ ಮಾತು ಹೇಳಿದ್ದ. ಖ್ಯಾತ ನಟ ದಿ. ನರಸಿಂಹರಾಜು ಎಷ್ಟೊಂದು ವೈವಿಧ್ಯಮಯ ಪಾತ್ರಗಳನ್ನು ಮಾಡಬಲ್ಲವರಾಗಿದ್ದರು. ಅವರನ್ನು ಕಾಮಿಡಿ ಟ್ರ್ಯಾಕ್‌ಗೆ ಫಿಕ್ಸ್ ಮಾಡಿಬಿಟ್ಟಿತು ನಮ್ಮ ಚಿತ್ರರಂಗ...

ಕಾಮಿಡಿಯಲ್ಲೂ ವಿಭಿನ್ನ ಬಗೆಗಳು! ಬುದ್ಧಿಜೀವಿ ಲೆವೆಲ್‌ನವರಿಗೇ ಬೇರೆ ರೀತಿಯದು...ಇನ್ನು ಕೆಲವರಿಗೆ ವಲ್ಗರ್ ಸಂಭಾಷಣೆಗಳ cheap ಕಾಮಿಡಿ ಇಷ್ಟ ಆಗುತ್ತೆ! ತಮಿಳು ಚಿತ್ರಗಳ ಕಾಮಿಡಿ ಲೈನೇ ಒಂದು ತರಹ, ತೆಲುಗಿನವರದ್ದೇ ಇನ್ನೊಂದು ತರಹ. ಆ ಪ್ರದೇಶದ ಜನಕ್ಕೆ ಒಂದು ನೇಟಿವಿಟಿ ಇರುತ್ತೆ. ಕಾಮಿಡಿಯಲ್ಲೂ ಸಹ ನೇಟಿವಿಟಿ ಇರುತ್ತೆ. ರಿಮೇಕ್ ಆದಾಗ ಆಭಾಸ ಆಗೋದೇ ಈ ಕಾರಣಕ್ಕೆ.... ಒರಿಜಿನಲ್ ಸಿನಿಮಾ ತರುವ ನಗು ರಿಮೇಕ್ ನೋಡೊವಾಗ ಸಿಗೋದೆ ಇಲ್ಲ. ಚಾಪ್ಲಿನ್, ಲಾರೆಲ್ & ಹಾರ್ಡಿ ತರದವರು ಜಾಗತಿಕವಾಗಿ ಒಪ್ಪಿಗೆಯಾಗುತ್ತಾರೆ. 'ತನನಂ ತನನಂ'ನಲ್ಲಿ ಮನೆ ಮಂದಿಯೆಲ್ಲ ಕುಳಿತು enjoy ಮಾಡುವ healthy ಕಾಮಿಡಿ ಇದೆ. ರಂಗನಾಯಕಿ ರಕ್ಷಿತಾ ಬೇರೆಬೇರೆ ಉಡುಪಿನಲ್ಲಿ ಹಳ್ಳಿಗೆ entry ಕೊಟ್ಟಾಗ ಅಲ್ಲಿ ಎಂತೆಂತಹ ಮಜಾ ಪ್ರಸಂಗಗಳು ನಡೆಯುತ್ತವೆ ಗೊತ್ತಾ?

ಬನ್ನಿ, 'ತನನಂ ತನನಂ'ನ healthy ಕಾಮಿಡಿ ನೋಡಿ enjoy ಮಾಡಿ.... ಈ ಕಾಮಿಡಿ ದೃಶ್ಯಗಳು ನೋಡಿಸಿಕೊಂಡು ಹೋಗುತ್ತವೆ... ನಗಿಸಿಕೊಂಡೂ ಹೋಗುತ್ತವೆ. ಮುಂದಿನ ವಾರದಿಂದ 'ತನನಂ ತನನಂ' ಕುರಿತು ರಮ್ಯಾ, ರಕ್ಷಿತಾ, ಶ್ಯಾಮ್, ನಿರ್ಮಾಪಕ ಸುರೇಶ್ ಮಾತಾಡಲಿದ್ದಾರೆ.

ನಿರೂಪಣೆ : ಪಿ.ಕೆ.ಮಲ್ಲನಗೌಡರ್

ಮಂಡ್ಯಕ್ಕೀಗ ಮೂಲವ್ಯಾಧಿ ದೇವರ ಕಾಟ

ದಯಮಾಡಿ ವಾಚಕ ಮಹಾಶಯರು 'ಇದು ದೆವ್ವದ ಕಾಟ ಇರಬೇಕು, ಕಣ್ತಪ್ಪಿನಿಂದ ದೇವರ ಕಾಟ ಎಂದಾಗಿದೆ' ಎಂದು ಪರಿಭಾವಿಸಬಾರದಾಗಿ ವಿನಂತಿ. ಇದು ದೆವ್ವದ ಕಾಟ ಅಲ್ಲ. ಅದರ ಕಾಟ ಆಗಿದ್ದರೆ ಮಲೆಯಾಳದಿಂದಲೋ, ಕೊಳ್ಳೇಗಾಲದಿಂದಲೋ ಮಾಂತ್ರಿಕರನ್ನು ಕರೆಸಿ ಹಮ್ಮಬಿಕ್ಕಿನಲ್ಲಿಡುಬಹುದಾಗಿತ್ತು. ಆದರೆ ಇದು ದೇವರ ಕಾಟ. ಇದನ್ನು ಹೇಗೆ ನಿಯಂತ್ರಿಸಬೇಕು ಎಂಬುದೇ ಸಮಸ್ಯೆಯಾಗಿದೆ. ಈ ಸಮಸ್ಯೆ ಇರೋದು ನಿಮಗೆ ಮಾತ್ರ ಅಲ್ಲರೀ, ಇಡೀ ರಾಜ್ಯಕ್ಕೆ ಈ ದೇವರ ಕಾಟ ಮೆಟ್ಟಿಕೊಂಡಿದೆ ಎಂದು ಮಾತ್ರ ಹೇಳಬೇಡಿ.

ಯಾಕೆಂದರೆ ಈಗ ಮಂಡ್ಯಕ್ಕೆ ಬಡಿದಿರುವುದು ಮೂಲವ್ಯಾಧಿ ದೇವರ ಕಾಟ!

ಎಂತೆಂತಹ ದೇವರನ್ನೋ ನಾವು ಕಂಡಿದ್ದೇವೆ; ಕೇಳಿದ್ದೇವೆ. ಇದೇನಿದು ಮೂಲವ್ಯಾಧಿ ದೇವರು? ಭಾರತೀಯ ಸಂಸ್ಕೃತಿಯಲ್ಲಿ ಒಂದೊಂದು ಕಾಯಿಲೆಗೂ ಒಂದೊಂದು ದೇವರು ಹೊಣೆ. ಪ್ಲೇಗಿಗೆ ಪ್ಲೇಗಿನಮ್ಮ; ಸಿಡುಬಿಗೆ ಸಿಡುಬಿನಮ್ಮ; ಏಡ್ಸ್‌ಗೆ ಏಡ್ಸ್ ಅಮ್ಮ; ಚಿಕುನ್ ಗುನ್ಯಕ್ಕೆ ಚಿಕುನ್ ಗುನ್ಯ ಅಮ್ಮ ಹೀಗೆ. ಇಂತಹ ಕಾಯಿಲೆಗಳು ಗುಣವಾಗಬೇಕಾದರೆ ನಿರ್ದಿಷ್ಟ ದೇವತೆಗೆ ಪೂಜೆ ಮಾಡಿ ಆಕೆಯ ಕೃಪಾಶ್ರಯ ಪಡೆಯಬೇಕು. ಹೀಗೇ ಮೂಲವ್ಯಾಧಿಯಿಂದ ನರಳುತ್ತಿರುವವರಿಗೆ ಮೂಲವ್ಯಾಧಿ ದೇವರು ಇರಬಹುದು ಎಂದೆಲ್ಲ ಯೋಚಿಸಬೇಡಿ. ನೀವು ಆಲೋಚಿಸುತ್ತಿರುವ ಮೂಲವ್ಯಾಧಿಗೂ ಈ ದೇವರಿಗೂ ಬಾದರಾಯಣ ಸಂಬಂಧವೂ ಇಲ್ಲ.



ಅಧಿಕಾರದಲ್ಲಿರುವ ಪಕ್ಷದ ಜನರು ಪದೇಪದೇ 'ಅವರೊಡನೆ ಸಮ್ಮಿಶ್ರ ಸರ್ಕಾರ ರಚಿಸಿದ್ದರೂ ನಮ್ಮ ಮೂಲ ಸಿದ್ಧಾಂತದಿಂದ ಹೊರಗೆ ಬರುವುದಿಲ್ಲ; ನಮಗೆ ಮೂಲತತ್ವ ಮುಖ್ಯ' ಎಂದು ಮುಂತಾಗಿ 'ಮೂಲ ಮಂತ್ರ'ವನ್ನು ಜಪಿಸುವುದೇ ತಮ್ಮ ಪರಮಪವಿತ್ರ ಕರ್ತವ್ಯ ಎಂದು 'ಮೂಲವ್ಯಾಧಿ' ಬಾಧಿಸುತ್ತಿರುವಂತೆ ವರ್ತಿಸುತ್ತಾರಲ್ಲ ಅಂತಹವರು ಈಗ ಮಂಡ್ಯದಲ್ಲಿ ದೇವರು ಹಿಡಿದುಕೊಂಡು ಕಾಟ ಕೊಡ್ತಿದಾರೆ. ಆದರಿಂದಲೇ ಮೂಲವ್ಯಾಧಿ ದೇವರ ಕಾಟ ಅಂತ ಹೇಳಿದ್ದು.

ನೀವು ಎಂತಹದ್ದೇ ಅನ್ಯಾಯ ಮಾಡಿ, ಮೂಲವ್ಯಾಧಿ ತತ್ವದಂತೆ ದೇವರ ಹೆಸರಿನಲ್ಲಿ ಮಾಡಿ. ಲೂಟಿ ಮಾಡ್ತೀರಾ, ಕೊಳ್ಳೆ ಹೊಡೀತೀರಾ, ಅಕ್ರಮವಾಗಿ ಸರ್ಕಾರಿ ಸ್ವತ್ತನ್ನು ವಶಪಡಿಸಿಕೊಳ್ತೀರಾ... ಏನು ಬೇಕಾದರೂ ಮಾಡಿ. ಆದರೆ ಮೂಲವ್ಯಾಧಿ ತತ್ವ ಮರೆಯಬೇಡಿ ಅನ್ನುವುದು ಅವರ ಸಿದ್ಧಾಂತ.

ಮಂಡ್ಯ ನಗರದಲ್ಲಿ ಸಂತೆ ಮೈದಾನ ಅಂತ ಒಂದು ಇದೆ. ಕೆಲವು ವರ್ಷಗಳ ಹಿಂದೆ ಅದರ ಒಂದು ಭಾಗವನ್ನು ಪ್ರಾಥಮಿಕ ಶಾಲೆಗೆ ನೀಡಲಾಯಿತು. ಅದು ಸರ್ಕಾರಿ ಶಾಲೆ. ಅದರ ಪಕ್ಕದಲ್ಲೇ ಉರ್ದು ಶಾಲೆಗೂ ಅನುಮತಿ ನೀಡಲಾಯಿತು. ಕೋ-ಜಾ ಸರ್ಕಾರ ಬರುವವರೆವಿಗೂ ಎಲ್ಲಾ ಸರಿಯಾಗಿಯೇ ಇತ್ತು. ಅದು ಯಾವ ಗಳಿಗೆಯಲ್ಲಿ ಈ ಸರ್ಕಾರ ಅಧಿಕಾರಕ್ಕೆ ಬಂತೋ, ಆ ಮಹಾತಾಯಿ ಶೋಭಾ ಕರಂದ್ಲಾಜೆ ಯಾವತ್ತು ಮಂಡ್ಯ ಜಿಲ್ಲೆಯ ಭಾಜಪದ ಉಸ್ತುವಾರಿ ವಹಿಸಿಕೊಂಡಳೋ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆಸಿದ ಕುತಂತ್ರವನ್ನೇ ಯಥಾವತ್ತು ಇಲ್ಲಿ ಛಟ್ಟಿ ಇಳಿಸಲಾಗುತ್ತಿದೆ. ಮೂಲವ್ಯಾಧಿ ದೇವರ ರುದ್ರನರ್ತನ ಪ್ರಾರಂಭವಾಗಿ ಆಗಿದೆ.

ಅದು ಆಗಿದ್ದು ಹೇಗಪ್ಪಾ ಅಂದರೆ... ಸಂತೆ ಮೈದಾನದಲ್ಲಿ ಒಂದು ಹುತ್ತ ಇತ್ತು, ಈಗಲೂ ಇದೆ. ಹಬ್ಬ ಹರಿದಿನಗಳಲ್ಲಿ ನಂಬಿಕೆ ಇದ್ದವರು ಅದರ ಬಳಿಗೆ ಬಂದು ಪೂಜೆ ಮಾಡಿಕೊಂಡು ಶಾಂತಿ ನೆಮ್ಮದಿಯಿಂದ ಹಿಂತಿರುಗುತ್ತಿದ್ದರು. ಇದ್ದಕ್ಕಿದ್ದಂತೆ ಅಲ್ಲಿ ನಾಲ್ಕೈದು ಕಲ್ಲು ನೆಟ್ಟು ಅದೇ ದೇವರು ಅಂದರು. ಜನರಿಗೆ ಸೂರಿಲ್ಲದಿದ್ದರೇನಂತೆ ದೇವರಿಗೆ ಸೂರು ಹಾಕಿದರು. ದೇವಸ್ಥಾನ ಕಟ್ಟಿಸಲು ಎಲ್ಲಾ ಪೂರ್ವ ಸಿದ್ಧತೆಗಳನ್ನೂ ಮಾಡಿಕೊಂಡರು. ಹೀಗೆ ಮಾಡಿದವರು ಒಂದು ರೀತಿಯ ಮರ್ಯಾದವಂತ ಕುಡುಕರ ತರಹ. ಇವರು ಏನು ಮಾಡುತ್ತಾರೆಂದರೆ ಜನ ಪ್ರಾರಂಭಿಸೋಕೆ ಮುಂಚೆ ಸೂರ್ಯ ಮುಳುಗುವುದನ್ನೇ ಕಾಯುತ್ತಿರುತ್ತಾರೆ. ಹಾಗೇನೆ ಈ ಭಕ್ತರಿಗೆ ಯಾಕೋ ಹಗಲು ಕಂಡರೆ ಭಯ. ಅವರ ವೃತ್ತಿ ಎಲ್ಲ ರಾತ್ರಿ ವೇಳೇನೆ. ರಾತ್ರೋ ರಾತ್ರಿ ದೇವರ ಪ್ರತಿಷ್ಠಾಪನೆ, ಸೂರು ಹೊದಿಸುವಿಕೆ ಮಾಡಿದರೆಂಬುದನ್ನು ಪ್ರತ್ಯೇಕ ಹೇಳಬೇಕಾಗಿಲ್ಲವಷ್ಟೇ.

ಸರ್ಕಾರ ಇಲ್ಲವೆ? ಕಾನೂನು ಇಲ್ಲವೆ? ಅದು ನಗರಸಭೆಗೆ ಸೇರಿದ ಸ್ಥಳ. ಅದನ್ನು ಅತಿಕ್ರಮವಾಗಿ ಆಕ್ರಮಿಸಿಕೊಂಡರೆ ಸುಮ್ಮನಿರಲಾದೀತೆ? ನಗರಸಭೆ ಅಡ್ಡಿಪಡಿಸಿತು. ದೇವರ ಕಾರ್ಯಕ್ಕೆ ಅಡ್ಡಿಪಡಿಸುವುದೆಂದರೇನು ಸಾಮಾನ್ಯವೆ. ಪುಂಡರು ಪೋಕರಿಗಳೆಲ್ಲ ದೇವರ ಮರ್ಯಾದೆ ಕಾಪಾಡಲು ಪ್ರಾಣ ತ್ಯಾಗಕ್ಕೂ ಸಿದ್ಧ ಎಂದು ಮುಂದಾದರು! ಇದಲ್ಲವೇ ಪುರುಷಾರ್ಥ ಅಂದರೆ! ಜಿಲ್ಲಾಧಿಕಾರಿಗಳಿಗೆ ದೇವರ ವಿಗ್ರಹಗಳನ್ನು ಕಿತ್ತು ಶಾಪಕ್ಕೆ ಗುರಿಯಾಗಬೇಡಿ ಎಂಬ ಅರ್ಥದ ಮನವಿ ಪತ್ರ ಸಲ್ಲಿಸಿದರು.

ಕೆಲವು ಕೋಪೋದ್ರಿಕ್ತ ಮುಸಲ್ಮಾನ ಮುಖಂಡರು ಈ ಕುರಿತು ಚರ್ಚಿಸಿದರು. ಅವರು ಭಾವಿಸಿದ್ದು ಉರ್ದು ಶಾಲೆಯ ಆವರಣದಲ್ಲಿ ದೇವಸ್ಥಾನ ನಿರ್ಮಾಣಕ್ಕೆ ಪ್ರಯತ್ನಿಸುತ್ತಿದ್ದಾರೆ ಅಂತ. ಆರೆ... ಇಲ್ಲಿ ನೋಡಿದರೆ ಅದು ಉರ್ದು ಶಾಲೆಗೆ ಸೇರಿಲ್ಲ! ಸರ್ಕಾರಕ್ಕೆ ಸೇರಿದ ಜಾಗ ಅದು. ಪ್ರತಿಭಟಿಸಲೆಂದು ಸಿಟ್ಟಿನಿಂದ ಸೇರಿದ್ದ ಗುಂಪು ಈ ವಿಷಯ ತಿಳಿದು ಸಂತೋಷದಿಂದ ಮರಳಿತು! ಆ ಆವರಣದ ಸುತ್ತ ಸುಮಾರು ಐದು ಸಾವಿರ ಬಡ ಮುಸ್ಲಿಂ ಕುಟುಂಬಗಳು ವಾಸಿಸುತ್ತಿವೆ ಎಂಬುದು ಅವರ ಗಮನಕ್ಕೇ ಬಾರದೆ ಹೋಯಿತು!

ಇನ್ನು ಹಿಂದೂ ಸಮುದಾಯ. ಉರ್ದು ಶಾಲೆಗೆ ಈ ಸ್ಥಳ ನೀಡುವುದಾದರೆ ನಮ್ಮ ದೇವರಿಗೆ ಯಾಕಿಲ್ಲ? ಕಟ್ಟಲಿ ದೇವಸ್ಥಾನವ ಎಂದು ಕೂಗಿತು. ಅದರಲ್ಲಿ ಕೆಲವರು ಸಂಘ ಪರಿವಾರದ, ಈ ದೇವಸ್ಥಾನ ನಿರ್ಮಿಸಲೇಬೇಕು ಎಂದಿರುವವರ ಮನೆಯ ಹಿಂದೆಮುಂದೆ, ಅಕ್ಕಪಕ್ಕ ಸ್ಥಳ ಇದ್ದರೆ ಅಲ್ಲಿ ಈ ದೇವರುಗಳನ್ನು ಪ್ರತಿಷ್ಠಾಪಿಸಿ ಎಂದು ಸಲಹೆ ನೀಡಿದಾಗ, ಈ ರೀತಿ ಸ್ಥಳಾವಕಾಶ ಹೊಂದ[...] ಮಂದಿ ಕುಂಡಿ ಸುಟ್ಟ ಬೆಕ್ಕು ಆದರಂತೆ ಅನ್ನುವು[...] ಖಚಿತವಾಗಿಲ್ಲ!

ಸಾರ್ವಜನಿಕ ಸ್ವತ್ತಿನ ಬಗ್ಗೆ '[...] ಮಹಾಜನತೆಯ ಅಭಿಪ್ರಾಯವಾದರೆ [...] ಸರ್ಕಾರದ ನಿಲುವು ಅದ್ಭುತವಾಗಿದೆ! [...] ಕ್ರಮಣದ ಬಗ್ಗೆ ಜಿಲ್ಲಾಧಿಕಾರಿಗಳ[...] ಸಂಪರ್ಕಿಸಿದವರಿಗೆ ಅವರು 'ಇದು ಬ[...] ಸೂಕ್ಷ್ಮ ವಿಚಾರ. ಮಂಗಳೂರು, ಚ[...] ಮಗಳೂರಿನಲ್ಲಿ ಕೋಮುಗಲಭೆ ನಡೆಯುತ್ತಿ[...] ನನಗೆ ಕಾಲಾವಕಾಶ ಕೊಡಿ. ಸೂಕ್ತ ಸಮಯದ[...] ಕ್ರಮ ತೆಗೆದುಕೊಳ್ಳುತ್ತೇನೆ' ಎಂದು ಆಶ್ವಾಸನೆ ನೀಡಿದರಂ[...]

ಸೂಕ್ತ ಸಮಯ ಬರುವುದು ಯಾವಾಗ? ಸಂ[...] ಪರಿವಾರದವರು 14.10.2006 ನೇ ಶನಿವಾ[...] ಮೂಲವ್ಯಾಧಿ ದೇವರುಗಳಿಗೆ ವಿಶೇಷ ಸಂತರ್ಪ[...] ಇಟ್ಟುಕೊಂಡಿದ್ದಾರಂತೆ. ಭಾರತೀಯ ಜನತಾ ಪಕ್ಷ[...] ಮುಖಂಡರು (ತಮ್ಮ ಮನೆಯ ಆವರಣದಲ್ಲಿ ಈ ದೇವ[...] ಸ್ಥಳ ನೀಡಲು ನಿರಾಕರಿಸಿದವರು!) ಸ್ಥಳ ಪರೀಕ್ಷೆ ನಡೆಸಿ[...] ಅಂದರೆ ಮುಸಲ್ಮಾನರ ಮನೆಗಳು ಎಷ್ಟು ದೂರದಲ್ಲಿ[...] ಯಾರಾದರೂ ಸಂತರ್ಪಣೆ ಸಮಯದಲ್ಲಿ ತಮ್ಮ ಆಕ್ರ[...] ಕೂಟವನ್ನು ವಿರೋಧಿಸಿದರೆ..... ವಿರೋಧಿಸಿದವರು ಯ[...] ಕೋಮಿನವರೇ ಆಗಲಿ, ಮುಸಲ್ಮಾನರನ್ನು ಹೇಗೆ ಮ[...] ಹಾಕಬೇಕು ಎಂಬುದನ್ನೆಲ್ಲ ಪರಾಮರ್ಶಿಸಿ ತಮ್ಮ ಮೆಚ[...] ವ್ಯಕ್ತಪಡಿಸಿದ್ದಾರಂತೆ. ಇನ್ನು ಸುತ್ತಮುತ್ತಲಿನ ಆಸ್ತಕರ ಮನ[...] ಈ ಮೂಲವ್ಯಾಧಿ ದೇವರ ಭಕ್ತರು ದಯಮಾಡಿಸಿ ದೇವ[...] ಕಾರ್ಯಕ್ಕೆಂದು ಅವರ ಕೈಲಾದ ಸಹಾಯ ಪಡೆಯ[...] ತ್ತಿದ್ದಾರಂತೆ! ಬಡ ಜನರೇ ತುಂಬಿರುವ ಆ ಆವರಣ[...] ಸುತ್ತಿನವರು 'ಇವತ್ತು ನಮ್ಮೂರಲಿ ಪರ ಮಾಡ್ತೀ[...] ಕೂಲಿಗೆ ಬರಾಕಿಲ್ಲ' ಅಂತ ಮುಂಗಡವಾಗಿಯೇ ಸಂಬಂಧ[...] ದವರಿಗೆ ಸೂಚನೆ ನೀಡಿದ್ದಾರಂತೆ.

ಜನರು ಹೀಗೆ. ಸರ್ಕಾರ ಹಾಗೆ. ಸಾರ್ವಜನಿಕ ಸ್ವತ್ತ[...] ಉಳಿಸುವುದು ಹೇಗೆ? ಇದು ಕೋ-ಜಾ ಸರ್ಕಾರವ[...] ಕೇಳುವ ಪ್ರಶ್ನೆ. ಕೇಳಿಸುತ್ತಿದೆಯೆ ಗೃಹ ಮಂತ್ರಿ ಎಂ[...] ಪ್ರಕಾಶ್ ಅವರೆ?

ಸರ್ಕಾರ ಅನ್ನುವುದು ಈ ರಾಜ್ಯದಲ್ಲಿ ಏನಾದ[...] ಇದ್ದರೆ ಈ ಮೂಲವ್ಯಾಧಿ ದೇವರನ್ನು ಅಲ್ಲಿಂದ ಕಿತ್ತೆಸೆ[...] ಸಂತೆ ಮೈದಾನ, ಸಂತೆ ಮೈದಾನವಾಗೇ ಉ[...] ಬೇಕು. ಈ ಬಡಾಡಿ ದೇವರುಗಳ ಗೂಡು ಆಗ[...] ಬಿಡಬಾರದು.

-ಎಚ್.ಎಲ್. ಕೇಶವಮೂರ್ತಿ

ರೈತರಿಗೆ ಟಿಪ್ಪು ನೀಡಿದ 'ಖಾತೆ', 'ಕಿರ್ದಿ'

ಟಿಪ್ಪು ಕನ್ನಡ ದ್ರೋಹಿ ಎಂಬುದಕ್ಕೆ ಎಸ್.ಎಲ್. ಭೈರಪ್ಪ ಮತ್ತು ಚಿದಾನಂದಮೂರ್ತಿಯಂಥವರು ನೀಡುವ ಉದಾಹರಣೆಯೆಂದರೆ ಟಿಪ್ಪು ತನ್ನ ಆಡಳಿತದಲ್ಲಿ ಖಾತೆ, ಕಿರ್ದಿ, ಕಛೇರಿ, ಪಿಕಾವಿ ಎಂಬ ಪರ್ಷಿಯನ್ ಪದಗಳನ್ನು ಬಳಸಿದ್ದ ಎಂಬುದು. ವಾಸ್ತವವಾಗಿ ಯಾವುದೇ ಪದದ ಬಳಕೆ ಆ ವ್ಯವಸ್ಥೆಯಲ್ಲಿ ಆ ಪದದ ಉಪಯುಕ್ತತೆ ಇತ್ತೇ ಎಂಬುದನ್ನು ಅವಲಂಭಿಸಿರುತ್ತದೆ. 'ಪಿಕಾವಿ' ಎಂದರೆ ರೈತರ ಬೆಳೆ ನಾಶವಾದಾಗ ಸರ್ಕಾರ ಕೊಡುತ್ತಿದ್ದ ಅನುದಾನ ಮತ್ತು ಬಡ್ಡಿ ರಹಿತ ಸಾಲ. ಅದೇ ರೀತಿ ಖಾತೆ ಎಂದರೆ ರೈತನೊಬ್ಬನ ಜಮೀನಿನ ಮೇಲಿನ ಒಡೆತನದ ದಾಖಲೆ. ಟಿಪ್ಪುವಿಗೆ ಮುಂಚೆ ರೈತನಿಗೆ ಜಮೀನಿನ ಒಡೆತನವಾಗಲಿ, ಸರ್ಕಾರ ರೈತರಿಗೆ ಸಾಲ ಕೊಡುವಂಥ ವ್ಯವಸ್ಥೆಯಾಗಲಿ ಇರಲಿಲ್ಲ ಎಂಬುದು ಕಾದಂಬರಿಕಾರ ಎಸ್.ಎಲ್. ಭೈರಪ್ಪನವರಿಗೆ ಗೊತ್ತಿರಲಿಲ್ಲವಾದರೂ ಸಂಶೋಧಕ ಮತ್ತು ಭಾಷಾ ವಿಜ್ಞಾನಿಯೂ ಆದ ಚಿದಾನಂದಮೂರ್ತಿಗಳಿಗೆ ಗೊತ್ತಿರಬೇಕಿತ್ತು. ಖಾತೆ, ಪಿಕಾವಿಯಂಥ ಪದಗಳ ಅಗತ್ಯ ಟಿಪ್ಪುವಿಗೆ ಮುಂಚೆ ಈ ನಾಡನ್ನಾಳಿದ ಯಾವುದೇ ರಾಜ ವ್ಯವಸ್ಥೆಗೆ ಇರಲಿಲ್ಲ. ಹಾಗಾಗಿ ಅಂತಹ ಅರ್ಥ ಕೊಡುವ ಪದಗಳೂ, ಆ ಕಾಲದ ಆಡಳಿತ ಪದಕೋಶಕ್ಕೆ ಸೇರಿರಲಿಲ್ಲ. ಖಾತೆ, ಕಿರ್ದಿ ಎಂಬ ಪದಗಳು ಶಂಕರಮೂರ್ತಿ ಹಾಗೂ ಚಿದಾನಂದಮೂರ್ತಿಯವರಿಗೆ ಎಷ್ಟೇ ಅಸಹನೀಯವಾದರೂ ರೈತರಿಗೆ ಆಪ್ಯಾಯಮಾನವಾಗುತ್ತವೆ. ಶಂಕರಮೂರ್ತಿ, ಎಸ್.ಎಲ್. ಭೈರಪ್ಪ ಹಾಗೂ ಚಿದಾನಂದಮೂರ್ತಿ ಎಂಬ ಬ್ರಾಹ್ಮಣ ಪ್ರಾಡೆಕ್ಟುಗಳ ಅಸಹನೆಗಳಿಗೆ ಈ ಐತಿಹಾಸಿಕ ಕಾರಣಗಳಿವೆ ಎಂಬುದನ್ನು ಕನ್ನಡ ನಾಡಿನ ಜನತೆ ಅರಿಯಬೇಕು.



-ಡಿ.ಎಲ್. ಚಂದ್ರಿಕಾ, ಹರಪನಹಳ್ಳಿ

ಊರು ಆಳುವವನ ತಲೆಯಲ್ಲಿ ಊರುದ್ಧಾರಕ್ಕೆ ಬೇಕಾದ ಮಾರ್ಗಗಳು ಇಲ್ಲದಿದ್ದಾಗ ಊರನ್ನು ಶಾಶ್ವತವಾಗಿ ಹಾಳು ಮಾಡುವುದಕ್ಕೆ ಬೇಕಾದ ಮಾರ್ಗಗಳು ಸುಲಭವಾಗಿ ದಕ್ಕುತ್ತವೆ ಎಂಬುದಕ್ಕೆ ಹಾಲಿ ಉನ್ನತ ಶಿಕ್ಷಣ ಮಂತ್ರಿ ಡಿ.ಎಚ್. ಶಂಕರಮೂರ್ತಿಯೇ ಉದಾಹರಣೆ.

ಪರ್ಷಿಯನ್ ಭಾಷೆಯನ್ನು ಆಡಳಿತದಲ್ಲಿ ಬಳಸಿದ ಮಾತ್ರಕ್ಕೆ ಟಿಪ್ಪು 'ಕನ್ನಡ ದ್ರೋಹಿ' ಆಗಲಾರ. ಸಹಸ್ರಮಾನಗಳಿಂದಲೂ ದೇವಸ್ಥಾನದಲ್ಲಿ ಸಾಮಾನ್ಯರಿಗೆ ಅರ್ಥವಾಗದ 'ಸಂಸ್ಕೃತ'ದಲ್ಲಿ ದೇವರ ಪೂಜೆ ನಡೆಸುವ ಪುರೋಹಿತಶಾಹಿಗಳು ಕನ್ನಡ ದ್ರೋಹಿಗಳಾಗುತ್ತಾರೆ. ಇದು ಜನರಿಗೆ ಗೊತ್ತಾಗಬೇಕಿದೆ.



ರಾಜಕಾರಣಿಯಾಗಿ ಓಟುಗಳ ಮೇಲೆ ಕಣ್ಣಿಟ್ಟು ಮಾತನಾಡಿದ ಶಂ.ಮೂರ್ತಿಯನ್ನಾದರೂ ಕ್ಷಮಿಸಬಹುದಿತ್ತು, ಆದರೆ ಈ ಚಿ.ಮೂ.ಗಾದರೂ ಬೇಡವೆ ತಲೆಯೊಳಗೆ ಬುದ್ಧಿ? ಜೊತೆಯಲ್ಲಿ ಕೂತು ಊಟಮಾಡದ, ಮನೆಯೊಳಗೆ ಕರೆದೊಯ್ದು ನೀರು ನೀಡದ ಕುಲಕ್ಕೆ ಬೇರೆಯವರು ಮಾತ್ರ ದ್ರೋಹಿಗಳಾಗುತ್ತಾರೆ. ಇವರು ಮಾತ್ರ ಇತಿಹಾಸದ ನಿಜ ವಾರಸುದಾರರಾಗುತ್ತಾರೆ?

ಹೀಗೆ ಯೋಚಿಸುತ್ತಾ ಹೋದ ನನಗೆ ಈ ನಾಡಿನಲ್ಲಿ ಬುದ್ಧ, ಬಸವಣ್ಣ, ಅಂಬೇಡ್ಕರ್, ಲಂಕೇಶ್‌ರಂಥವರು ಹುಟ್ಟದಿದ್ದರೆ ಹೇಗಿರುತಿತ್ತು ಬ್ರಾಹ್ಮಣೇತರರ ಬದುಕು ಎಂದಾಗ ತೊಗಾಡಿಯಾ, ಶಂ.ಮೂ, ಚಿ.ಮೂ., ಅಡ್ವಾಣಿ, ಸುದರ್ಶನ ಮೈಮೇಲೆ ಬೀಳಲು ಬಂದಂತಾಯ್ತು. ಕಣ್ತೆರೆದರೆ ನನ್ನೂರಿನ ನನ್ನ ಜನರ ಕೈಯಲ್ಲಿಯೇ ತ್ರಿಶೂಲ, ತಲೆಯಲ್ಲಿ ಕೇಸರಿ ರುಮಾಲು. ಗಾಬರಿ ಬಿದ್ದು ಮೇಲೆದ್ದು ಹುಡುಕಿದರೆ ಕೈಗೆ ಸಿಕ್ಕ ಗೌರಿ ಲಂಕೇಶ್.. ಗಲ್ಲಕ್ಕೆ ಕೈಕೊಟ್ಟು ನಗುತ್ತಿದ್ದ ಲಂಕೇಶ್ ನೋಡುತ್ತಲೇ 'ಗರುಡ'ನ ನೋಡಿದ ಸರ್ಪದಂತೆ ಹಿಂದಕ್ಕೆ ಸರಿದಂತಾಯ್ತು.

-ಮಂಜಣ್ಣ, ಸೊರಬ

ಕೆ.ಎಲ್. ಅಶೋಕರವರ 'ಚಿಮೂ-ಐತಿಹಾಸಿಕ ದೃಷ್ಟಿದೋಷ' ಲೇಖನವನ್ನೋದಿ ಇದನ್ನು ಬರೆಯುತ್ತಿದ್ದೇನೆ. ಲೇಖನದಲ್ಲಿ ಅಶೋಕರು ಐತಿಹಾಸಿಕ ದಾಖಲೆಗಳೊಂದಿಗೆ ಚಿಮೂ ಮುಂತಾದವರ ಕುರುಡುತನವನ್ನು ಸ್ಪಷ್ಟವಾಗಿ ಹೊರಗೆಡವಿದ್ದಾರೆ.

ಲೇಖನ ಓದಿದಾಗ ಅಚ್ಚರಿಯಾದದ್ದೆಂದರೆ, ತೀರಾ ಅತೀ ಎನಿಸುವ ಪೂರ್ವಾಗ್ರಹಗಳನ್ನು ಹೊಂದಿರುವ ಚಿ.ಮೂ.ರವರು ಇತಿಹಾಸ ಸಂಶೋಧಕರು ಎಂಬ ಆರೋಪ ಹೊತ್ತಿರುವುದು ಹೇಗೆ? ಎಂದು[...] ಇತಿ-ಹ-ಅಸ ಅಂದರೆ ಹೀಗಿದ್ದಿತ್ತು ಎಂದರ್ಥ.[...] ಇದ್ದುದ್ದನ್ನು ಯಥಾವತ್ತಾಗಿ ದಾಖಲಿಸುವಂತ ಇತಿಹಾ[...] ಸಜ್ಜರ ಕೆಲಸ ಪೂರ್ವಾಗ್ರಹ ಪೀಡಿತ ಮನಸ್ಸಿಗೆ[...] ಹೇಳಿಸಿದ್ದೇ ಅಲ್ಲ. ಇತಿಹಾಸವನ್ನು ಹಾದಿ ತಪ್ಪಿಸುವ[...] ಅಂತಹವರ ಶೋಧನೆಗಳು ಇತಿಹಾಸಕ್ಕೆ ಸಿಗುವ[...] ಅಪಚಾರಗಳಷ್ಟೇ.

ಆಕಸ್ಮಿಕವಾಗಿ ಇನ್ಯಾವುದೋ ಕಾರಣ[...]ಗಳಿಂದ ಪ್ರಾಚೀನ ಕನ್ನಡ ಕವಿಯೊಬ್ಬನ[...] ಜನ್ಮಸ್ಥಳ ಗುರುತಿಸಿದ್ದು ಬಿಟ್ಟರೆ[...] ಚಿ.ಮೂ.ರವರು ಮಾಡಿದ್ದು ಅಷ್ಟರಲ್ಲೇ[...] ಇದೆ. ಅಗತ್ಯವಿರಲಿ, ಇಲ್ಲದೇ ಇರಲಿ[...] ಸದಾ ಒಂದಿಲ್ಲೊಂದು ಕಾರಣದಿಂದ[...] ಮುಸಲ್ಮಾನರನ್ನು ಟೀಕಿಸುವುದನ್ನೇ[...] ಕಾಯಕವನ್ನಾಗಿಸಿರುವ ಚಿ.ಮೂ.ರವರ ಟಿಪ್ಪುವಿನ ಕುರಿತ[...] ಸಂಶೋಧನಾತ್ಮಕ ವಿಚಾರಗಳು ಕೇವಲ ಋಣಾತ್ಮಕ[...]ವಾಗಿರಲಷ್ಟೇ ಸಾಧ್ಯ. ಸುಧಾದ ಸಂದರ್ಶನವೊಂದರಲ್ಲಿ[...] ನಾನೊಮ್ಮೆ ಪತ್ನಿಯ ನಿಷ್ಠೆಯನ್ನು ಅನುಮಾನಿಸಿದ್ದೆ[...] ಎಂದಿದ್ದ ಇವರು ತನ್ನ ಬದ್ಧಶತ್ರು ಮುಸಲ್ಮಾನ ಜನಾಂಗದ[...] ದೊರೆಯೊಬ್ಬನ ಜಾತಿಯನ್ನು ಅನುಮಾನಿಸಿದ್ದರೆ ಅದರಲ್ಲಿ[...] ಒಲ್ಲದ ಗಂಡನಿಗೆ ಮೊಸರಲ್ಲಿ ಕಲ್ಲು ಎಂಬಂತೆ[...] ಹೊಸತೇನೂ ಕಾಣಿಸುವುದಿಲ್ಲ. ಸೀತೆಯನ್ನು[...] ಸಾರ್ವಜನಿಕವಾಗಿ ಅಗ್ನಿಪರೀಕ್ಷೆಗೊಡ್ಡಿಯಾದ ಮೇಲೂ[...] ತೃಪ್ತನಾಗದೇ ಒಬ್ಬ ಅಗಸನ ಮಾತನ್ನೇ ನೆಪ[...] ಮಾಡಿಕೊಂಡು ಆಕೆಯನ್ನು ಕಾಡಿಗಟ್ಟಿದ ಅನುಮಾನ[...] ಪಿತಾಮಹ ಶ್ರೀರಾಮನನ್ನೇ ಆದರ್ಶ ಪುರುಷ[...]ನನ್ನಾಗಿಸಿಕೊಂಡಿರುವ ಚಿ.ಮೂ., ಶಂಕರ[...]ಮೂರ್ತಿಯಂತವರ ಅನುಮಾನ ವ್ಯಾಧಿ ವಾಸಿಯಾಗು[...]ವಂಥಾದ್ದಲ್ಲ.

-ರವಿ, ಪುತ್ತೂರು

"ಮೈ ಗಾಡ್, ಐ ಹ್ಯಾವ್ ನೆವರ್ ಸೀನ್ ಬಡಿ ಜಂಪಿಂಗ್ ಲೈಕ್ ದಿಸ್...." ಗಂತ ಛಾಯಾಗ್ರಾಹಕ ಗೌರಿಶಂಕರ್ ರ್ಯದಿಂದ ಹೇಳಿದಾಗ ಅವರ ಪಕ್ಕದಲ್ಲಿದ್ದ ರ್ದೇಶಕ ಸಿಂಗೀತಂ ಶ್ರೀನಿವಾಸ್ ಕೂಡ "ಯು ರ್ ರೈಟ್" ಎಂದು ದನಿಗೂಡಿಸಿದರು.

ಅಂದು ನಾವು 'ಆನಂದ್' ಚಿತ್ರಕ್ಕಾಗಿ ಚೇಸಿಂಗ್ ಶ್ಯವನ್ನು ಚಿತ್ರೀಕರಿಸುತ್ತಿದ್ದೆವು. ನಾನು ಒಂದು ಲ್ಡಿಂಗ್‌ನಿಂದ ಮತ್ತೊಂದು ಬಲ್ಡಿಂಗಿಗೆ ಜಂಪ್ ಾಡಿಕೊಂಡು ಹೋಗಬೇಕಿತ್ತು. ಎರಡು ಬಲ್ಡಿಂಗ್ ುವೆ ಹಲವಾರು ಅಡಿಗಳ ಅಂತರವಿತ್ತು. ಅಷ್ಟೇ ಲ್ಲ, ಕೆಳಗಡೆ ಸೇಫ್ಟಿಗಾಗಿ ಬೆಡ್ಡುಗಳನ್ನಾಗಲೀ, ಇತರೆ ವಸ್ಥೆಗಳನ್ನಾಗಲೀ ಮಾಡಿರಲಿಲ್ಲ.

ಆಗ ತಾನೇ ಗೀತಾಳೊಂದಿಗೆ ನನ್ನ ನಿಶ್ಚಿತಾರ್ಥ ಾಗಿದ್ದರಿಂದ ಇಂತಹ ಆಪಾಯಕಾರಿ ದೃಶ್ಯವನ್ನು ತ್ರೀಕರಿಸುವಾಗ ಡ್ಯೂಪ್ ಬಳಸಿ ಎಂದೇ ಎಲ್ಲರೂ ನ್ನನ್ನು ಒತ್ತಾಯ ಮಾಡಿದ್ದರು. ಯಾಕೆಂದರೆ ಜ್‌ಕುಮಾರರ ಮಗ ಮತ್ತು ಬಂಗಾರಪ್ಪನವರ ಳಿಯನಿಗೆ ಏನಾದರೂ ಆದರೆ ಏನು ಗತಿ ಎಂಬ ದರಿಕೆ ಅವರನ್ನು ಕಾಡುತ್ತಿತ್ತು. ಆದರೆ ಡ್ಯೂಪ್ ಾತ್ರ ಬೇಡವೇ ಬೇಡ ಎಂದು ನಾನು ಮತ್ತು ್ಷ ಸ್ವಾಮಿ ಮಾಸ್ಟರ್ ಹಠ ಹಿಡಿದೆವು.

ಇವತ್ತು ನಾನು ಈ ಹಂತ ತಲುಪಿದ್ದರೆ, ನನಗೆ ರಬೇತಿ ನೀಡಿದ ಸ್ವಾಮಿ ಮಾಸ್ಟರ್‌ರನ್ನು ನೆನಪಿಸಿ ಳ್ಳಲೇಬೇಕು. ನಾನು ಮದ್ರಾಸಿನಲ್ಲಿದ್ದಾಗ ಮೂರು ಗಳುಗಳ ಕಾಲ ಅವರು ಕಠಿಣವಾದ ತರಬೇತಿ ನ್ನು ನೀಡಿದ್ದರು. ಬೆಳಗಿನ ಜಾವ ಐದೂವರೆಗೆ ಗಿಂಗ್ ಹೋಗುತ್ತಿದ್ದ ನಾನು ಸಮುದ್ರ ತೀರವನ್ನು ುಪುತ್ತಿದ್ದೆ. ಅಲ್ಲಿ ಸ್ವಾಮಿ ಮಾಸ್ಟರ್ ನನಗೆ ಹಾರ್ಸ್ ಡಿಂಗ್‌ನ ಎಲ್ಲ ಟೆಕ್ನಿಕ್‌ಗಳನ್ನು ಸಿಕೊಡುತ್ತಿದ್ದರು. ಹಾರ್ಸ್ ರೈಡಿಂಗ್ ಗಿದ ನಂತರ ಜಿಮ್ನಾಸ್ಟಿಕ್ ಕಲಿಸಲು ದೊಯ್ಯುತ್ತಿದ್ದರು. ಹೀಗೆ ಬೆಳಗಿನ ವ ಐದಕ್ಕೆ ಪ್ರಾರಂಭವಾಗುತ್ತಿದ್ದ ನಿಂಗ್ ಹತ್ತು ಗಂಟೆಯ ತನಕ ೆದು, ಸಾಹಸದ ಹಲವಾರು ಜಲುಗಳನ್ನು ಕಲಿಸುತ್ತಿದ್ದರು.

ಅಂದಹಾಗೆ ಡ್ಯಾನ್ಸ್ ಮಾಸ್ಟರ್ ಲಾಸಂರವರಷ್ಟೇ, ಸ್ಟಂಟ್ ಮಾಸ್ಟರ್ ಮಿ ಕೂಡ ನನ್ನ ವೃತ್ತಿ ಜೀವನಕ್ಕೆ ಲವಾದ ಅಡಿಪಾಯ ಹಾಕಿದರು. ವರಿಬ್ಬರಿಗೆ ನಾನು ಸದಾ ಚಿರಋಣಿ.

ನನ್ನ ಮೊದಲ ಚಿತ್ರ 'ಆನಂದ್'ಗೆ ಸ್ವಾಮಿ ಾಸ್ಟರ್‌ರವರೇ ಸಾಹಸ ದೃಶ್ಯಗಳನ್ನು ಸಂಯೋಜಿ ಸರು. ಅವರು ಮದ್ರಾಸಿನಿಂದ ಇಪ್ಪತ್ತು ಜನ ್ಟಮುಟ್ಟಾದ ಫೈಟರ್‌ಗಳನ್ನು ಕರೆತಂದಿದ್ದರು. ಆದರೆ ್ಮ ಮೇಲೆ ಅವರಿಗೆ ಪ್ರೀತಿ ಮತ್ತು ಅಭಿಮಾನ ದ್ದರೂ ಸ್ಟಂಟ್ ಸೀನ್‌ಗಳಿಗೆ ಡ್ಯೂಪ್‌ಗಳನ್ನು ಬಳಸಿ ದು ಎಲ್ಲರೂ ಹೇಳಿದಾಗ ಅವರು ಅದನ್ನು ್ರೋಧಿಸಿದ್ದರು.

ನಾನು ಬಲ್ಡಿಂಗ್‌ನ ಮೇಲೆ ಜಂಪ್ ಮಾಡಲು ಯಾರಾಗಿ ನಿಂತೆ. ಪಕ್ಕದ ಬಲ್ಡಿಂಗ್‌ನಲ್ಲೆಲ್ಲಾ ಜನ ನ್ನು ವಾಚ್ ಮಾಡುತ್ತಾ ನಿಂತಿದ್ದರು. ಕೆಳಗಡೆ ್ಮ ಯೂನಿಟ್‌ನ ಹುಡುಗರು ಟೆನ್ಷನ್‌ನಿಂದ ನನ್ನನ್ನೇ ೋಡುತ್ತಿದ್ದರು. ಆಗ ನನ್ನ ಜೀವನದ ಪವಾಡವೊಂದು ಡೆದೇ ಹೋಯಿತು.

ನಿಜಕ್ಕೂ ಹೇಳುತ್ತೇನೆ, ಆ ಸಂದರ್ಭದಲ್ಲಿ ಆ ನನಗೆ ಎಲ್ಲಿಂದ ಬಂತು ಎಂಬುದು ಗೊತ್ತಿಲ್ಲ. ರೆ ಎರಡು ದಿನಗಳಲ್ಲಿ ಮಾಡಬೇಕಾದ ಈ ಹಸದ ದೃಶ್ಯಗಳನ್ನು ನಾನು ಕೇವಲ ಐದು ಟೆಗಳಲ್ಲಿ ಮುಗಿಸಿಬಿಟ್ಟೆ. ಹೀಗೆ ನಾನು ಮುಗಿಸಿ ್ಷಣ ಯೂನಿಟ್ ಹುಡುಗರೆಲ್ಲಾ ಚಪ್ಪಾಳೆ ತಟ್ಟಿದರೆ, ಮಿ ಮಾಸ್ಟರ್ ನನ್ನ ಬೆನ್ನು ತಟ್ಟಿದರು. ಆಗಲೇ ರಿಶಂಕರ್ "ಮೈ ಗಾಡ್, ಐ ಹ್ಯಾವ್ ನೆವರ್ ರ್ ಎನಿಬಡಿ ಜಂಪಿಂಗ್ ಲೈಕ್ ದಿಸ್....!" ಎಂದು ದ್ಗರಿಸಿದ್ದು ...

ಮೊದಲೇ ಹೇಳಿದಂತೆ, ಆ ದೃಶ್ಯಗಳನ್ನು ನಾನು ಗೆ ಮಾಡಿದೆ ಎಂದು ನನಗೆ ನೆನಪಿಲ್ಲ. ಯಾಕೆಂದರೆ ಷ್ಟೊಂದು ಅಪಾಯಕಾರಿ ಸನ್ನಿವೇಶಗಳನ್ನು ಯಾವುದೇ ಡ್ಯೂಪ್ ಇಲ್ಲದೇ ಒಂದೇ ಒಂದು ಟೇಕ್‌ನಲ್ಲಿ ನಾನು ಮುಗಿಸಿದ್ದೆ ಎಂದರೆ ಇವತ್ತು ನನಗೇ ನಂಬಲು ಸಾಧ್ಯವಾಗುತ್ತಿಲ್ಲ!

ಚಿತ್ರ ರಿಲೀಸ್ ಆದ ನಂತರ ಪ್ರೇಕ್ಷಕರು ಮತ್ತು ವಿಮರ್ಶಕರು ಫೈಟಿಂಗ್ ದೃಶ್ಯಗಳನ್ನು ಮೆಚ್ಚಿದರು. ಅದಕ್ಕಿಂತಲೂ ಮುಖ್ಯವಾಗಿ ತಮಿಳುನಾಡು ಮತ್ತು ಹಿಂದಿ ಚಿತ್ರರಂಗದಿಂದ ಈ ಫೈಟಿಂಗ್ ದೃಶ್ಯವನ್ನು ನೋಡಲಿಕ್ಕೋಸ್ಕರ ನಿರ್ದೇಶಕರುಗಳು ಬಂದಿದ್ದರು. ಕೆಲವು ನಿರ್ದೇಶಕರು ಅವರ ಚಿತ್ರಕ್ಕೆ ಅದೇ ಸ್ಥಳದಲ್ಲಿ ಅದೇ ತರಹದ ಸಾಹಸವನ್ನು ಸಂಯೋಜಿಸಬೇಕು ಎಂದೂ ನಿರ್ಧರಿಸಿದರು. ನನ್ನ ಆ ಫೈಟಿಂಗ್ ಅಷ್ಟೊಂದು ಪಾಪ್ಯುಲಾರಿಟಿ ಪಡೆದಿತ್ತು.



ಡ್ಯಾನ್ಸ್ ಮತ್ತು ಫೈಟಿಂಗ್ ಮೊದಲ ಮಿಂಚು!

> ಆ ದೃಶ್ಯಗಳನ್ನು ನಾನು ಹೇಗೆ ಮಾಡಿದೆ ಎಂದು ನನಗೆ ನೆನಪಿಲ್ಲ. ಯಾಕೆಂದರೆ ಅಷ್ಟೊಂದು ಅಪಾಯಕಾರಿ ಸನ್ನಿವೇಶಗಳನ್ನು ಯಾವುದೇ ಡ್ಯೂಪ್ ಇಲ್ಲದೇ ಒಂದೇ ಒಂದು ಟೇಕ್‌ನಲ್ಲಿ ನಾನು ಮುಗಿಸಿದ್ದೆ ಎಂದರೆ ಇವತ್ತು ನನಗೇ ನಂಬಲು ಸಾಧ್ಯವಾಗುತ್ತಿಲ್ಲ! ಚಿತ್ರ ರಿಲೀಸ್ ಆದ ನಂತರ ಪ್ರೇಕ್ಷಕರು ಮತ್ತು ವಿಮರ್ಶಕರು ಫೈಟಿಂಗ್ ದೃಶ್ಯಗಳನ್ನು ಮೆಚ್ಚಿದರು.

ನಿರೂಪಣೆ: ಸದಾಶಿವ ಶೆಣೈ

24



ಹ್ಯಾಟ್ರಿಕ್ ಹೀರೋನ ಹಾರ್ಟ್ ಬೀಟ್!

ಈ ಚಿತ್ರಕ್ಕೆ ಸಿನಿಮಾ ಎಕ್ಸ್‌ಪ್ರೆಸ್ ಪ್ರಶಸ್ತಿ ಬಂದಾಗ ಅದನ್ನು ಪಡೆಯಲು ಮದ್ರಾಸಿಗೆ ಹೋದೆವು. ಅವತ್ತು ಪ್ರಶಸ್ತಿಯನ್ನು ಸ್ವೀಕರಿಸಲು ನನ್ನ ಹೆಸರು ಕರೆದಾಗ ಬೆಳ್ಳಿ ಪರದೆಯ ಮೇಲೆ ಅದೇ ದೃಶ್ಯಗಳನ್ನು ಪ್ರದರ್ಶಿಸಿದರು. ಸಾಮಾನ್ಯವಾಗಿ ಪ್ರಶಸ್ತಿ ಪಡೆದ ಸಿನಿಮಾಗಳ ಹಾಡುಗಳನ್ನೋ ಅಥವಾ ಒಂದು ಸೆಂಟಿಮೆಂಟ್ ದೃಶ್ಯವನ್ನೋ ಪ್ರದರ್ಶಿಸುವುದು ವಾಡಿಕೆ. ಆದರೆ 'ಆನಂದ್' ಸಿನಿಮಾದ ಫೈಟಿಂಗ್ ದೃಶ್ಯವನ್ನು ನೋಡುತ್ತಿದ್ದಂತೇ ಅಲ್ಲಿದ್ದವರೆಲ್ಲ ಎದ್ದು ನಿಂತು ಚಪ್ಪಾಳೆ ಹೊಡೆದರು. ಇಂಗ್ಲಿಷ್‌ನಲ್ಲಿ "ಸ್ಟ್ಯಾಂಡಿಂಗ್ ಒವೇಶನ್" ಅಂತಾರಲ್ಲ, ಅಂತಹ ಒಂದು ಅಪರೂಪದ ಗೌರವವನ್ನು ಅಲ್ಲಿ ನೀಡಿದರು. ಅವತ್ತು ಕಮಲ್ ಹಾಸನ್ ಸರ್, ರಜನಿ ಸರ್, ಪ್ರಭು ಸರ್ ಸೇರಿದಂತೆ ದೊಡ್ಡ ದೊಡ್ಡ ನಟರು ಅಲ್ಲಿದ್ದರೆಂಬುದು ವಿಶೇಷ. ಅಂದು ಪ್ರಶಸ್ತಿಯನ್ನು ಸ್ವೀಕರಿಸಲು ನಾನು ವೇದಿಕೆಯ ಮೇಲೆ ಹೋದಾಗ ಮತ್ತೊಮ್ಮೆ ಜನರಿಂದ ಕರತಾಡನ. ಪ್ರಶಸ್ತಿಯನ್ನು ಸ್ವೀಕರಿಸಿ ಎಲ್ಲರಿಗೂ ನಮಸ್ಕರಿಸಿ ವೇದಿಕೆಯಿಂದ ಕೆಳಗಿಳಿದು ಬರುತ್ತಿದ್ದಂತೇ ಅಲ್ಲಿ ಸೇರಿದ್ದ ಜನರೆಲ್ಲಾ "ಒನ್ಸ್‌ಮೋರ್, ಒನ್ಸ್‌ಮೋರ್" ಎಂದು ಬೊಬ್ಬೆ ಹಾಕಿದರು. ಕೊನೆಗೆ ಅವರ ಒತ್ತಾಯಕ್ಕೆ ಮಣಿದು ಅಲ್ಲಿಯ ಸಂಘಟಕರು ನಾನು ಅಭಿನಯಿಸಿದ ಆ ಸಾಹಸ ದೃಶ್ಯವನ್ನು ಪುನಃ ಪರದೆಯ ಮೇಲೆ ಪ್ರದರ್ಶಿಸಿದರು. ಮೊದಲ ಚಿತ್ರದಲ್ಲೇ ಇಂತಹ ಒಂದು ಅಪರೂಪದ ಗೌರವವನ್ನು ಪಡೆದ ನಾನು ಆ ಕ್ಷಣವನ್ನು ಮರೆಯಲು ಸಾಧ್ಯವೇ ಇಲ್ಲ.

ಹಾನೆಸ್ಟ್ ಆಗಿ ಹೇಳಬೇಕೆಂದರೆ, ಮತ್ತೊಮ್ಮೆ ಅಂತಹ ಅದ್ಭುತವಾದ ಪ್ರದರ್ಶನವನ್ನು ನನಗೆ ಇಂದಿನ ತನಕ ಪುನಃ ನೀಡಲು ಸಾಧ್ಯವೇ ಆಗಿಲ್ಲ. 'ಆನಂದ್' ಚಿತ್ರದ 'ಟುವಿ ಟುವಿ' ಹಾಡು ಮತ್ತು ಈ ಸಾಹಸ ದೃಶ್ಯಗಳ ಮೂಲಕ ನಾನು ಎಲ್ಲರ ಮೆಚ್ಚುಗೆ ಪಡೆದಿದ್ದರಿಂದ ನನ್ನ ಆತ್ಮವಿಶ್ವಾಸ ವೃದ್ಧಿಯಾಯಿತು.


ಅಂತೂ ಇಂತೂ ಏಪ್ರಿಲ್ ತಿಂಗಳಲ್ಲಿ ನನ್ನ ಮೊದಲ ಸಿನಿಮಾದ ಚಿತ್ರೀಕರಣ ಸಂಪೂರ್ಣವಾಯಿತು. ಚಿತ್ರೀಕರಣ ಮುಗಿದ ನಂತರ ಮೇ 19ರಂದು ನನ್ನ ಮತ್ತು ಗೀತಾಳ ಮದುವೆಯಾಯಿತು. ಇಲ್ಲೊಂದು ವಿಶೇಷ ನೋಡಿ. ಫೆಬ್ರವರಿ 19ರಂದು ಚಿತ್ರದ ಮುಹೂರ್ತ, ಮೇ 19ರಂದು ಮದುವೆ, ಜೂನ್ 19ರಂದು ಚಿತ್ರ ಬಿಡುಗಡೆ. ಹೀಗೆ ನನ್ನ ವೃತ್ತಿ ಮತ್ತು ವೈಯಕ್ತಿಕ ಜೀವನದಲ್ಲಿ 19 ಬಹಳ ಮುಖ್ಯವಾದ ಪಾತ್ರವನ್ನು ನಿರ್ವಹಿಸಿದೆ!

ನನ್ನ ಮದುವೆಯಾದ ನಂತರ ನಾನು ನನ್ನ ಪಾತ್ರಕ್ಕೆ ಡಬ್ಬಿಂಗ್ ಮಾಡಲು ಹೊರಟು ನಿಂತೆ. ನನ್ನ ಧ್ವನಿ ಆಗ ತುಂಬಾ ಲೋ ಆಗಿದ್ದರಿಂದ ಕಂಠ ನೀಡುವಾಗ ಕೆಲವೊಂದು ಚಿಕ್ಕ ಪುಟ್ಟ ತಪ್ಪುಗಳಾಗುತ್ತಿರುವುದು ನನಗೆ ಗೊತ್ತಾಯಿತು. ನನ್ನ ಧ್ವನಿ ಏರಿಳಿತ ಸರಿಯಿಲ್ಲದಿದ್ದರೂ ಎಲ್ಲರೂ "ಇಟ್ಸ್ ಓಕೆ... ಇಟ್ಸ್ ನಾಟ್ ಬ್ಯಾಡ್" ಎಂದರು. ಹೀಗಾಗಿ ಸ್ವಲ್ಪ ದೋಶಗಳಿದ್ದರೂ ಕಂಠ ನೀಡಿ ನನ್ನ ಪಾತ್ರವನ್ನು ಮುಗಿಸಿಬಿಟ್ಟೆ.

ಇಷ್ಟೆಲ್ಲಾ ಆದಮೇಲೆ ನನ್ನ ಮದುವೆಗೆ ಸಂಬಂಧಪಟ್ಟಂತೆ ಕೆಲ ವಿಷಯಗಳನ್ನು ಇಲ್ಲಿ ಹೇಳಲೇಬೇಕು. ನನ್ನ ಮದುವೆಯ ದಿನ ಅಪ್ಪಾಜಿ ಮದುವೆ ಊಟವನ್ನು ಮಾಡಲಿಲ್ಲ ಎಂದರೆ ನೀವು ನಂಬುತ್ತೀರಾ? ಇದು ನಿಜ. ಅವರು ಅಂದು ಮದುವೆ ಮಂಟಪದ ಬದಲಿಗೆ ಹೋಟೇಲಿಗೆ ಹೋಗಿ ಊಟ ಮಾಡಿದ್ದರು. ಯಾಕೆ ಗೊತ್ತಾ? ಆ ಕಾರಣವನ್ನು ಮುಂದಿನ ವಾರ ಖಂಡಿತವಾಗಿಯೂ ಹೇಳುತ್ತೇನೆ....

(ಮುಂದುವರೆಯುತ್ತದೆ)

ಉಪ್ಪಿಗೆ ಹೊಟ್ಟೆಕಿಚ್ಚು ಹುಟ್ಟಿಸುವ ಅಮಿತಾಬ್ ಡ್ರೆಸ್!



ಈ ಚಿತ್ರದಲ್ಲಿರುವ ಅಮಿತಾಭ್ ಬಚ್ಚನ್‌ರವರ ವೇಷ-ಭೂಷಣ ನೋಡಿ. ತಲೆ ಮೇಲೊಂದು ಟೋಪಿ, ಟೋಪಿಯ ಪಕ್ಕದಲ್ಲಿ ಕಾಗೇ ಪುಕ್ಕ, ಅದರಡಿಯಿಂದ ಉದ್ದನೆ ಬಿಳಿ ಕೂದಲು, ಕತ್ತಿನ ಸುತ್ತಲು ಸರಗಳು, ಬೆರಳ ಮೇಲೆ ಉಂಗುರಗಳು... ಇತ್ತೀಚೆಗೆ ಫ್ರಾನ್ಸ್ ದೇಶದ ಅತಿಗಣ್ಯ ಪ್ರಶಸ್ತಿ ಪಡೆದ ಹಿರಿಯ ನಟ ಬಚ್ಚನ್‌ರವರಿಗೆ ಜೋಕರ್‌ನಂತಹ ಈ ವೇಷ ತೊಡಿಸಿದ್ದು 'ಜೂಮ್ ಬರಾಬರ್ ಜೂಮ್' ಎಂಬ ಹಿಂದಿ ಚಿತ್ರದ ನಿರ್ದೇಶಕ. ಭಾರತ ಚಿತ್ರರಂಗ ಕಂಡ ಅತಿ 'ಸ್ಟೈಲಿಷ್' ನಟರಾದ ಅಮಿತಾಭ್ ಬಚ್ಚನ್‌ರವರನ್ನು ಇಂತಹ ಉಡುಪಿನಲ್ಲಿ ನೋಡಿ ಅವರ ಅಭಿಮಾನಿಗಳಿಗೆ ಬೇಸರವಾಗಬಹುದು. ಆದರೆ ನಮ್ಮ ಉಪೇಂದ್ರ ಮಾತ್ರ ಈ ಕ್ರೇಜಿ ಡ್ರೆಸ್ ನೋಡಿ ಹೊಟ್ಟೆಕಿಚ್ಚು ಪಡುವುದು ಗ್ಯಾರಂಟಿ. ಏನಂತೀರಿ?

* * * * *

ಸುಮಾರು ಎರಡು ದಶಕಗಳ ಹಿಂದೆ ರಮೇಶ್ ಸಿಪ್ಪಿಯವರು ತಮ್ಮ 'ಶೋಲೆ' ಚಿತ್ರದಲ್ಲಿ ಅಮಿತಾಭ್ ಬಚ್ಚನ್‌ರವರಿಗೆ 'ಅಜಯ್' ಪಾತ್ರ ನೀಡಿದಾಗ, "ಇಲ್ಲ ನನಗೆ ಗಬ್ಬರ್ ಪಾತ್ರ ಕೊಡಿ" ಎಂದಿದ್ದರಂತೆ ಬಚ್ಚನ್‌ರವರು. ಆದರೆ "ಆ ಪಾತ್ರಕ್ಕೆ ಆಮ್ಜದ್ ಖಾನ್ ಸರಿ, ನೀವು ಅಜಯ್ ಪಾತ್ರವನ್ನೇ ಮಾಡಿ" ಎಂದಿದ್ದರಂತೆ ನಿರ್ದೇಶಕ ಸಿಪ್ಪಿ.

ಆದರೆ ಈಗ ಇಪ್ಪತ್ತು ವರ್ಷಗಳ ನಂತರ ಅಮಿತಾಭ್‌ರವರ ಆಸೆ ಈಡೇರಿದೆ. ಏಕೆಂದರೆ ಈಗ ರೀಮೇಕ್ ಆಗುತ್ತಿರುವ 'ಶೋಲೆ'ಯಲ್ಲಿ ಅವರು ಗಬ್ಬರ್ ಪಾತ್ರ ನಿರ್ವಹಿಸುತ್ತಿದ್ದಾರೆ.

ವಿಚಿತ್ರವೆಂದರೆ, ಗಬ್ಬರ್ ಪಾತ್ರದಲ್ಲಿ ಅಮಿತಾಭ್ ಹೇಗೆ ನಟಿಸಿದ್ದಾರೆ ಎಂಬ ಕುತೂಹಲ ಜನರಿಗಿದ್ದರೆ, ಅವರಿಗೆ ಮತ್ತೊಂದು ರೀತಿಯ ಕುತೂಹಲವಿದೆ. ಅದೇನೆಂದರೆ ತಾವು ಇಪ್ಪತ್ತು ವರ್ಷಗಳ ಹಿಂದೆ ನಟಿಸಿದ 'ಡಾನ್' ಸಿನಿಮಾ ಕೂಡ ಈಗ ರೀಮೇಕ್ ಆಗುತ್ತಿದ್ದು, ಅದರಲ್ಲಿ ತಾವು ಮಾಡಿದ್ದ ಪಾತ್ರವನ್ನು ಈಗ ಶಾರೂಖ್‌ಖಾನ್ ಹೇಗೆ ಮಾಡಿದ್ದಾರೆಂಬ ಕುತೂಹಲ!

ಆಮ್ಜದ್ ಖಾನ್ ಪಾತ್ರದಲ್ಲಿ ಅಮಿತಾಭ್ ಅವರ ಪಾತ್ರದಲ್ಲಿ ಶಾರೂಖ್ ಖಾನ್... ಇದೊಳ್ಳೆ ಮ್ಯೂಸಿಕಲ್ ಚೇರ್ ಆಟದಂತಿದೆಯಲ್ಲಾ?

* * * * *



ಅಂದಹಾಗೆ 'ಡಾನ್' ಚಿತ್ರದಲ್ಲಿ ಮೂರು ನಟನಾಮಣಿಗಳು ಪೈಪೋಟಿ ನಡೆಸಿದ್ದಾರೆ. ಕರೀನಾ ಕಪೂರ್ ಎಂಬ ಸುಂದರಾಂಗಿ 'ಹೇ ಮೇರಾ ದಿಲ್' ಹಾಡಿನಲ್ಲಿ ಮಿಂಚಿದ್ದರೆ ಪ್ರಿಯಾಂಕ ಚೋಪ್ರಾ ಎಂಬ ಮಾಜಿ ಮಿಸ್ ಇಂಡಿಯಾ 'ಮೇ ತೂ ಡಾನ್' ಎಂಬ ಹಾಡಿನಲ್ಲಿ ಚೆನ್ನಾಗಿ ಕುಣಿದಿದ್ದಾಳಂತೆ. ಇವರಿಬ್ಬರ ನಡುವೆ ತಾನೇನು ಕಡಿಮೆ ಇಲ್ಲ ಎಂಬಂತೆ ಇಶಾ ಕೊಪ್ಪಿಕರ್ ಎಂಬ ಐಟಂ ಬೆಡಗಿ ಕೂಡ 'ಆಜ್ ಕಿ ರಾತ್' ಎಂಬ ಹಾಡಿನಲ್ಲಿ ಉಕ್ಕ ಭರಿಸುವಷ್ಟು ಮೈ ಚಳಿ ಬಿಟ್ಟು ಡ್ಯಾನ್ಸ್ ಮಾಡಿದ್ದಾಳಂತೆ. "ಈ ಮೂವರ ಪೈಪೋಟಿಯಲ್ಲಿ ಯಾರು ಗೆಲ್ಲುತ್ತಾರೆ ಎಂಬ ವಿಷಯ ಬದಿಗಿರಲಿ, ನಾನು ಮಾತ್ರ ಡಾನ್" ಎಂದು ಬೀಗುತ್ತಿದ್ದಾನಂತೆ ಚಿತ್ರದ ಹೀರೋ ಶಾರೂಖ್‌ಖಾನ್!

R.B.P. LANKESH, Kannada Weekly Price Rs. 10/- 25-10-2006 RNI No. KARKAN2005/14648 Regd.No.KA/BG(S)/2036/2005

'ಅಕ್ಕ'ದಲ್ಲಿ ಪಲ್ಲವಿಯ ಪಲ್ಲವಿ

-ಶೆಣೈ



"ನಾನು ಈ ಹಿಂದೆ ಇಂಗ್ಲೆಂಡ್ ಮತ್ತು ಬ್ರೆಜಿಲ್‌ಗಳಲ್ಲಿ ಸಂಗೀತ ಕಾರ್ಯಕ್ರಮ ನೀಡಿದ್ದರೂ ಇದು ನನ್ನ ಮೊದಲ ಅಮೆರಿಕ ಪ್ರವಾಸವಾಗಿತ್ತು. ಪ್ರವಾಸಕ್ಕೆ ಹೊರಡುವ ಮುನ್ನ ಒಬ್ಬೊಬ್ಬರು ಒಂದೊಂದು ಥರ ಹೇಳಿದರೂ ನನಗಂತೂ ನಿಜಕ್ಕೂ ಅಮೆರಿಕ ಪ್ರವಾಸ ಅತ್ಯಂತ ಆಹ್ಲಾದಕರವಾಗಿತ್ತು" ಎನ್ನುತ್ತಾರೆ ರಂಗಕರ್ಮಿ ಎ.ಎಸ್. ಮೂರ್ತಿ ಅವರ ಮೊಮ್ಮಗಳು ಎಂ.ಡಿ. ಪಲ್ಲವಿ.

ಈಕೆ ಅಂದು ಬಾಲ್ಟಿಮೋರದ ನಾಲ್ಕನೇ ವಿಶ್ವ ಕನ್ನಡ ಸಮ್ಮೇಳನದಲ್ಲಿ ಹಾಡಲು ನಿಂತಾಗ ಅರ್ಧ ಸಭಾಂಗಣ ಖಾಲಿಯಾಗಿತ್ತು, ಇನ್ನರ್ಧ ಜನ ಹೊರಡಲು ಸಿದ್ದರಾಗಿದ್ದರು. ಆಗ ಆರಂಭವಾಯಿತು ಪಲ್ಲವಿ ಮತ್ತು ಆಕೆಯ ತಂಡದ ರಾಗ... ತಾಳ.... ಮೇಳ.... ಹೊರಟು ನಿಂತಿದ್ದವರು ಸೈಲೆಂಟಾಗಿ ಕುಳಿತರು. ಹೊರಗೆ ಹೋದವರು ಒಳಗೆ ಬಂದರು. ಅಂತಹ ಅದ್ಭುತವಾದ ಶಕ್ತಿ ಆಕೆಯ ಹಾಡಿನಲ್ಲಿತ್ತು.

ಆಕೆಯ ಗಾಯನ ಮುಗಿದ ನಂತರ ಅಮೆರಿಕನ್ನಡಿಗರ ಕೆಲವು ಕಾಮೆಂಟ್ಸ್‌ಗಳು ತಮಾಷೆಯಾಗಿತ್ತು. "ತೆಳ್ಳಗೆ ಇರುವ ಈ ಕಪ್ಪು ಹುಡುಗಿ ಇಷ್ಟೊಂದು ಸುಮಧುರವಾಗಿ ಹಾಡುತ್ತಾಳೆ ಎಂದು ನಮಗೆ ಗೊತ್ತೇ ಇರಲಿಲ್ಲ ನೋಡಿ" ಎಂದು ಆಶ್ಚರ್ಯ ವ್ಯಕ್ತಪಡಿಸಿದರು. ಹುಡುಗಿಯ ಬಣ್ಣಕ್ಕೂ, ಆಕೆಯ ಕಂಠಕ್ಕೂ ಅದು ಹೇಗೆ ಸಂಬಂಧ ಕಲ್ಪಿಸಿದರೋ? ಅವರಿಗೇ ಗೊತ್ತು!

ಪಲ್ಲವಿ ಹೋದಲ್ಲೆಲ್ಲ ಕ್ಲಿಕ್ ಆಗಲು ಎರಡು ಕಾರಣಗಳಿವೆ. ಆಕೆ ಆಯ್ಕೆ ಮಾಡಿಕೊಳ್ಳುವ ಹಾಡುಗಳು ಎಲ್ಲರನ್ನೂ ಮೋಡಿ ಮಾಡುವಂತಿರುತ್ತವೆ. ಅನಂತಸ್ವಾಮಿಯವರ 'ಎದೆತುಂಬಿ ಹಾಡಿದೆನು... ಅಂದು ನಾನು..', ರತ್ನ ಮಾಲಾಪ್ರಕಾಶರ 'ಯಾವ ಮೋಹನ ಮುರಳಿ ಕರೆಯಿತೋ....', ಕೆ.ಎಸ್.ಎನ್. ಅವರ 'ರಾಯರು ಬಂದರು ಮಾವನ ಮನೆಗೆ...', ಕೆ.ಎಸ್. ನಿಸಾರ್ ಅಹಮದ್‌ರ 'ಜೋಗದ ಸಿರಿ ಬೆಳಕಿನಲ್ಲಿ'..... ಈ ಎಲ್ಲ ಹಾಡುಗಳನ್ನು ಹಾಡಿದಾಗ ಅಮೆರಿಕನ್ನಡಿಗರು ಮೈ ಮರೆತು ಚಪ್ಪಾಳೆ ತಟ್ಟಿದರು. ಇವುಗಳ ಮಧ್ಯೆ ಸಿ. ಅಶ್ವಥ್ ಹಾಡುವ 'ಶ್ರಾವಣ ಬಂತೂ ಶ್ರಾವಣ' ಹಾಡನ್ನೂ ಹಾಡಿ ಎಲ್ಲ ಅಚ್ಚರಿ ಪಡಿಸಿದರು. ಸಾಧಾರಣವಾಗಿ ಈ ಹಾಡನ್ನು ಹೆಣ್ಣು ಮಕ್ಕ ಹಾಡುವುದಿಲ್ಲ. ಇನ್ನೊಂದು ವಿಶೇಷವೆಂದರೆ 'ಪಕ್ಕದ್ಮನೆ ಶಾರದಮ್ಮ ಏಕಾದಶಿ ಉಪವಾಸ.. ಎಲ್ಲೋ ಸ್ವಲ್ಪ ತಿಂತಾಳಷ್ಟೆ ಉಪ್ಪಿಟ್ಟು, ಅವ ಪಾಯಸ...' ಎಂಬ ಹಾಡನ್ನು ಅಲ್ಲಿದ್ದ ಜನ ತಿಂದಿ ತಿಂದಷ್ಟೇ ಸಂತಸದಿ ಸವಿದರು. ಹೀಗೆ ಹಾಡುತ್ತಿದ್ದಾಗ ಈಕೆಯನ್ನು "ಹೆಣ್ಣು ಅಶ್ವಥ್" ಎಂ ಅಲ್ಲಿದ್ದ ಕೆಲವರು ಕೊಂಡಾಡಿದರು. ಇದನ್ನು ಅಶ್ವಥ್ ಹೇಗೆ ಸ್ವೀಕರಿಸುತ್ತಾರೆ ಗೊತ್ತಿಲ್ಲ.

ಇವುಗಳ ಜೊತೆಗೆ ಈಕೆಯ ಜೊತೆ ಪತಿ ಅರುಣ್ ಮತ್ತು ಶಬ ಸೇರಿ ಪಾಶ್ಚಿಮಾತ್ಯ ಸಂಗೀತದ ಫ್ಯೂಷನ್ ತುಣುಕುಗಳನ್ನು ನೀಡುತ್ತಿದ್ದ ಹೀಗೆ ಒಂದೆಡೆ ಭಾವಗೀತೆಗಳು, ಇನ್ನೊಂದೆಡೆ ಫ್ಯೂಷನ್ ಸಂಗೀತ... ಮಿಶ್ರಣದಿಂದ ಎಲ್ಲ ವಯೋಮಾನದವರ ಮೆಚ್ಚುಗೆ ಗಳಿಸಿತು ಇವರ ತಂ

'ಅಕ್ಕ' ಸಮ್ಮೇಳನದ ನಂತರ ಇವರು ನಲವತ್ತೂರು ದಿನಗಳ ಕಾ ಅಮೆರಿಕ ಪ್ರವಾಸ ಮಾಡಿ ಸುಮಾರು ಮೂವತ್ತು ಕಾರ್ಯಕ್ರಮಗಳ ನೀಡಿ ಈಗ ವಾಪಸ್ಸು ಬಂದಿದ್ದಾರೆ. "ಈ ಮೂವತ್ತು ಕಾರ್ಯಕ್ರಮ ನಮಗೆ ಆನಂದ ನೀಡಿವೆ. ಈ ಕಾರ್ಯಕ್ರಮ ನೀಡಲು ಅರವತ್ತು ಬ ವಿಮಾನ ಹತ್ತಿ ಇಳಿದಿದ್ದು ಮಾತ್ರ ಪ್ರಯಾಸವಾಗಿತ್ತು" ಎಂದು ಹೇಳ ಪಲ್ಲವಿ ಇದರೊಂದಿಗೆ ಒಂದು ಸ್ಪಷ್ಟೀಕರಣವನ್ನೂ ನೀಡಿದರು. "ನ ಮೂರು ಜನರ ಕಾರ್ಯಕ್ರಮಕ್ಕೆ ಸರ್ಕಾರವಾಗಲೀ, ಅಕ್ಕ ಸಂಸ್ಥೆಯವರಾಗ ಒಂದೇ ಒಂದು ಪೈಸೆಯನ್ನು ನೀಡಿಲ್ಲ. ನಮ್ಮ ಸ್ವಂತ ಹಣದಲ್ಲೇ ನಾ ಹೋಗಿ ಬಂದಿದ್ದೇವೆ" ಎಂದರು. "ನಾನು ಕೂಡಾ ಅಷ್ಟೇ" ಎಂ ಧ್ವನಿಗೂಡಿಸಿದೆ.



ರಕ್ಷಿತಾ ಔಟ್- ರಮ್ಯಾ ಇನ್!

ಕವಿತಾ ಲಂಕೇಶ್‌ರ 'ತನನಂ ತನನಂ' ಚಿತ್ರದಲ್ಲಿ ಒಟ್ಟಿಗೆ ನಟಿಸಿದ ನಂತರವೂ ರಕ್ಷಿತಾ ಮತ್ತು ರಮ್ಯಾ ನಡುವಿನ ಪೈಪೋಟಿ, ಸ್ಪರ್ಧೆ ನಿಂತಿಲ್ಲ.

ಇದಕ್ಕೆ ಲೇಟೆಸ್ಟ್ ಉದಾಹರಣೆ ಎಂದರೆ ಟಿ.ಎನ್. ಸೀತಾರಾಂ ಅವರು ಡಿಸೆಂಬರ್‌ನಲ್ಲಿ ಆರಂಭಿಸಲಿದ್ದ ಚಿತ್ರಕ್ಕೆ ನಾಯಕಿಯಾಗಿ ಒಂದು ವರ್ಷದ ಹಿಂದೆಯೇ ರಕ್ಷಿತಾ ಆಯ್ಕೆಯಾಗಿದ್ದಳು. ಆದರೆ ಈಗ ಕಾಲಚಕ್ರ ಉರುಳಿರುವುದರಿಂದ ಚಿತ್ರದ ನಾಯಕಿಯೂ ಬದಲಾಗಿದ್ದಾಳೆ. ರಕ್ಷಿತಾ ಆ ಚಿತ್ರದಿಂದ ಹೊರ ಬಂದಿದ್ದಾಳೆ. ಆ ಸ್ಥಾನವನ್ನು ರಮ್ಯಾ ತುಂಬುತ್ತಿದ್ದಾಳೆ. ಇದು ಆರ್ಟ್ ಸಿನಿಮಾನೋ ಅಥವಾ ಕಮರ್ಷಿಯಲ್ ಸಿನಿಮಾನೋ ಎಂಬುದು ಸ್ಪಷ್ಟವಾಗಿಲ್ಲದಿದ್ದರೂ, ಇದೊಂದು ಹೀರೋಯಿನ್ ಓರಿಯಂಟೆಡ್ ಸಿನಿಮಾ ಎಂಬುದು ಮಾತ್ರ ಖಚಿತ. ಇಂಥ ಸಿನಿಮಾವನ್ನು ರಕ್ಷಿತಾ ಯಾಕೆ ರಿಜೆಕ್ಟ್ ಮಾಡಿದಳು ಎಂಬ ಪ್ರಶ್ನೆಗೆ ಪ್ರೇಮ್ ಉತ್ತರಿಸಬಲ್ಲರೇ?




ಹ್ಯಾಟ್ರಿಕ್ ಮೀನಾ

ಚಿತ್ರರಂಗದಲ್ಲಿ ನಾಯಕನಟರು ಹ್ಯಾಟ್ರಿಕ್ ಬಾರಿಸುವುದು ತುಂಬಾ ಕಾಮನ್. ಆದರೆ ನಾಯಕಿಯರಿಗೆ ಅಂತಹಾ ಅವಕಾಶ ಸಿಗುವುದು ತುಂಬಾ ಕಡಿಮೆ. ಅಂತಹದರಲ್ಲಿ ಪರಭಾಷಾ ನಾಯಕಿ ಮೀನಾ ಕನ್ನಡದಲ್ಲಿ ಹ್ಯಾಟ್ರಿಕ್ ಬಾರಿಸುವ ಮೂಲಕ ಅಚ್ಚ ಕನ್ನಡತಿಯರಾದ ರಮ್ಯ ಮತ್ತು ರಕ್ಷಿತಾಗೆ ಕೊಕ್ ನೀಡಿದ್ದಾರೆ.

ನಟ-ನಿರ್ದೇಶಕ ಸುದೀಪ್ ಅವರ ಸಂಸ್ಥೆಯ ಮೂರೂ ಚಿತ್ರಗಳಿಗೆ ಮೀನಾ ನಾಯಕಿಯಾಗಿರುವುದೇ ಒಂದು ವಿಶೇಷ. 'ಸ್ವಾತಿ ಮುತ್ತು' ಚಿತ್ರದಿಂದ ಪ್ರಾರಂಭವಾದ ಸುದೀಪ್-ಮೀನಾ ಜೋಡಿ, 'ಮೈ ಆಟೋಗ್ರಾಫ್'ನಲ್ಲೂ ಮುಂದುವರೆದಿತ್ತು. ಇದೀಗ ಸುದೀಪ್ ರವರ ಮುಂದಿನ ಚಿತ್ರ 'ನಂ. 72, ಶಾಂತಿನಿವಾಸ'ಕ್ಕೂ ಮೀನಾಳೇ ನಾಯಕಿ.

ಕನ್ನಡದ ಹುಡುಗಿಯರೊಂದಿಗೆ ಸುದೀಪ್ ಗಲಾಟೆ ಮಾಡಿಕೊಂಡಿದ್ದರಿಂದ ಈಗ ಮೀನಾಳಿಗೆ ಗಂಟುಬಿದ್ದಿರ ಬಹುದೇ? ಎಂದು ಗಾಂಧಿನಗರ ಮಾತನಾಡುತ್ತಿರುವುದು ಮಾತ್ರ ಸುಳ್ಳು!



ರಾಘಣ್ಣನ ಪುತ್ರ ಬಂದ!

ರಾಜ್‌ಕುಮಾರ್ ಮೊಮ್ಮಗ ವಿನಯ್ ರಾಜ್‌ಕುಮಾರ್ ಮುಂದಿನ ವರ್ಷ ನಾಯಕ ನಟನಾಗುವ ಸಾಧ್ಯತೆಗಳು ಕಂಡುಬರುತ್ತಿವೆ. ಮೊನ್ನೆ ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದಾಗ ಸ್ವತಃ ರಾಘವೇಂದ್ರ ರಾಜ್‌ಕುಮಾರ್‌ರವರೇ ಈ ವಿಷಯವನ್ನು ಹೇಳಿದರು. ಅವರ ಹಿರಿಯ ಪುತ್ರನೇ ಈ ವಿನಯ್.

"ಆತನಿಗೆ ಸಿನಿಮಾದಲ್ಲಿ ನಟಿಸಬೇಕೆಂಬ ಆಸೆ ಇದ್ದಂತೆ ಕಾಣಿಸುತ್ತಿದೆ. ಅದಕ್ಕೋಸ್ಕರ ವ್ಯಾಯಾಮ ಮಾಡಲು ಶುರು ಮಾಡಿದ್ದಾನೆ. ಆದರೆ ನನ್ನ ಬಳಿ ಎಂದೂ ನಟನಾಗಬೇಕೆಂಬ ಆಸೆಯನ್ನು ತೋರ್ಪಡಿಸಿಲ್ಲ. ಆದರೆ ಆತನ ತಂದೆಯಾಗಿ ನನಗೆ ಆತನ ಮನೋಸ್ಥಿತಿ ಗೊತ್ತು" ಎಂದು ತುಂಬ ಜಾಣ್ಮೆಯಿಂದ ಉತ್ತರಿಸಿದರು ರಾಘಣ್ಣ. ಅಂತೂ ರಾಜ್‌ಕುಮಾರ್ ಕುಟುಂಬದ ನಾಲ್ಕನೇ ತಲೆಮಾರಿನ ಕುಡಿ ಬಣ್ಣದ ಲೋಕಕ್ಕೆ ಕಾಲಿಡಲು ಅಣಿಯಾಗಿದೆ.



'ಅಆಇಈ' ಗೊತ್ತಿಲ್ಲದವರು

ಈ ಸಂದೇಶ್ ನಾಗರಾಜ್ ಮತ್ತು ನಿರ್ದೇಶಕ ನಂಜುಂಡೇಗೌಡರಿಗೆ ಏನಾಗಿದೆಯೋ ಗೊತ್ತಿಲ್ಲ. ಸುಮಾರು ಆರು ತಿಂಗಳ ಹಿಂದೆ ಇವರಿಬ್ಬರು 'ಅ ಆ ಇ ಈ' ಸಿನಿಮಾದ ಪ್ರದರ್ಶನವನ್ನು ಬಾದಾಮಿ ಹೌಸ್‌ನಲ್ಲಿ ಪತ್ರಕರ್ತರು ಮತ್ತು ಬುದ್ಧಿ ಜೀವಿಗಳಿಗೆ ಏರ್ಪಡಿಸಿದ್ದರು. ಅವತ್ತು ಒಂದು ಸಂವಾದ ಕಾರ್ಯಕ್ರಮ ಕೂಡ ನಡೆದಿತ್ತು.

ಈಗ ಮತ್ತೊಮ್ಮೆ ಅದೇ ಬಾದಾಮಿ ಹೌಸ್‌ನಲ್ಲಿ ಮತ್ತೊಮ್ಮೆ ಅದೇ ಚಿತ್ರದ ಪ್ರದರ್ಶನ ಮತ್ತು ಸಂವಾದವನ್ನು ಏರ್ಪಡಿಸಿದ್ದಾರೆ. ಮತ್ತೆ ಅದೇ ಪತ್ರಕರ್ತರಿಗೆ ಮತ್ತು ಬುದ್ಧಿಜೀವಿಗಳಿಗೆ!

ಇವರು ಸಿನಿಮಾ ಮಾಡಿರುವುದು ಪ್ರೇಕ್ಷಕರಿಗೋ ಅಥವಾ ಬುದ್ಧಿಜೀವಿಗಳಿಗೋ ಎಂಬ ಗೊಂದಲ ಹುಟ್ಟಿಕೊಂಡಿದೆ. ಸಂದೇಶ್ ನಾಗರಾಜ್‌ರವರಿಗೆ ಒಂದು ಕಿವಿ ಮಾತು: ಬರಿ ಸಂವಾದ ಮತ್ತು ಹೊಗಳಿಕೆಯಲ್ಲಿ ಕಾಲ ಕಳೆಯುವ ಬದಲು ಈ ಚಿತ್ರದ ಬಿಡುಗಡೆಗೆ ಕೊಂಚ ಮಟ್ಟಿಗಾದರೂ ಪ್ರಯತ್ನಿಸಿ

ಒಂದೆಡೆ ಸಿನಿಮಾ ನಿರ್ಮಾಣವೇ ಬೇಡ ಎಂದು ಊಳಿಡುತ್ತಾ, ಮತ್ತೊಂದೆಡೆ ನಿರ್ಮಿಸಿದ ಸಿನಿಮಾವನ್ನು ರಿಲೀಸ್ ಮಾಡದೇ ಒದ್ದಾಡುತ್ತಿರುವ ಸಂದೇಶರಿಗೆ ಏನೆನ್ನಬೇಕು?



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Est...